Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ-17	ಸಂಚಿಕೆ-6	ಫೆಬ್ರವರಿ 6-12, 2023	ಪುಟ 16	ರೂ. 10/-
Volume-17	Issue-6	February 6-12, 2023	Pages:16	Price Rs 10/-



ಅಂಗನವಾಡಿ ಕಾರ್ಯಕರ್ತೆಯರ ಹೋರಾಟಕ್ಕೆ ಜಯ


ಫ್ರಾನ್ಸ್: ಪೆನ್ಶನ್ ಸುಧಾರಣೆಗಳ ವಿರುದ್ಧ ಪ್ರತಿಭಟನೆ



ಬಟ್ಟ ಬಯಲಾದ ಅದಾನಿ ಅಕ್ರಮ, ವಂಚನೆಯ ಲೋಕ

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.



ಭಾಗ–15

ಡಾ.ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಮಿಥ್ಯೆ 1: 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!

ಈ ಮಿಥ್ಯೆ ಎಂತಹ ಅರೆ ಸತ್ಯಗಳು ಮತ್ತು ಸುಳ್ಳುಗಳಿಂದ ಕೂಡಿದೆ ಎಂಬುದನ್ನು ಓದಿದ್ದೀರಿ. ಇದರಲ್ಲಿ, ತನ್ನ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರದಿದ್ದ, ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿದ್ದ ಸಾವರ್ಕರ್, ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರ ಯಾತನೆ ಕಂಡು ಕ್ಷಮಾಯಾಚನೆಯ ಅರ್ಜಿಯೊಂದಿಗೆ ಆರಂಭಿಸಿದ ಎರಡನೇ ಘಟ್ಟದಲ್ಲಿ ಬ್ರಿಟಿಷ್ ದೊರೆಗಳ' ಒಡೆದು ಆಳುವ ಯೋಜನೆಯಲ್ಲಿ ನೆರವಾದರು, ಹೇಗೆ ಧರ್ಮದ ಹೆಸರಿನಲ್ಲಿ ದೇಶಾತೀತ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿದ್ದರು, ರಾಷ್ಟ್ರೀಯ ಆಂದೋಲನ ಅಂಗೀಕರಿಸಿದ್ದ ತ್ರಿವರ್ಣ ಬಾವುಟದ ಕಡು ವಿರೋಧಿಸುತ್ತಲೇ ಇನ್ನೊಂದೆಡೆಯಲ್ಲಿ ಹೇಗೆ ಬ್ರಿಟಿಷರ ಬಂಟರಾಗಿದ್ದ ಹಿಂದೂ ರಾಜರುಗಳ ಮಹಾಸಮರ್ಥಕರಾಗಿದ್ದರು ಎಂಬುದನ್ನು ಓದಿದ್ದೀರಿ.

ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!

ಸಾವರ್ಕರ್ ನಿಜವಾಗಿಯೂ ಕ್ರಾಂತಿಕಾರಿಯಾಗಿದ್ದಾಗ ಅವರಿಗೆ ಬ್ರಿಟಿಷರು ಎರಡು ವಿಭಿನ್ನ ಪ್ರಕರಣಗಳಲ್ಲಿ ಒಟ್ಟು 50 ವರ್ಷ ಗಡೀಪಾರಿನ ಶಿಕ್ಷೆ ವಿಧಿಸಿದ್ದು ನಿಜ. ಆದರೆ ಅದರಲ್ಲಿ ಅವರು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದು ಕೇವಲ 10 ವರ್ಷ. ಆದರೆ ಸಾವರ್ಕರ್ ಅವರ ಸಮಕಾಲೀನರಲ್ಲಿ ಅವರಂತೆ ಮಾಫಿ ಪಡೆಯದ, ಮಾಫಿ ಕೇಳದ ಕ್ರಾಂತಿಕಾರಿಗಳ ದೊಡ್ಡ ಪಟ್ಟಿಯೇ ಸಿಗುತ್ತದೆ. ಅಂತಹ ಕರಾಳ ಪರಿಸ್ಥಿತಿಯಲ್ಲೂ ಹೋರಾಟ ಮುಂದುವರೆಸಿದ, ಜೈಲಿನಲ್ಲೇ ಅಕಾಲಿಕ ವೃದ್ಧರಾದವರ, ಹುತಾತ್ಮರಾದವರ ದೊಡ್ಡ ಪಟ್ಟಿಯೇ ಇದೆ. ಅಂಥಹ ಒಬ್ಬರ ಹೆಸರೂ ಸಾವರ್ಕರ್ ಭಕ್ತರಿಗೆ ಗೊತ್ತಿರಲು ಸಾಧ್ಯವಿಲ್ಲ. ಅಂಥಹ ಕೆಲವು ಸಾಹಸಿಗಳನ್ನು ಲೇಖಕರು ಇಲ್ಲಿ ನೆನಪಿಸಿಕೊಂಡಿದ್ದಾರೆ.

ವಸಾಹತುಶಾಹಿ ಆಳರಸರ ವಿರುದ್ಧ ಸೆಟೆದು ನಿಂತ ವೀರ ಕ್ರಾಂತಿಕಾರಿಗಳು

ಬಾಬಾ ಗುರ್‌ಮುಖ್ ಸಿಂಗ್



ಇವರು ಲಾಹೋರ್ ಪಿತೂರಿ ಪ್ರಕರಣದಲ್ಲಿ ಮೊದಲ ಬಾರಿಗೆ ಶಿಕ್ಷೆಗೊಳಗಾಗಿ 1916 ರಲ್ಲಿ ಅಂಡಮಾನಿನ ಸೆಲ್ಯುಲರ್ ಜೈಲಿಗೆ ಬಂದರು. ಬಾಬಾ ಅವರ ವೀರೋಚಿತ ಸಾಹಸಗಳ ಬಗ್ಗೆ ಮಾನಿನಿ ಹೀಗೆ ವಿವರಿಸುತ್ತಾರೆ:

ಡಿಸೆಂಬರ್ 1919 ರಲ್ಲಿ ಕೆಲವು ಆಯ್ದ ಖೈದಿಗಳಿಗೆ ದೊರೆಯ ಕ್ಷಮಾದಾನ ಘೋಷಣೆಯಾದಾಗ ಗುರ್‌ಮುಖ್ ಸಿಂಗ್ ಅವರನ್ನು ಭಾರತದ ಪ್ರಧಾನ ಭೂಭಾಗಕ್ಕೆ ಕಳಿಸಿಕೊಡುತ್ತಾರೆ, ಆದರೆ ಅವರು ಬಂಧನದಿಂದ ತಪ್ಪಿಸಿಕೊಂಡು ಪರಾರಿಯಾಗುವಲ್ಲಿ ಯಶಸ್ವಿಯಾಗುತ್ತಾರೆ. ಕರಿ ನೀರಿನ ಭೀಕರ ಶಿಕ್ಷೆಯಿಂದ ವಿಚಲಿತರಾಗದ ಬಾಬಾ ರಾಷ್ಟ್ರೀಯ ವಿಮೋಚನಾ ಚಳವಳಿಯಲ್ಲಿ ಭಾಗವಹಿಸುವುದನ್ನು ಮುಂದುವರಿಸುತ್ತಾರೆ. 1937 ರಲ್ಲಿ ಬಂಧಿಸಲ್ಪಟ್ಟ ಅವರನ್ನು ಮತ್ತೆ ಅಂಡಮಾನಿನ ಸೆಲ್ಯುಲರ್ ಜೈಲಿಗೆ ಹಾಕುತ್ತಾರೆ. ಅಲ್ಲಿ ಅವರು ಆಗಿನ್ನೂ ರೂಪುಗೊಳ್ಳುತ್ತಿದ್ದ ವೈಜ್ಞಾನಿಕ ಸಮಾಜವಾದದ ವಿಚಾರಗಳ ಬಗ್ಗೆ 'ಕ್ರಾಂತಿಕಾರಿ ಭಯೋತ್ಪಾದಕ'ರಲ್ಲಿ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ಪಂಡಿತ್ ರಾಮರಕ್ಷ



ಬರ್ಮಾ ಪಿತೂರಿ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿ ಸೆಲ್ಯುಲರ್ ಜೈಲಿಗೆ ಬಂದ ಕ್ರಾಂತಿಕಾರಿಗಳಲ್ಲಿ ಪಂಡಿತ್ ರಾಮರಕ್ಷ ಒಬ್ಬರು. ಹೊಸದಾಗಿ ಜೈಲಿಗೆ ಬಂದವರು ಜನಿವಾರ ತೊಟ್ಟಿದ್ದರೆ ಅದನ್ನು ತೆಗೆದುಹಾಕುವುದು ಕಡ್ಡಾಯವಾಗಿತ್ತು. ಆದರೆ ರಾಮರಕ್ಷ ಅವರು ಆ ನಿಯಮ ಅನುಸರಿಸಲು ನಿರಾಕರಿಸಿದರು. ಬಲವಂತದಿಂದ ಜನಿವಾರ ತೆಗೆದುಹಾಕಿದಾಗ, ಉಪವಾಸ ಮುಷ್ಕರ ಮಾಡುವುದರ ಮೂಲಕ ಪ್ರತಿಭಟಿಸಿದರು. ಸತತ ಮೂರು ತಿಂಗಳ ಕಾಲ ಮುಷ್ಕರ ಮುಂದುವರಿಸಿದ ಅಂತಿಮವಾಗಿ ಜನಿವಾರವನ್ನು ಹಿಂತಿರುಗಿಸಬೇಕೆಂಬ ಬೇಡಿಕೆ ಇಟ್ಟು ತಮ್ಮ ಪ್ರಾಣವನ್ನೇ ಬಿಟ್ಟ ಮಹಾನ್ ಕ್ರಾಂತಿಕಾರಿ ಅವರು.

ಇಂದು ಭೂಷಣ್ ರಾಯ್

ಅಲಿಪುರ್ ಬಾಂಬ್ ಪ್ರಕರಣದಲ್ಲಿ ಜೀವಾವಧಿ ಗಡೀಪಾರು ಶಿಕ್ಷೆಗೆ ಒಳಗಾಗಿದ್ದ ಬಂಗಾಳದ ಕ್ರಾಂತಿಕಾರಿಯಾಗಿದ್ದರು ಇಂದುಭೂಷಣ್ ರಾಯ್. ಬಲಾತ್ಕಾರದ ಆತ್ಮಹತ್ಯೆಗೆ ಬಲಿಯಾದವರು. ಅವರ ಆತ್ಮಹತ್ಯೆಗೆ ಕಾರಣವಾದ ಸಂದರ್ಭವನ್ನು ಬರೀಂದ್ರ ಘೋಷ್ ಅವರು ಮನಕರಗುವಂತೆ ವಿವರಿಸಿದ್ದಾರೆ.

ಕಟ್ಟುಮಸ್ತಾದ ಉತ್ತಮ ಆರೋಗ್ಯ ಹೊಂದಿದ್ದ ಇಂದುಭೂಷಣ್ ರಾಯ್ ಅವರು ಎಂತಹ ಕಠಿಣ ಕೆಲಸಕ್ಕೂ ಹೆದರುತ್ತಿರಲಿಲ್ಲ. ಆದರೆ ದಿನದಿಂದ ದಿನಕ್ಕೆ ಅವರು ಜೈಲಿನಲ್ಲಿ ಅನುಭವಿಸುತ್ತಿದ್ದ ಸಣ್ಣ ಸಣ್ಣ ಅವಮಾನಗಳು ಅವರ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದವು. ಅವರು ಆಗಾಗ ಹೇಳುತ್ತಿದ್ದರು–"ಈ ನರಕದಲ್ಲಿ ಹತ್ತು ವರ್ಷಗಳ ನನ್ನ ಬದುಕನ್ನು ಕಳೆಯುವುದು ಸಾಧ್ಯವೇ ಇಲ್ಲ." ಎಂದು. ಒಂದು ರಾತ್ರಿ ತಮ್ಮ ಅಂಗಿಯನ್ನು ಹರಿದುಕೊಂಡು ಅದನ್ನೇ ಹಗ್ಗವನ್ನಾಗಿ ಮಾಡಿಕೊಂಡು ಭಾವಣಿಯ ಕಿಟಕಿಗೆ ನೇಣು ಹಾಕಿಕೊಂಡರು. ಆ ದಿನ ರಾತ್ರಿಯೇ ಸೂಪರಿಂಟೆಂಡೆಂಟ್‌ಗೆ ಫೋನ್ ಮಾಡಿದರೂ ಅವರು ಬಂದಿದ್ದು ಮರುದಿನ ಬೆಳಿಗ್ಗೆ 8ಗಂಟೆಗೆ. ರಾಯ್ ಅವರ ಕುತ್ತಿಗೆಯಲ್ಲಿ ಒಂದು ಚೀಟಿಯಿತ್ತು



ಎಂದು ಜೈಲರ್ ಅವರ ಕೊಠಡಿಗೆ ಹೋದ ಹಲವಾರು ಜೈಲಿನ ಸಿಬ್ಬಂದಿಗಳು ತಿಳಿಸಿದ್ದರು. ಆದರೆ ಅದರಲ್ಲೇನಿತ್ತು ಇಲ್ಲಿಯವರೆಗೂ ಕಂಡು ಹಿಡಿಯಲಾಗಲಿಲ್ಲ.

ಉಲ್ಲಾಸ್‌ಕರ್ ದತ್


ಉಲ್ಲಾಸ್‌ಕರ್ ದತ್ ಅವರಿಗೆ ಅಲಿಪುರ್ ಬಾಂಬ್ ಪ್ರಕರಣದಲ್ಲಿ 14 ವರ್ಷಗಳ ಶಿಕ್ಷೆ ವಿಧಿಸಲಾಗಿತ್ತು. ಸೆಲ್ಯುಲರ್ ಜೈಲಿನಲ್ಲಿ ಅವರು ಅನುಭವಿಸಿದ ಭೀಕರ ದಿನಗಳನ್ನು ಅವರ ಆತ್ಮಕತೆಯಿಂದಲೇ ತಿಳಿದುಕೊಳ್ಳೋಣ:

ಭಾರತದಲ್ಲಿ ತೆಂಗು ಮತ್ತು ಎಳ್ಳಿನಿಂದ ಎಣ್ಣೆ ತೆಗೆಯಲು ಬಳಸಿದಂತೆಯೇ ಎಣ್ಣೆ ಗಿರಣಿಯ ಚಕ್ರದ ನೊಗಕ್ಕೆ ನನ್ನನ್ನು ಕಟ್ಟಿದ್ದರು. ಸಾಮಾನ್ಯವಾಗಿ ಆ ಕೆಲಸಕ್ಕೆ ಎತ್ತುಗಳನ್ನು ಕಟ್ಟುತ್ತಾರೆ. ಒಂದು ದಿನಕ್ಕೆ 16 ಪೌಂಡ್‌ಗಿಂತ ಹೆಚ್ಚು ಸಾಸಿವೆ ಎಣ್ಣೆ ತೆಗೆಯುವುದು ಎತ್ತುಗಳಿಗೆ ಕೂಡ ಕಷ್ಟ. ಅಂಡಮಾನ್ ಜೈಲಿನಲ್ಲಿ ಆ ಚಕ್ರದ ನೊಗಕ್ಕೆ ಎತ್ತುಗಳ ಬದಲು ಮನುಷ್ಯರನ್ನು ಕಟ್ಟುತ್ತಿದ್ದರು ಮತ್ತು ದಿನಕ್ಕೆ ಕನಿಷ್ಠ 80 ಪೌಂಡ್ ಕೊಬ್ಬರಿ ಎಣ್ಣೆ ತೆಗೆಯಬೇಕೆಂದು ಬಲಾತ್ಕಾರ ಮಾಡುತ್ತಿದ್ದರು. ನೊಗಕ್ಕೆ ಮೂರು ಜನರನ್ನು ಕಟ್ಟುತ್ತಿದ್ದರು. ಸ್ನಾನ ಹಾಗೂ ಊಟದ ಮಧ್ಯಂತರವನ್ನು ಬಿಟ್ಟು ಉಳಿದಷ್ಟು ಸಮಯವನ್ನೂ ಅಂದರೆ ಬೆಳಗಿನಿಂದ ಸಂಜೆಯವರೆಗೂ ಸತತವಾಗಿ ಎಣ್ಣೆ ಗಿರಣಿಯ ಕೆಲಸವನ್ನು ನಮ್ಮ ಮೇಲೆ ಹೊರಿಸಿದ್ದರು. ಆ ಮಧ್ಯಂತರವೆಂದರೆ ಕೆಲವೇ ನಿಮಿಷಗಳಷ್ಟೆ. ಎತ್ತುಗಳು ನಿಧಾನಕ್ಕೆ ಸುತ್ತಿದರೆ ನಾವು ಆ ಚಕ್ರದ ಸುತ್ತ ಓಡಬೇಕೆಂದು ಒತ್ತಾಯಿಸುತ್ತಿದ್ದರು. ನಾವೇನಾದರೂ ನಿಧಾನ ಮಾಡಿದರೆ ಅಲ್ಲೇ ಇರುತ್ತಿದ್ದ ಜಮಾದಾರ ದೊಡ್ಡ ದೊಣ್ಣೆಯಿಂದ ನಮ್ಮನ್ನು ಹಿಡಿದು ಚಚ್ಚುತ್ತಿದ್ದರು. ಅದಕ್ಕೂ ಜಗ್ಗದಿದ್ದರೆ, ಕಾಲು ಮತ್ತು ಕೈ ಎರಡನ್ನೂ ಆ ನೊಗಕ್ಕೆ ಕಟ್ಟಿ ಇತರ ಖೈದಿಗಳು ವೇಗದಿಂದ ಸುತ್ತುವಂತೆ ಮಾಡಲಾಗುತ್ತಿತ್ತು. ಆ ಬಡ ವ್ಯಕ್ತಿಯನ್ನು ಕೆಲವೊಮ್ಮೆ ರಥದ ಗಾಲಿಗೆ ಕಟ್ಟಿದಂತೆ ಕಟ್ಟಿ ಎಳೆಸಲಾಗುತ್ತಿತ್ತು. ಮೈಯೆಲ್ಲಾ ಪರಚಿಹೋಗಿ ರಕ್ತ ಒಸರುತ್ತಿತ್ತು. ತಲೆಯನ್ನು ನೆಲಕ್ಕೆ ಚಚ್ಚಿ ರಕ್ತ ಬರುವಂತೆ ಮಾಡಲಾಗುತ್ತಿತ್ತು. ಈ ರೀತಿಯಲ್ಲಿ ಕೆಲಸ ಮಾಡಿಸಿಕೊಳ್ಳುವುದನ್ನು ನಾನು ನನ್ನ ಕಣ್ಣಾರೆ ಕಂಡಿದ್ದೇನೆ. ಮನುಷ್ಯ ಮನುಷ್ಯನನ್ನು ದುಡಿಸಿಕೊಳ್ಳುವ ರೀತಿಯಿದು.



ಒಂದು ದಿನ, ಉಲ್ಲಾಸ್‌ಕರ್ ತಲೆ ಕೆಟ್ಟಂತಾಗಿ ಮೂರ್ಛೆರೋಗ ಬಂದಂತೆ ಮೈಯೆಲ್ಲಾ ನಡುಗುತ್ತಾ ಹಲ್ಲು ಒಸಡುಗಳು ಒತ್ತರಿಸಿಕೊಂಡವು. ಆದಾಗ್ಯೂ ಅವರನ್ನು ಬಿಡುಗಡೆ ಮಾಡದ ಅಂದಿನ ಮದ್ರಾಸ್‌ನಲ್ಲಿ (ಈಗಿನ ಚೆನ್ನೈನಲ್ಲಿ) ಹುಚ್ಚರ ಅನಾಥಾಲಯಕ್ಕೆ ಸೇರಿಸಿದರು. 14 ವರ್ಷಗಳ ಶಿಕ್ಷೆಯ ಪೂರ್ಣಾವಧಿ ಮುಗಿದ ಮೇಲೆಯೇ ಅವರನ್ನು ಬಿಡುಗಡೆ ಮಾಡಲಾಯಿತು. ಆ ನಂತರ ಅವರು ತಮ್ಮ ನೆನಪುಗಳನ್ನು ಬರವಣಿಗೆಯಲ್ಲಿ ಹಂಚಿಕೊಂಡರು.

ಜ್ಯೋತಿಶ್ ಚಂದ್ರ ಪಾಲ್



ಜ್ಯೋತಿಶ್ ಅವರು ಬಾಲೇಶ್ವರ್ ಪ್ರಕರಣದಲ್ಲಿ ಆರೋಪಿಯಾಗಿದ್ದರು. ಅಮಾನುಷ ನಡವಳಿಕೆಯನ್ನು ಅವರು ಪ್ರತಿರೋಧಿಸುತ್ತಿದ್ದರು ಅದಕ್ಕಾಗಿ ಅವರನ್ನು ನಿರ್ದಯವಾಗಿ ಹೊಡೆಯುತ್ತಿದ್ದರು. ಒಂದು ಹಂತದಲ್ಲಿ ಅವರು ತಾಳ್ಮೆಗೆಟ್ಟು ಸಂಪೂರ್ಣವಾಗಿ ಜರ್ಜರಿತರಾದರು ಹಾಗೂ ಉಲಾಸ್‌ಕರ್ ಅವರ ರೀತಿಯಲ್ಲಿ ಹುಚ್ಚರಂತಾದರು. ಅವರನ್ನು ಹುಚ್ಚರ ಆಸ್ಪತ್ರೆಗೆ ಸೇರಿಸಾಲಾಯಿತು ಮತ್ತು ಬಂಗಾಳದ ಬೆರಾಂಪುರ್ ಜೈಲಿನಲ್ಲಿ (ಅದೀಗ ಒರಿಸ್ಸಾದಲ್ಲಿದೆ) ಡಿಸೆಂಬರ್ 4, 1924 ರಂದು ನಿಧನರಾದರು. ಸಾಯುವ ಮುನ್ನ ಅವರು ಈ ಕೆಳಗಿನಂತೆ ಒಂದು ಸಂದೇಶವನ್ನು ತನ್ನ ಮಿತ್ರರಿಗೆ ಹಾಗೂ ನೆಂಟರಿಸ್ಟರಿಗೆ ಬರೆದಿಟ್ಟಿದ್ದರು:

"ನನ್ನ ಆತ್ಮ ಸ್ವರ್ಗದಲ್ಲಿ ದೀರ್ಘ ನಿದ್ದೆಯಲ್ಲಿದೆ ಎಂದು ತಿಳಿಯಬೇಡಿ. ದೇಶಕ್ಕಾಗಿನ ನನ್ನ ಪ್ರೀತಿ ಭಾವೋದ್ವೇಗದಿಂದ ಹಾಗೂ ನಿಷ್ಠೆಯಿಂದ ಇರುವುದು ಹೌದಾದರೆ, ನಾನು ಮತ್ತೆ ಈ ಕೂಡಲೇ ಹುಟ್ಟುತ್ತೇನೆ ಮತ್ತು ನನ್ನ ದೇಶಕ್ಕೆ ಹಿಂತಿರುಗಿ ಬಂದು ಅವಳ ಸೇವೆ ಮಾಡುತ್ತೇನೆ. ಖಂಡಿತವಾಗಿಯೂ."

ಪ್ರೇಮಾನಂದ್

(ಇವರು ಬ್ರಿಟಿಷ್–ವಿರೋಧಿ ನಡೆಗಳು ಅನುಮಾನಾಸ್ಪದವಾಗಿದ್ದ ಮತ್ತು ಸೆಲ್ಯುಲರ್ ಜೈಲಿನಲ್ಲಿ ಜೈಲಿನ ಅಧಿಕಾರಿಗಳೊಂದಿಗೆ ಸಲಿಗೆಯಿಂದಿದ್ದು ಅವರ ಸಮಕಾಲೀನ ಇತರ ಖೈದಿಗಳು ಅಸಹ್ಯಪಡುವಂತೆ ಇದ್ದ ಆರ್ಯ ಸಮಾಜದ ಭಾಯಿ ಪರಮಾನಂದ್/ಪ್ರೊಫೆಸರ್ ಪರಮಾನಂದ್ ಎಂದು ತಪ್ಪಾಗಿ ಗ್ರಹಿಸಬೇಡಿ.)

ತ್ರೈಲೋಕ್ಯನಾಥ್ ಚಕ್ರವರ್ತಿಯವರು ಯುವ ಕ್ರಾಂತಿಕಾರಿ ಪ್ರೇಮಾನಂದರು ಸೆಲ್ಯುಲರ್ ಜೈಲಿನ ಕ್ರೌರ್ಯದ ವಿರುದ್ಧ ಸೆಟೆದುನಿಂತು ಧಿಕ್ಕರಿಸಿದ ಹೃದಯಕಲ್ಲಾಗುವಂಥ ಚಿತ್ರಣವನ್ನು ನೀಡಿದ್ದಾರೆ:

ಒಂದು ದಿನ ಖೈದಿಗಳ ಸಾಲಿನಲ್ಲಿ ತನ್ನ ಜಾಗದಲ್ಲಿ ನಿಂತಿರದ ತಪ್ಪಿಗಾಗಿ ಜೈಲರ್ ಪ್ರೇಮಾನಂದ ಅವರನ್ನು ತೀರಾ ಕೆಟ್ಟದಾಗಿ ಬೈಯುತ್ತಾನೆ. ಒಂದು ಹಂತದಲ್ಲಿ ಅದನ್ನು ಸಹಿಸಲಾಗದೆ ಎರಡೂ ಕಡೆಗಳಲ್ಲಿದ್ದ ಇತರ ವಾರ್ಡರುಗಳನ್ನು ಅತ್ತಿತ್ತ ತಳ್ಳಿಕೊಂಡು ಮುಂದೆ ನುಗ್ಗಿ ಜೈಲರನ ಕಪಾಳಕ್ಕೆ ಜೋರಾಗಿ ಬಾರಿಸುತ್ತಾರೆ ಮತ್ತು ಒದ್ದು ನೆಲಕ್ಕೆ ಬೀಳಿಸುತ್ತಾರೆ. 'ಬಾಂಬ್ ಎಸೆದ ಖೈದಿ ವಾರ್ಡರುಗಳನ್ನು ಹೊಡೆದು ಜೈಲರ್ ಬೆರ‍್ರಿಯನ್ನು ಸರಿಯಾಗಿ ಬಾರಿಸಿದ'ನೆಂಬ ಆ ಘಟನೆಯ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಎಲ್ಲರೂ ಸೇರಿ ಪ್ರೇಮಾನಂದರನ್ನು ಹಿಡಿದು ದೇಹದೆಲ್ಲೆಡೆ ರಕ್ತ ಒಸರುವಂತೆ ಮನಬಂದಂತೆ ಕೋಲಿನಿಂದ ಮತ್ತು ಮುಷ್ಠಿಯಿಂದ ಬಾರಿಸುತ್ತಾರೆ. ಅದೂ ಸಾಲದೆಂಬಂತೆ ಬೆತ್ತದ ಕೋಲಿನಿಂದ ಇಪ್ಪತ್ತು ಬಾರಿ ಹೊಡೆಯುವ ಶಿಕ್ಷೆಗೆ ಒಳಪಡಿಸುತ್ತಾರೆ. ಪ್ರತಿಯೊಂದು ಹೊಡೆತವೂ ಅವರ ಮೈಮೇಲೆ ದೊಡ್ಡ ಗಾಯವನ್ನು ಉಂಟುಮಾಡುತ್ತದೆ ಮತ್ತು

ಪುಟ 12 ಕ್ಕೆ

ಸಂಪಾದಕೀಯ

ಖಾಲಿ ಹುದ್ದೆಗಳ ನೇಮಕಾತಿ ನಿರ್ಲಕ್ಷ್ಯ ಕಮರುತ್ತಿರುವ ಯುವಜನರ ಭವಿಷ್ಯ

ಕರ್ನಾಟಕ ಚುನಾವಣೆಯ ಸಿದ್ಧತೆಯಲ್ಲಿರುವಾಗ ಇಲ್ಲಿಯ ಲಕ್ಷಾಂತರ ಯುವಜನತೆ ತಮ್ಮ ಭವಿಷ್ಯ ಕಮರಿ ಹೋಗುವ ಆತಂಕದಲ್ಲಿದ್ದಾರೆ. ಸರಕಾರದ ಸುಮಾರು 43 ಇಲಾಖೆಗಳಲ್ಲಿ ಖಾಲಿ ಇರುವ 2,58,709 ಹುದ್ದೆಗಳಿಗೆ ನೇಮಕಾತಿಯ ಪ್ರಕ್ರಿಯೆಯೇ ಆರಂಭ ಆಗದಿರುವುದರಿಂದ ಚುನಾವಣೆಗಳು ಘೋಷಣೆಯಾದರೆ ಅದು ಮತ್ತಷ್ಟೂ ಮುಂದೆ ಹೋಗಬಹುದಾಗಿದೆ. ಮುಂದೊಮ್ಮೆ ಕರೆದರೂ ನೇಮಕಾತಿಯ ವಯೋಮಿತಿಯು ಮೀರಿ ಹೋಗುವ ತೀವ್ರ ಆತಂಕ ಅವರನ್ನು ಕಾಡುತ್ತಿದೆ.

ಕೇಂದ್ರ ಸರಕಾರ ಬಜೆಟ್ ಮಂಡಿಸುವಾಗ ಅಭಿವೃದ್ಧಿ, ಅಮೃತ ಬಜೆಟ್, ಉದ್ಯೋಗಗಳ ಅಪಾರ ಅವಕಾಶಗಳ ಬಗೆಗೆ ಅಲಂಕಾರಿಕ ಮಾತನಾಡಿದರೂ ನೆನೆಗುದಿಗೆ ಬೀಳಿಸಿರುವ ಉದ್ಯೋಗ ನೇಮಕಾತಿಗಳ ಬಗೆಗಾಗಲೀ, ಹೊಸ ಉದ್ಯೋಗ ಸೃಷ್ಟಿಯ ಖಾತ್ರಿಯಾಗಲೀ ನೀಡಿಲ್ಲ. ಬದಲಾಗಿ, ವಾಸ್ತವದಲ್ಲಿ ದೇಶ ಎದುರಿಸುತ್ತಿರುವ ತೀವ್ರತರ ಆರ್ಥಿಕ ಬಿಕ್ಕಟ್ಟಿನ ಸುಳಿಯ ಸೆಳೆತದ ಛಾಯೆಯೇ ಕಂಡು ಬರುತ್ತಿದೆ. ಹಾಗಾಗಿ ಎಂದಿನಂತೆ ಜನಮರುಳು ಯೋಜನೆಗಳ ಬದಲು ಸೀಮಿತ ರಾಜಕೀಯ ದೃಷ್ಟಿ ಇರಿಸಿ ಮತ ಸೆಳೆಯಲು ಬೇರೊಂದು ಮಾರ್ಗಗಳನ್ನು ಕಂಡುಕೊಂಡಂತಿದೆ. ಅಥವಾ ರಾಜ್ಯಕ್ಕೆ ಅದರ ಭಾರ ಹೊರಿಸಲಾಗಿದೆ.

ಕರ್ನಾಟಕ ಸರಕಾರ ಸಂರಚನಾ ಹೊಂದಾಣಿಕೆ, ಆರ್ಥಿಕ ನಿರ್ಭಂದದ ಕಾಯ್ದೆಯನ್ನು ಅಂಗೀಕರಿಸಿ ಜಾರಿಗೊಳಿಸುತ್ತಿದೆ. ಇದು ಸಾಲ ನೀಡುವ ಮೊದಲು ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕ್ ಮುಂತಾದ ಜಾಗತಿಕ ಹಣಕಾಸು ಸಂಸ್ಥೆಗಳು ವಿಧಿಸಿದ ಶರತ್ತಿನ ಜಾರಿಯ ಫಲ. ಇದರಂತೆ ಸರಕಾರದ ಆಡಳಿತ ವೆಚ್ಚದ ಕಡಿತ, ಪರಿಣಾಮ ನೇಮಕಾತಿಗಳಿಗೆ ನಿರ್ಭಂದ, ಹುದ್ದೆಗಳ ರದ್ಧತಿ ಮುಂದುವರಿದು ಇಲಾಖೆಗಳ ರದ್ಧತಿ ಯಂತಹ ಉದ್ಯೋಗ ನಾಶದ ಕ್ರಮಗಳನ್ನು ಸರಕಾರ ಆರ್ಥಿಕ ಶಿಸ್ತು ಮತ್ತು ನಿರ್ವಹಣೆಯ ಹೆಸರಿನಲ್ಲಿ ಕೈಗೊಳ್ಳುತ್ತಿದೆ. ತೀರಾ 'ದುರ್ಬಲ ಪ್ರತಿರೋಧ'ದ ಕ್ಷೇತ್ರಗಳೆಂದು ಗುರುತಿಸಿದ ಶಿಕ್ಷಣ, ಸಮಾಜ ಕಲ್ಯಾಣ, ಮಹಿಳಾ ಮಕ್ಕಳ ಅಭಿವೃದ್ಧಿ ಯಂತಹ ಇಲಾಖೆಗಳನ್ನು ಗುರಿಯಾಗಿಸಿದೆ. ಪ್ರಸಕ್ತ ಜಾಗತಿಕ ಬಿಕ್ಕಟ್ಟು ಸೃಷ್ಟಿಸಿರುವ ಲಕ್ಷಾಂತರ ಉದ್ಯೋಗ ನಷ್ಟದ ಪರಿಸ್ಥಿತಿ ಯುವಜನರನ್ನು ಮತ್ತಷ್ಟೂ ಭೀತರನ್ನಾಗಿಸಿದೆ.

ಸರಕಾರವೇ ಈಗಾಗಲೇ ಅನುಮೋದಿಸಿದಂತೆ ನೇಮಕಾತಿ ಮಾಡಲು 2.6 ಲಕ್ಷ ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಗುರುತಿಸಿದೆ. ಇದರಲ್ಲಿ ಅತೀ ಹೆಚ್ಚು ಹುದ್ದೆಗಳು ಮಾಧ್ಯಮಿಕ ಶಿಕ್ಷಣ ಇಲಾಖೆ (66,059), ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ (34,644) ಒಳಾಡಳಿತ (23,577), ಉನ್ನತ ಶಿಕ್ಷಣ (12,674), ಕಂದಾಯ (10,621), ಗ್ರಾಮೀಣ ಅಭಿವೃದ್ಧಿ (9972), ಪ.ಜಾತಿ ಕಲ್ಯಾಣ (9592), ಆರ್ಥಿಕ ಇಲಾಖೆ (8779). ಈ ಹಿಂದೆ ಕಲ್ಯಾಣ ಕರ್ನಾಟಕ ವೃಂದ ಭೋದಕೇತರ ಹುದ್ದೆಗಳ ನೇಮಕಾತಿಗೆ 2022 ರ ನವೆಂಬರ್ ನಲ್ಲಿ ತಡೆಯ ಆದೇಶ ಹೊರಡಿಸಿ ನಿರೀಕ್ಷೆಗಳಿಗೆ ಕುದಿ ನೀರು ಎರಚಿದೆ. ಅದನ್ನಿನ್ನೂ ತೆರವು ಮಾಡಿಲ್ಲ ಆದರೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಾತುಗಳಿಗೆ ಬರವಿಲ್ಲ. ನಿವೃತ್ತರಾದ ಬಳಿಕ ಖಾಲಿಯಾದ ಜಾಗಗಳಿಗೆ ತುಂಬಿಸುವುದೂ ಇಲ್ಲ. ಭಾರತ ಸರಕಾರದ ವಿವಿಧ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇದ್ದರೂ ನೇಮಕಾತಿಯ ಸುಳಿವೇ ಇಲ್ಲ. ಕರ್ನಾಟಕದಲ್ಲಿ ಎಸ್.ಸಿ. ಮತ್ತು ಎಸ್.ಟಿ. ಒಳಗೊಂಡ ಬ್ಯಾಕ್ ಲಾಗ್ ಹುದ್ದೆಗಳು ಹಾಗೇ ಖಾಲಿ ಬಿದ್ದಿವೆ. ಹೀಗಿರುವಾಗ ಮೀಸಲಾತಿಯ ಬೇಡಿಕೆ, ಆಸೆ ಅತಿರೇಕದ ಆಸೆಯನ್ನಾಗಿಸಿ, ಇಲ್ಲದ ಹುದ್ದೆಗಳಿಗೆ ಸಲ್ಲದ ಸ್ಪರ್ದೆ ಏರ್ಪಡಿಸಲಾಗಿದೆ. ಕೇಂದ್ರ ಸರಕಾರದ 78 ಇಲಾಖೆಗಳಲ್ಲಿ 9.79 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇವೆ.

2022 ಅಕ್ಟೋಬರ್ ನಲ್ಲಿಯ ಸಮೀಕ್ಷೆಯ (ಸಿ.ಎಂ.ಐ.ಇ) ವರದಿಯಂತೆ ಗ್ರಾಮೀಣ ನಿರುದ್ಯೋಗ ಶೇ.8.01, ನಗರ ನಿರುದ್ಯೋಗ ಶೇ. 7.53 ಇದೆ. ಈಗಿರುವ ಕೃಷಿ ಹಾಗೂ ಗ್ರಾಮೀಣ ಬಿಕ್ಕಟ್ಟು ಅಪಾರ ಪ್ರಮಾಣದ ನಿರುದ್ಯೋಗ ಹೆಚ್ಚಿಸಿ ವಲಸೆಯನ್ನು ಸೃಷ್ಟಿಸಿದೆ. ಗ್ರಾಮೀಣ ಉದ್ಯೋಗ ಸೃಷ್ಟಿಯನ್ನು ಸರಕಾರ ಕಡೆಗಣಿಸಿರುವುದರಿಂದಲೇ ಈ ಸಾಲಿನ ಆಯ ವ್ಯಯದಲ್ಲಿ ಕಳೆದ ವರ್ಷಕ್ಕಿಂತಲೂ ಶೇ.33 ರಷ್ಟು ಹಣ ಕಡಿತ ಮಾಡಿ ಅನ್ಯಾಯ ಎಸಗಿದೆ. ಜಾಗತಿಕ ಆರ್ಥಿಕ ಹಿಂಜರಿತ, ರಶಿಯಾ ಉಕ್ರೇನ್ ಯುದ್ಧ ಇತ್ಯಾದಿಗಳ ಪರಿಣಾಮಗಳನ್ನೂ ಸರಿಯಾಗಿ ಅಂದಾಜಿಸಿಲ್ಲ. ದಿವಾಳಿಖೋರ, ಕಾರ್ಪೋರೇಟ್ ಲೂಟಿ ಪರ ಆರ್ಥಿಕ ನೀತಿಗಳಿಂದಾಗಿ ಆಂತರಿಕ ಉತ್ಪಾದನೆ ಹೆಚ್ಚಿಸಿ ಮಾರುಕಟ್ಟೆ ವಿಸ್ತರಿಸುವ ಯೋಜನೆಗಳೇ ಇಲ್ಲ.

ಒಟ್ಟಾರೆ ರಾಜ್ಯದಲ್ಲಿನ ಆರ್ಥಿಕ ಪರಿಸ್ಥಿತಿಯೂ ಹದಗೆಟ್ಟಿದೆ. ಹೊರ ಸಾಲಗಳ ಭಾರದಿಂದ ತತ್ತರಿಸುತ್ತಿದೆ. ಜಾತಿಗಳ ಓಲೈಕೆಗೆ ನಿಗಮಗಳು, ವಿಗ್ರಹಗಳು, ಧ್ವಜ ಸ್ಥಂಬ ನಿರ್ಮಾಣದಂತಹ ಕೆಲಸಕ್ಕೆ, ರಾಜಕೀಯ ಸಮಾವೇಶ, ಉತ್ಸವಗಳಿಗೆ ನೂರಾರು ಕೋಟಿಗಳನ್ನು ಸುರಿಯುವ ಸರಕಾರ ಯುವಜನರ ಆ ಮೂಲಕ ಸಮಾಜಕ್ಕೆ, ಆರ್ಥಿಕ ಪ್ರಗತಿಗೆ ಕಾರಣವಾಗುವ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ.

ಸರಕಾರ ಯುವಜನರನ್ನು, ಸಾಮಾನ್ಯ ಜನತೆಯನ್ನು ವಂಚಿಸುವುದನ್ನು ನಿಲ್ಲಿಸಲಿ. ಕೂಡಲೆ ಖಾಲಿ ಇರುವ ಹುದ್ದೆಗಳ ನೇಮಕಕ್ಕೆ ಮುಂದಾಗಿ ಯುವಜನರ ಭವಿಷ್ಯ ಉಳಿಸಲಿ.

ರಾಜ್ಯವನ್ನು ಕಡೆಗಣಿಸಿದ ಬಜೆಟ್ ಡಬಲ್ ಎಂಜಿನ್ ಊದಿದ ಮಂಕುಬೂದಿ!

ಈ ವಾರ

ಎಸ್.ವೈ. ಗುರುಶಾಂತ್

* ಅವರು ಉಟ್ಟಿರುವುದು ಇಲಕಲ್ಲ ಸೀರೆ. ಅದಕ್ಕೆ ಕಸೂತಿ ಹಾಕಿರುವುದು ನವಲಗುಂದದವರು.
– ಮೇಡಮ್ ನಮ್ಮ ಕಡೆಯ ಸೀರೆ ಉಟ್ಟು ಬಜೆಟ್ ಮಂಡಿಸಿದ್ದು ನಮ್ಮ ಕೆಲಸವನ್ನು ಗೌರವಿಸಿದಂತೆ ಆಗಿದೆ. (ನೇಕಾರರು–ಮಾರಾಟಗಾರರ ಮಾತು)
* 156 (?) ಪುಟಗಳ ಬಜೆಟ್ ಭಾಷಣವನ್ನು 68 ನಿಮಿಷದಲ್ಲಿ ಓದಿದರು!
* ಬಜೆಟ್ ಮಂಡಿಸಿದ 68 ನಿಮಿಷದಲ್ಲಿ ಪ್ರಧಾನಿ ಮೋದಿಯವರು 124 ಬಾರಿ ಮೇಜು ಕುಟ್ಟಿದರು!

ಆಹಾ! ನಮ್ಮ ಮಾಧ್ಯಮಗಳು ಎಷ್ಟು ವೃತ್ತಿನಿಷ್ಠತೆಯಿಂದ ವರದಿ ಮಾಡುತ್ತಿವೆ! ಎಷ್ಟು ಸೂಕ್ಷ್ಮವಾಗಿ ವಿಷಯಗಳನ್ನು ಗಮನಿಸುತ್ತಿವೆ. (ಬಹುಶಃ ಪ್ರಧಾನಿ ಮೇಜು ಕುಟ್ಟುವರು ಎಂಬುದನ್ನು ಮಾಧ್ಯಮದವರಿಗೆ ಮೊದಲೇ ತಿಳಿಸಿರಬೇಕು. ಅದನ್ನೇ ಎಣಿಸಲೆಂದೇ ಒಬ್ಬನಿಗೆ ಅಸೈನ್ ಮೆಂಟ್ ಮಾಡಿರಬೇಕು!)

ಮಾಧ್ಯಮಗಳು ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಅವರು ಫೆಬ್ರವರಿ 2, 2023 ರಂದು ಲೋಕಸಭೆಯಲ್ಲಿ ಮಂಡಿಸಿದ ಭಾರತ ಸರಕಾರದ 2023–24 ರ ಸಾಲಿನ ಬಜೆಟ್ ನ್ನು 'ಅಮೃತ ಕಾಲದ ಮೊದಲ ಬಜೆಟ್', ತೆರಿಗೆಗಳ ಹೊರೆ ಇಲ್ಲದ ಬಜೆಟ್, ಜನಪ್ರಿಯತೆಗಿಂತ ಜನಪರತೆಗೆ ಮಣೆ, ಇತ್ಯಾದಿ ಬಣ್ಣಿಸಿದ್ದಾರೆ. 2047 ರಲ್ಲಿ ಭಾರತ ಸ್ವಾತಂತ್ರ್ಯೋತ್ಸವದ ನೂರರ ಸಂಭ್ರಮ ಆಚರಿಸುವಾಗ ವಿಶ್ವದ ಬಹು ದೊಡ್ಡ ಆರ್ಥಿಕ ಶಕ್ತಿಯಾಗಿ ಇರಲಿದೆ. ಹೀಗಾಗಿ ಈ ಬಜೆಟ್ ಅಮೃತ ಕಾಲದ ಮೊದಲ ಬಜೆಟ್ ಎಂದು ಸ್ವತಃ ಮೋದಿಯವರೇ ಹೇಳಿದ್ದಾರೆ! ಮುಂದಿನ 150 ವರ್ಷಗಳಿಗೂ ಅಡಿಪಾಯವಾಗಿರುವ ಬಜೆಟ್ ಇದು ಎಂದು ಆಡಳಿತ ಪಕ್ಷದ ಸಂಸದ ಹೇಳಿದ್ದಾನೆ! ಆಹಾ! ಇಂತಹ 'ಮುತ್ಸದ್ದಿ' ಅರ್ಥಶಾಸ್ತ್ರಜ್ಞರ ಮಾತುಗಳನ್ನು ಕೇಳಿ ಯಾರಾದರೂ ಮುಸಿ ಮುಸಿ ನಗಬೇಕಷ್ಟೇ. ಜೋರಾಗಿ ನಕ್ಕರೂ ಅದು ದೇಶದ್ರೋಹವಾದೀತು!

ಒಂದು ವೇಳೆ ಈ ಬಜೆಟ್ ಆ ಹೇಳಿಕೆಗಳಂತೆ ಅಂತಃಸತ್ವ ಹೊಂದಿದ್ದರೆ ಇಷ್ಟೊಂದು ಪುಂಗಿ ಊದಬೇಕಿತ್ತೇಕೆ ಎನ್ನುವುದು ಸಾಮಾನ್ಯ ಪ್ರಶ್ನೆ. ಇವರ ಬಜೆಟ್ ಹೇಗೇ, ಎಲ್ಲಿ ತಯಾರಾಗುತ್ತವೆ ಎನ್ನುವುದು ತಿಳಿಯದೇ?

ಇರಲಿ, ಸಶಕ್ತ ಭಾರತ ಕಟ್ಟಬೇಕು ಎನ್ನುವ ಭಾರತ ಸರ್ಕಾರ ರಾಜ್ಯಗಳ ಸಬಲೀಕರಣಕ್ಕೆ, ಸಶಕ್ತತೆಗೆ ನೀಡಿರುವ ಕೊಡುಗೆ ಏನು? ನಮ್ಮ ರಾಜ್ಯಕ್ಕೆ ನೀಡಿದ ಕೊಡುಗೆ ಏನು? ಇನ್ನೇನು ಕೆಲವೇ ತಿಂಗಳಲ್ಲಿ ವಿಧಾನ ಸಭಾ ಚುನಾವಣೆಗೆ ಹೋಗಲಿರುವ ಕರ್ನಾಟಕಕ್ಕೆ ರಾಜಕೀಯ ಲಾಭಕ್ಕಾದರೂ ಒಂದಿಷ್ಟು ಹೊಸ ಯೋಜನೆ, ಹಣವನ್ನು ಮೀಸಲಿಟ್ಟು ಘೋಷಿಸಬಹುದು ಎನ್ನುವ ಸಾಮಾನ್ಯ ನಿರೀಕ್ಷೆಯೂ ಈ ಬಾರಿ ಸುಳ್ಳಾಗಿದೆ. ಹೇಗೂ ಕರ್ನಾಟಕದ ಜನ ನಮಗೇ ಓಟು ಹಾಕುವರು ಎಂಬ ನಂಬಿಕೆಯೇ? ಅಥವಾ ಜನಪ್ರಿಯ–ಜನಮರುಳು ಯೋಜನೆಗಳನ್ನು ರಾಜ್ಯ ಸರ್ಕಾರವೇ ತನ್ನ ಬಜೆಟ್ ನಲ್ಲಿ ಪ್ರಕಟಿಸಿ ಮುಂದೆ ಬರುವ ಯಾವ ಸರ್ಕಾರ ಬಂದರೂ ಅವರೇ ಹಣ ಹೊಂದಿಸಿಕೊಳ್ಳಲಿ, ತಾನೇನಿದ್ದರೂ ರಾಜ್ಯಗಳಲ್ಲಿ ಸಂಗ್ರಹಿಸುವ ತೆರಿಗೆ ಇಟ್ಟುಕೊಂಡರಾಯಿತು ಎನ್ನುವ ಯೋಚನೆಯೇ?

ಒಂಬತ್ತು ವರ್ಷಗಳ ದೀರ್ಘ ಮೌನ ವಹಿಸಿ ಮದ್ಯ ಕರ್ನಾಟಕದಲ್ಲಿರುವ ಭದ್ರಾ ಮೇಲ್ದಂಡೆ ಯೋಜನೆಗೆ ಕೆಂದ್ರ ಬಜೆಟ್ ನಲ್ಲಿ 5300 ಕೋಟಿ ರೂ.ಗಳನ್ನು ಘೋಷಿಸಿದ್ದು ಬಿಟ್ಟರೆ ರಾಜ್ಯದ ಆರ್ಥಿಕತೆಗೆ, ಅಭಿವೃದ್ಧಿಗೆ ಆಧಾರವಾಗಬಲ್ಲ ಯಾವ ಯೋಜನೆ, ಹಣ ನೀಡಿಕೆಯೇ ಇಲ್ಲ. ನೀರಾವರಿ ಯೋಜನೆಗೆ ಹಣ ನೀಡಲಾಗಿದೆ ಎನ್ನುವುದೂ ಕೂಡ ಕೇವಲ ಭಾಗಶಃ ಅಷ್ಟೇ. ಅನೇಕ ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಮಹದಾಯಿ, ಎತ್ತಿನ ಹೊಳೆ, ಮೇಕೆದಾಟು, ಕೃಷ್ಣಾ ಮೆಲ್ದಂಡೆ ಯೋಜನೆ–3 ರ ಬಗ್ಗೆ ಚಕಾರವಿಲ್ಲ. ಭದ್ರಾದ ಯೋಜನೆ ಒಟ್ಟು 23,000 ಕೋಟಿ ರೂ.ಗಳ ಯೋಜನೆ. ಒಂದು ವೇಳೆ ಘೋಷಿಸಿದಂತೆ ಪೂರ್ಣ ಹಣ ನೀಡಿದರೂ ಅದು ಹಸಿದ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯಂತೆ. ಅದನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿದ್ದು ಬಿಟ್ಟರೆ ಕೃಷ್ಣಾ ಸೇರಿದಂತೆ ಉಳಿದ ಯೋಜನೆಗಳು ರಾಷ್ಟ್ರ ಯೋಜನೆಗಳಲ್ಲವೇ ಎಂಬ ಪ್ರಶ್ನೆ ಎದ್ದಿದೆ. ಈ ವಿಷಯದಲ್ಲಿ ರಾಜ್ಯದಿಂದ ಆರಿಸಿಹೋದ ಸಂಸದರು, ಪ್ರನಿಧಿಸುವ ಕೇಂದ್ರ ಸಚಿವರು ವಿಫಲರಾಗಿದ್ದಾರೆ, ಅವರಿಗೆ ಆಗ್ರಹಿಸುವ ಧೈರ್ಯವೇ ಇಲ್ಲ ಎಂಬ ಟೀಕೆಗಳೂ ವ್ಯಕ್ತವಾಗಿವೆ. ಗಂಗಾ ಅರತಿಯಂತೆ ತುಂಗಾ ಆರತಿ ಕಾರ್ಯಕ್ರಮವೂ ಸಹ ಜನರಲ್ಲಿಯ ಧಾರ್ಮಿಕ ಮನೋಭಾವದ ದುರ್ಲಾಭ ಹೊಡೆವ ಹಂಚಿಕೆ. ಭದ್ರಾ ಬಗೆಗಿನ 'ಕಾಳಜಿ' ಕೇವಲ ಮದ್ಯ ಕರ್ನಾಟಕದ ಜಿಲ್ಲೆಗಳ ಮತಗಳ ಮೇಲೆ ಕಣ್ಣಿರಿಸಿದ್ದು ಎನ್ನುವುದೂ ಸ್ಪಷ್ಟ. ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ತುಮಕೂರು ಪ್ರದೇಶಗಳ 2,25,515 ಹೆ. ಭೂಮಿಗೆ ಭದ್ರಾ, ತುಂಗಾಗಳಿಂದ 29.90 ಟಿ.ಎಂ.ಸಿ ನೀರುಣಿಸುವ ಯೋಜನೆ ಎಂಬುದು ನಿಜವಾದರೂ ಪೂರ್ಣ ಅನುಷ್ಠಾನ ಎಂದು?

ಕಳೆದ ಬಜೆಟ್ಟನಲ್ಲಿದ್ದ ನಗರ ಸಬರ್ಬನ್ ರೈಲ್ವೇ ಯೋಜನೆಯ ಬಗ್ಗೆ ಈ ಬಾರಿ ಪ್ರಸ್ತಾಪವಿಲ್ಲ. 18,000 ಕೋಟಿ ರೂ.ಗಳ ಯೋಜನೆಗೆ ಅಲ್ಪ ಹಣ ನೀಡಿಕೆ. ಕುಡಚಿ–ಬಾಗಲಕೋಟೆ ರೈಲು ಮಾರ್ಗಕ್ಕೆ ಹಿಂದೆ 50 ಕೋಟಿ ರೂ.ಗಳು ನೀಡಿದ್ದು ಬಿಟ್ಟರೆ ಈ ಬಾರಿ ಏನೂ ಇಲ್ಲ. ಅಂದರೆ ಅದು ಅಲ್ಲೇ ತುಕ್ಕು ಹಿಡಿಯಲಿದೆ. ಇವೆಲ್ಲಾ ಗಮನಿಸಿದರೆ ರಾಜ್ಯದ ಮೂಲ ಸೌಕರ್ಯ ಅಭಿವೃದ್ಧಿ ಬಗ್ಗೆ ಬಿಜೆಪಿ ಗಿರುವ ತಾತ್ಸಾರ, ನಿರ್ಲಕ್ಷ್ಯತನಗಳು ಎದ್ದು ಕಾಣುತ್ತವೆ. ಒಂದು ನಿರ್ದಿಷ್ಟ ಕಾಲಮಿತಿಯನ್ನು ಇರಿಸಿಕೊಂಡು ಅಗತ್ಯ ಹಣ ನೀಡಿ ಪೂರ್ಣಗೊಳಿಸದಿದ್ದರೆ ಅವು ನೆನೆಗುದಿಗೆ ಬೀಳುವುದು ಗ್ಯಾರಂಟಿ.



ಜನರ ಜೀವನೋಪಾಯದ ಮೇಲೆ ನಿರಂತರ ದಾಳಿಗಳ ವಿರುದ್ಧ

ಫೆ.22–28: ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆ–

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಫೆಬ್ರುವರಿ ಕೊನೆಯ ವಾರದಲ್ಲಿ ಮೋದಿ ಸರಕಾರದ ನೀತಿಗಳ ವಿರುದ್ಧ ರಾಷ್ಟ್ರವ್ಯಾಪಿಯಾಗಿ ಪ್ರತಿಭಟನಾ ಕಾರ್ಯಚರಣೆಗಳನ್ನು ನಡೆಸಲು ಸಿಪಿಐ(ಎಂ) ಕರೆ ನೀಡಿದೆ. ಜನವರಿ 28–29 ರಂದು ಕೊಲ್ಕತಾದಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಈ ಕರೆ ನೀಡಿದೆ.

ಅಲ್ಲದೆ, ಅದಾನಿ ಸಮೂಹದ ವಿರುದ್ಧ ಕೇಳಬಂದಿರುವ ಆರೋಪಗಳ ಬಗ್ಗೆ ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು, ಆಕ್ಸ್‌ಫಾಮ್‌ನ ಇತ್ತೀಚಿನ ವರದಿ ಎತ್ತಿತೋರಿರುವ ಅಸಮಾನತೆಯನ್ನು ತೊಡೆದು ಹಾಕುವ ಕ್ರಮವಾಗಿ, ಶ್ರೀಮಂತರಿಗೆ ನೀಡುತ್ತಲೇ ಇರುವ ತೆರಿಗೆ ರಿಯಾಯಿತಿಗಳನ್ನು ಹಿಂತೆಗೆದುಕೊಳ್ಳುವ ಸಮಯ ಬಂದಿದೆ, ಸಂಪತ್ತು ತೆರಿಗೆ ಮತ್ತು ಪಿತ್ರಾರ್ಜಿತ ತೆರಿಗೆಯನ್ನು ಜಾರಿಗೆ ತರಬೇಕು. ಎಲ್ಲಾ ಅಗತ್ಯ ವಸ್ತುಗಳ ಮತ್ತು ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿಯನ್ನು ರದ್ದುಗೊಳಿಸಬೇಕು ಎಂದೂ ಅದು ಆಗ್ರಹಿಸಿದೆ. ಸಭೆಯ ನಂತರ ಅದು ಪ್ರಕಟಿಸಿರುವ ಹೇಳಿಕೆಯ ಪೂರ್ಣಪಾಠವನ್ನು ಈ ಮುಂದೆ ಕೊಡಲಾಗಿದೆ:

ಅದಾನಿ ಸಮೂಹದ ವಿರುದ್ಧ ಆರೋಪ–ಉನ್ನತ ಮಟ್ಟದ ತನಿಖೆ ಅಗತ್ಯ

ಅದಾನಿ ಸಮೂಹದ ವಿರುದ್ಧ 'ಹಿಂಡೆನ್‌ಬರ್ಗ್ ರಿಸರ್ಚ್' ಮಾಡಿರುವ ಆರೋಪಗಳ ಮೇಲೆ ಒಂದು ಉನ್ನತ ಮಟ್ಟದ ತನಿಖೆ ಅತ್ಯಗತ್ಯವಾಗಿದೆ, ಇದನ್ನು ಸುಪ್ರೀಂ ಕೋರ್ಟ್ ಪ್ರತಿದಿನವೆಂಬಂತೆ ಮೇಲ್ವಿಚಾರಣೆ ಮಾಡುವಂತಿರಬೇಕು. ಈ ವಿಚಾರಣೆ ಮುಗಿದು ಸತ್ಯ ತಿಳಿಯುವವರೆಗೂ ಭಾರತದ ಮತ್ತು ನಮ್ಮ ಜನರ ಹಿತಾಸಕ್ತಿಯನ್ನು ರಕ್ಷಿಸಬೇಕು. ಎಲ್‌ಐಸಿಯ ಸುಮಾರು ರೂ. 80,000 ಕೋಟಿಗಳಷ್ಟು ಹಣ ಅದಾನಿ ಕಂಪನಿಗಳಲ್ಲಿ ಹೂಡಿಕೆಯಾಗಿದೆ. ಇದೂ ಅಲ್ಲದೆ ಈ ಸಮೂಹವು ರಾಷ್ಟ್ರೀಯ ಬ್ಯಾಂಕುಗಳಿಂದ ತೆಗೆದುಕೊಂಡ ಎಲ್ಲಾ ಸಾಲಗಳಲ್ಲಿ ಶೇ. 40 ರಷ್ಟು ಎಸ್‌ಬಿಐ ಮೂಲಕವಾಗಿದೆ. ಎಲ್‌ಐಸಿ ಮತ್ತು ಎಸ್‌ಬಿಐ ಎರಡೂ ಸಂಸ್ಥೆಗಳು ಕೋಟ್ಯಂತರ ಭಾರತೀಯರು ತಮ್ಮ ಭವಿಷ್ಯದ ಭದ್ರತೆಗಾಗಿ ತಮ್ಮ ಜೀವಮಾನದ ಉಳಿತಾಯವನ್ನು ಇಟ್ಟಿರುವ ಸಂಸ್ಥೆಗಳು. ಈ ವರದಿಯ ಬಹಿರಂಗವಾದ ನಂತರ ಅದಾನಿ ಗುಂಪುಗಳ ಬಂಡವಾಳೀಕರಣವು ಶೇರು ಮಾರುಕಟ್ಟೆಯಲ್ಲಿ ಶತಕೋಟಿಯಷ್ಟು ಕುಸಿದಿದೆ. ಇದು ಈ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಜನರ ಜೀವಿತಾವಧಿಯ ಉಳಿತಾಯದ ನಾಶಕ್ಕೆ ಕಾರಣವಾಗಬಾರದು.

ಸಿಪಿಐ(ಎಂ) ಇತರ ಜಾತ್ಯತೀತ ವಿರೋಧ ಪಕ್ಷಗಳೊಂದಿಗೆ ಸಂಯೋಜಿಸಿಕೊಂಡು ಮುಂಬರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಈ ವಿಷಯವನ್ನು ಎತ್ತುತ್ತದೆ.

ಕುಂಠಿತಗೊಳ್ಳುತ್ತಲೇ ಇರುವ ಭಾರತೀಯ ಅರ್ಥವ್ಯವಸ್ಥೆ:

ಆರ್ಥಿಕ ಹಿಂಜರಿತದ ಪರಿಸ್ಥಿತಿಗಳು ತೀವ್ರಗೊಳ್ಳುವುದರೊಂದಿಗೆ ಭಾರತೀಯ ಅರ್ಥವ್ಯವಸ್ಥೆಯು ಕುಂಠಿತಗೊಳ್ಳುತ್ತಲೇ ಇದೆ. ಆರ್ಥಿಕ ಚೇತರಿಕೆಯ ಕುರಿತು ಸರ್ಕಾರವು ಮಾಡಿದ ಎಲ್ಲಾ ಪ್ರಚಾರ ಮತ್ತು ವಾದಗಳ ಹೊರತಾಗಿಯೂ, ಭಾರತದ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚಿಸುವಲ್ಲಿ ಹೂಡಿಕೆಗಳು ಬೆಳೆಯುತ್ತಿಲ್ಲ. ಇದರರ್ಥ ಉದ್ಯೋಗ ಸೃಷ್ಟಿಯು ಇಳಿಮುಖವಲ್ಲದಿದ್ದರೂ ಸ್ಥಗಿತಗೊಂಡಿದೆ. ಇದು ಹೆಚ್ಚಿನ ಬಡತನ ಮತ್ತು ಸಂಕಷ್ಟಗಳಿಗೆ ಒತ್ತು ಕೊಡುತ್ತಿದೆ.

ಹೊಲಸು ರೀತಿಯಲ್ಲಿ ವಿಸ್ತರಿಸುತ್ತಿರುವ ಅಸಮಾನತೆ:

'ಸರ್ವೈವಲ್ ಆಫ್ ದಿ ರಿಚೆಸ್ಟ್: ದಿ ಇಂಡಿಯಾ ಸಪ್ಲಿಮೆಂಟ್' ಶೀರ್ಷಿಕೆಯ ಆಕ್ಸ್‌ಫಾಮ್ ವರದಿಯು, ಭಾರತದ ಸಂಪತ್ತಿನ ಶೇಕಡಾ 40 ಕ್ಕಿಂತ ಹೆಚ್ಚು ಅದರ ಜನಸಂಖ್ಯೆಯ ಕೇವಲ ಶೇಕಡಾ 1 ರಷ್ಟು ಮಂದಿಯ ಒಡೆತನದಲ್ಲಿದೆ ಎಂದು ತೋರಿಸುತ್ತದೆ. 10 ಶ್ರೀಮಂತ ಭಾರತೀಯರ ಒಟ್ಟು ಸಂಪತ್ತು 2022 ರಲ್ಲಿ ರೂ. 27.52 ಲಕ್ಷ ಕೋಟಿಗಳು, 2021 ರಿಂದ ಶೇಕಡಾ 32.8 ರಷ್ಟು ಏರಿಕೆಯಾಗಿದೆ. ಜನಸಂಖ್ಯೆಯ ತಳಭಾಗದ ಶೇಕಡಾ 50 ರಷ್ಟು ಜನರ ಸಂಪತ್ತು ಕೇವಲ ಶೇಕಡಾ 3 ಮಾತ್ರ.

ಭಾರತದಲ್ಲಿ ಒಟ್ಟು ಶತಕೋಟ್ಯಾಧಿಪತಿಗಳ ಸಂಖ್ಯೆ 2020 ರಲ್ಲಿ 102 ಇದ್ದದ್ದು 2022 ರಲ್ಲಿ 166 ಕ್ಕೆ ಏರಿತು. ಇದಕ್ಕೆ ತದ್ವಿರುದ್ಧವಾಗಿ ಸುಮಾರು 23 ಕೋಟಿ ಜನರು ಬಡತನದಲ್ಲಿ ವಾಸಿಸುತ್ತಿದ್ದಾರೆ. ಇದು ವಿಶ್ವದಲ್ಲೆ ಅತಿ ಹೆಚ್ಚು.

ಭಾರತದಲ್ಲಿನ ಪ್ರತಿಗಾಮಿ ತೆರಿಗೆ ವಿಧಾನವನ್ನು ಗಮನಿಸಿದ ವರದಿಯು, ಆದಾಯದ ಶೇಕಡಾವಾರಾಗಿ ನಮ್ಮ ತಳ ಭಾಗದ ಶೇಕಡಾ 50 ರಷ್ಟು ಜನರು ತೆರುವ ಪರೋಕ್ಷ ತೆರಿಗೆಗಳ ಪ್ರಮಾಣ ಮೇಲಿನ 10 ಶೇಕಡಾ ಮಂದಿ ತೆರುವುದರ 6 ಪಟ್ಟು ಹೆಚ್ಚು. ಆಹಾರ ಮತ್ತು ಆಹಾರೇತರ ಅಗತ್ಯ ವಸ್ತುಗಳಿಂದ ಸಂಗ್ರಹಿಸಲಾದ ಒಟ್ಟು ತೆರಿಗೆಗಳಲ್ಲಿ ನೂರರಲ್ಲಿ 64.3 ರಷ್ಟನ್ನು ತಳ ಭಾಗದ ಶೇಕಡಾ 50 ರಷ್ಟು ಜನರು ತೆರುತ್ತಾರೆ.

ಮೋದಿ ಸರ್ಕಾರವು ಶ್ರೀಮಂತರಿಗೆ ನೀಡುತ್ತಲೇ ಇರುವ ತೆರಿಗೆ ರಿಯಾಯಿತಿಗಳನ್ನು ಹಿಂತೆಗೆದುಕೊಳ್ಳುವ ಸಮಯ ಬಂದಿದೆ, ಸಂಪತ್ತು ತೆರಿಗೆ ಮತ್ತು ಪಿತ್ರಾರ್ಜಿತ ತೆರಿಗೆಯನ್ನು ಜಾರಿಗೆ ತರಬೇಕು. ಎಲ್ಲಾ ಅಗತ್ಯ ವಸ್ತುಗಳ ಮತ್ತು ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿಯನ್ನು ರದ್ದುಗೊಳಿಸಬೇಕು.

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಯತ್ನ

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಯತ್ನಗಳು ವಿವಿಧ ರೀತಿಯಲ್ಲಿ ಉಲ್ಬಣಗೊಳ್ಳುತ್ತಲೇ ಇವೆ. ಬಿಜೆಪಿ ಆಡಳಿತವಿರುವ ಎಲ್ಲಾ ರಾಜ್ಯಗಳು ತಮ್ಮ ತಮ್ಮ ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದಾಗಿ ಘೋಷಿಸಿವೆ. ಇದರೊಂದಿಗೆ ಮುಸ್ಲಿಂ ವೈಯಕ್ತಿಕ ಕಾನೂನನ್ನು ರದ್ದುಗೊಳಿಸುವ ಕರ್ಕಶ ಟಿಪ್ಪಣಿಗಳೂ ಇರುತ್ತವೆ. ಎಲ್ಲಾ ಬಿಜೆಪಿ ರಾಜ್ಯ ಸರ್ಕಾರಗಳು ಈಗಾಗಲೇ ಮುಸ್ಲಿಂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು 'ಲವ್ ಜಿಹಾದ್' ಅಥವಾ 'ಗೋಸಂರಕ್ಷಣೆ' ಹೆಸರಲ್ಲಿ ಕಾನೂನುಗಳನ್ನು ಜಾರಿಗೊಳಿಸಿವೆ. ಯಾವುದೇ ಸ್ವಯಂಪ್ರೇರಿತ ಮತಾಂತರಗಳು ಮತ್ತು ಅಂತರ್ಧರ್ಮೀಯ ವಿವಾಹಗಳನ್ನು ನಿಷೇಧಿಸುವಂತಹ ಷರತ್ತುಗಳನ್ನು ವಿಧಿಸಿವೆ. ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳ ವಿರುದ್ಧ ಅಪಾಯಕಾರಿ ರೀತಿಯಲ್ಲಿ ದ್ವೇಷವನ್ನು ತೀವ್ರಗೊಳಿಸುತ್ತಿರುವ ವರದಿಗಳು ಹೆಚ್ಚುತ್ತಿವೆ.

ಉತ್ತರ ಪ್ರದೇಶ ಬಿಜೆಪಿ ರಾಜ್ಯ ಸರ್ಕಾರವು ಮುಸ್ಲಿಂ ಅಲ್ಪಸಂಖ್ಯಾತರಿಗೆ ಮೂಲಭೂತ ಸಾಂವಿಧಾನಿಕ ಖಾತರಿಗಳನ್ನು ನಿರಾಕರಿಸುವ ಉದ್ರೇಕಕಾರಿ ಕೋಮು ಧ್ರುವೀಕರಣವನ್ನು ಆಕ್ರಮಣಕಾರಿಯಾಗಿ ಅನುಸರಿಸುತ್ತಿದೆ. ಇತ್ತೀಚೆಗೆ, ಉತ್ತರ ಪ್ರದೇಶದ ಬರೇಲಿ ಜಿಲ್ಲೆಯ ಸರ್ಕಾರಿ ಶಾಲೆಯ ಪ್ರಾಂಶುಪಾಲರು ಜನಪ್ರಿಯ ಉರ್ದು ಪ್ರಾರ್ಥನೆ ಹಾಡನ್ನು ಹಾಡುವ ಮಕ್ಕಳನ್ನು ಶಾಲೆಯಿಂದ ಅಮಾನತುಗೊಳಿಸಿದ್ದಾರೆ.

ಛತ್ತೀಸ್‌ಗಢದ ಉತ್ತರ ಬಸ್ತಾರ್ ಜಿಲ್ಲೆಯಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ದೊಡ್ಡ ಪ್ರಮಾಣದ ದಾಳಿಗಳು ನಡೆಯುತ್ತಿವೆ. ಇಂತಹ ದಾಳಿಗಳಿಗೆ ನೆಪವಾಗಿ ಬಲಾತ್ಕಾರದ ಮತಾಂತರದ ಪ್ರಚಾರದಲ್ಲಿ ಸತ್ಯಾಂಶಗಳು ಕಂಡು ಬಂದಿಲ್ಲ. ಬಲವಂತದ ಮತಾಂತರದ ಒಂದು ಪ್ರಕರಣವೂ ವರದಿಯಾಗಿಲ್ಲ. ಇದು ಕ್ರಿಶ್ಚಿಯನ್ ಸಮುದಾಯವನ್ನು ಗುರಿಯಾಗಿಸಿಕೊಂಡು ದಾಳಿ ಮಾಡುವ ಅಜೆಂಡಾವನ್ನು ಅನುಸರಿಸುವ ಮತ್ತು ಆರ್‌ಎಸ್‌ಎಸ್/ಬಿಜೆಪಿಯ ಕೃಪಾಪೋಷಣೆಯಲ್ಲಿ ಬಜರಂಗದಳ 'ಘರ್ ವಾಪ್ಸಿ' ಸ್ವೀಕರಿಸುವಂತೆ ಬಲವಂತಪಡಿಸುವ ಸ್ಪಷ್ಟ ಪ್ರಕರಣವಾಗಿದೆ. ಕ್ರಿಮಿನಲ್ ದಾಳಿಗಳನ್ನು, ನಿರ್ದಿಷ್ಟವಾಗಿ ಮಹಿಳೆಯರು ಮತ್ತು ಮಕ್ಕಳ ವಿರುದ್ಧ ಹಿಂಸಾಚಾರದೊಂದಿಗೆ ಹರಿಯ ಬಿಡಲಾಗಿದೆ.


ಒಬ್ಬ ಬಿಜೆಪಿ ಸಂಸದ ಮತ್ತು ಭಾರತೀಯ ಕುಸ್ತಿ ಫೆಡರೇಶನ್ ಅಧ್ಯಕ್ಷ ಅಂತರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಪದಕ ಗೆದ್ದ ಮಹಿಳಾ ಕುಸ್ತಿಪಟುಗಳಿಂದ ಲೈಂಗಿಕ ಕಿರುಕುಳದ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾರೆ. ಅವರ ವಿರುದ್ಧ ಸರಕಾರವಾಗಲಿ, ಆಡಳಿತ ಪಕ್ಷವಾಗಲಿ ಯಾವುದೇ ಕ್ರಮಕೈಗೊಂಡಿಲ್ಲ.

ಬಿಲ್ಕಿಸ್ ಬಾನೊ ಪ್ರಕರಣದಲ್ಲಿ ಅಪರಾಧಿಗಳ ಜೀವಾವಧಿ ಶಿಕ್ಷೆಯನ್ನು ಮಾಫಿ ಮಾಡಿ ಬಿಡುಗಡೆಗೊಳಿಸಿದ ನಂತರ, ಜೂನ್ 2014 ರಲ್ಲಿ ಪುಣೆಯಲ್ಲಿ ನಡೆದ ಗಲಭೆ ಮತ್ತು ಮೊಹ್ಸಿನ್ ಶೇಖ್ ಕಗ್ಗೊಲೆಯ ಪ್ರಕರಣದಲ್ಲಿ ಎಲ್ಲಾ 21 ವ್ಯಕ್ತಿಗಳನ್ನು ಆರೋಪ ಮುಕ್ತಗೊಳಿಸಲಾಗಿದೆ. ಇದನ್ನು ಹಿಂದುತ್ವವಾದಿ ಸಂಘಟನೆಗಳ ದೊಡ್ಡ ಪಡೆಯೇ ಸ್ವಾಗತಿಸಿದೆ. .ಇದನ್ನು ಉನ್ನತ ನ್ಯಾಯಾಲಯದಲ್ಲಿ ಪ್ರಶ್ನಿಸಲು ಪೊಲೀಸರು ಮತ್ತು ಆಡಳಿತ ಇದುವರೆಗೆ ಮುಂದಾಗಿಲ್ಲ.

ನ್ಯಾಯಾಂಗದ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವ ಯತ್ನ

'ಪಳಗಿಸಿದ' ನ್ಯಾಯಾಂಗವನ್ನು ಹೊಂದುವ ಪ್ರಯತ್ನದಲ್ಲಿ,ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಕೊಲಿಜಿಯಂಗಳು ಶಿಫಾರಸು ಮಾಡಿದ ವಿವಿಧ ಹೆಸರುಗಳನ್ನು ಅನುಮೋದಿಸಲು ವಿಳಂಬ ಅಥವಾ ನಿರಾಕರಿಸುವ ಮೂಲಕ ಸರ್ಕಾರವು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ಹಸ್ತಕ್ಷೇಪ ಮಾಡುತ್ತಿದೆ,

ಉನ್ನತ ನ್ಯಾಯಾಂಗವನ್ನು ಕಾರ್ಯಾಂಗಕ್ಕೆ ಅಧೀನಗೊಳಿಸುವುದು ಮೋದಿ ಸರ್ಕಾರದ ಗುರಿಯಾಗಿದೆ. ಸಾಂವಿಧಾನಿಕ ಯೋಜನೆಯಲ್ಲಿರುವ ನ್ಯಾಯಾಂಗದ ಸ್ವಾತಂತ್ರ್ಯವನ್ನು ಕೃಶಗೊಳಿಸುವುದು ಸರ್ವಾಧಿಕಾರಶಾಹಿಗೆ ಸಂಪೂರ್ಣ ಪ್ರಾಬಲ್ಯವನ್ನು ಕೊಡುತ್ತದೆ



ರಾಜ್ಯಪಾಲರ ಪಾತ್ರ

ಒಕ್ಕೂಟತತ್ವದ ಮೇಲಿನ ದಾಳಿಯನ್ನು ತೀವ್ರಗೊಳಿಸುತ್ತಾ, ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ರಾಜ್ಯಪಾಲರುಗಳು ಮತ್ತು ಉಪ ರಾಜ್ಯಪಾಲರುಗಳು

ಪುಟ 12 ಕ್ಕೆ

ವಿದ್ಯುತ್ ಖಾಸಗೀಕರಣ, ಪಂಪ್‌ಸೆಟ್ ಗೆ ಪ್ರಿಪೇಯ್ಡ್ ಮೀಟರ್ ವಿರೋಧಿಸಿ ಅಂಕೋಲಾದಲ್ಲಿ ರೈತರ ಸಮಾವೇಶ

ಒಂದು ದೇಶ ಅಭಿವೃದ್ಧಿಯಾಗಬೇಕಾದರೆ ಕೃಷಿ ಪ್ರದಾನವಾಗಿರಬೇಕು. ಆದರೆ ಭಾರತದಲ್ಲಿ ಕೃಷಿಗೆ ಹೆಚ್ಚಿನ ಮಹತ್ವ ನೀಡದ ಹಿನ್ನೆಲೆಯಲ್ಲಿ ರೈತರು ಕೃಷಿಯಿಂದ ದೂರವಾಗುತ್ತಿದ್ದಾರೆ. ಸರಕಾರ ಈಗ ವಿದ್ಯುತ್ ಮಸೂದೆ ಜಾರಿಗೊಳಿಸಲು ಹೊರಟಿರುವುದು ಕೃಷಿಕರನ್ನು ಬಲಿಕೊಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಫೆಬ್ರವರಿ 16 ರಂದು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ 'ಸಂಯುಕ್ತ ಹೋರಾಟ ಕರ್ನಾಟಕ' ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಬೇಕು ಎಂದು ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ ಹೇಳಿದರು. ವಿದ್ಯುತ್ ಖಾಸಗೀಕರಣ, ಪಂಪ್‌ಸೆಟ್ ಗಳಿಗೆ ಪ್ರಿಪೇಯ್ಡ್ ಮೀಟರ್ ಅಳವಡಿಕೆ ವಿರೋಧಿಸಿ ಅಂಕೋಲಾದಲ್ಲಿ ನಡೆದ ತಾಲೂಕು ಮಟ್ಟದ ರೈತರ ಸಮಾವೇಶದಲ್ಲಿ ಅವರು ಹೇಳಿದರು.

ಬಿಜೆಪಿಯವರು ಬಾಯಿ ತೆರೆದರೆ ಶ್ರೀರಾಮನ ಬಗ್ಗೆ ಮಾತನಾಡುತ್ತಾರೆ. ಶ್ರೀರಾಮ ತನ್ನ ತಂದೆಯ ಮಾತಿನಂತೆ ನಡೆದುಕೊಂಡರೆ, ರಾಮನ ಕುರಿತು ಮಾತನಾಡುವ ಮೋದಿಯವರು, ದೆಹಲಿಯಲ್ಲಿ ನಡೆದ ಕೃಷಿ ಮಸೂದೆ ವಾಪಸ್ ಪಡೆಯುವಂತೆ ಒತ್ತಾಯಿಸಿ ನಡೆದ ರೈತರ ಪ್ರತಿಭಟನೆಯಲ್ಲಿ ಲಿಖಿತವಾಗಿ ನೀಡಿದ ಭರವಸೆಗಳನ್ನು ಈಡೇರಿಸಲಿಲ್ಲ. ಬದಲಾಗಿ ಈಗ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಮುಂದಾಗುವ ಮೂಲಕ ಅವರು ವಚನ ಭ್ರಷ್ಟರಾಗಿದ್ದಾರೆ ಎಂದರು.

ಕೇಂದ್ರ ಸರಕಾರ ಜಾರಿಗೊಳಿಸಲು ಹೊರಟಿರುವ ವಿದ್ಯುತ್ ಮಸೂದೆಯನ್ನು ಕೇರಳ, ತೆಲಂಗಾಣ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ತಮಿಳುನಾಡು ರಾಜ್ಯ ಸರಕಾರಗಳು ವಿರೋಧಿಸಿವೆ. ಆದರೆ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದನ್ನು ವಿರೋಧಿಸದೇ ಮೌನವಾಗಿದ್ದು ಬೆಂಬಲಿಸುತ್ತಿದ್ದಾರೆ. ಇವರೊಬ್ಬ ಬೆನ್ನುಮೂಳೆ ಇಲ್ಲದ ಮುಖ್ಯಮಂತ್ರಿಯಾಗಿದ್ದು, ಬೊಂಬೆಯ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದು ಟಿ. ಯಶ್ವಂತ ಆರೋಪಿಸಿದರು.



ಕರ್ನಾಟಕ ಪ್ರಾಂತ ರೈತಸಂಘದ ಜಿಲ್ಲಾಧ್ಯಕ್ಷ ಶಾಂತಾರಾಮ ನಾಯಕ ಮಾತನಾಡಿ, ಖಾಸಗಿ ಕಂಪನಿಯವರಿಗೆ ಲಾಭ ಮಾಡಿಕೊಡಲು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ರೈತರ ಬದುಕನ್ನು ಬಲಿಕೊಡುತ್ತಿದೆ. ಕೃಷಿಗೆ ಶೇ. 17ರಷ್ಟು ಮಾತ್ರ ವಿದ್ಯುತ್ ಬಳಕೆಯಾಗುತ್ತದೆ. ಲಕ್ಷಾಂತರ ರೈತರು ಉಚಿತ ವಿದ್ಯುತ್ತಿನಿಂದಾಗಿ ಕೃಷಿಮಾಡಿ ದೇಶ ಹಾಗೂ ವಿದೇಶಕ್ಕೆ ಆಹಾರ ನೀಡುತ್ತಿದ್ದಾರೆ. ಕೋವಿಡ್‌ನಂತಹ ಪರಿಸ್ಥಿತಿಯಲ್ಲಿಯೂ ಕೂಡ ಭಾರತ ಆಹಾರದ ಸ್ವಾವಲಂಬಿಯಾಗಿ ಬದುಕಿದೆ. ಹೀಗಾಗಿ ಫೆ. 16ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೃಹತ್ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಅಗಸೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ ರಾಮಚಂದ್ರ ಡಿ. ನಾಯ್ಕ ಮಾತನಾಡಿ, ಈಗ ಮನೆಗೆ ಬರುವ ವಿದ್ಯುತ್ ಬಿಲ್ ಅಧಿಕವಾಗಿದೆ. ಇದನ್ನೇ ಕಟ್ಟಲು ಜನರು ಪರಿತಪಿಸುವಾಗ ಇನ್ನು ಕೃಷಿ ಪಂಪ್‌ಸೆಟ್‌ಗಳನ್ನು ಖಾಸಗೀಕರಣಗೊಳಿಸಿದರೆ ರೈತರು ಬೀದಿಗೆ ಬೀಳಲಿದ್ದಾರೆ. ರೈತರ ಅಭಿವೃದ್ಧಿ ನೋಡುವುದನ್ನು ಬಿಟ್ಟು ಕೇಂದ್ರ ಸರಕಾರ ಕೇವಲ ಉದ್ದಿಮೆಗಳಿಗೆ ಅನುಕೂಲ ಮಾಡಿಕೊಡುತ್ತಿದೆ. ಮುಂದಿನ ದಿನಗಳಲ್ಲಿ ಜನರು ಇವರಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಅಚವೆ ಗ್ರಾಮ ಪಂಚಾಯತ ಉಪಾಧ್ಯಕ್ಷ ಬಾಲಚಂದ್ರ ಶೆಟ್ಟಿ ಮಾತನಾಡಿದರು. ಪ್ರಮುಖರಾದ ಸುಧಾಕರ ಜಾಂಬಾವಳಿಕರ, ಕರ್ನಾಟಕ ಪ್ರಾಂತ ರೈತಸಂಘದ ಜಿಲ್ಲಾ ಉಪಾಧ್ಯಕ್ಷ ತಿಮ್ಮಪ್ಪ ಗೌಡ, ಸಂತೋಷ ನಾಯ್ಕ, ರಮಾನಂದ ನಾಯ್ಕ ಅಚವೆ, ಉದಯ ನಾಯ್ಕ ಹೊಸಗದ್ದೆ, ನಾಗರಾಜ ಹೆಗಡೆ, ಉದಯ ನಾಯ್ಕ ಬೇಲೆಕೇರಿ, ಎಚ್.ಬಿ. ನಾಯಕ, ರಾಜು ವಿ. ಗೌಡ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ತಾಲೂಕು ಅಧ್ಯಕ್ಷ ಗೌರೀಶ ನಾಯಕ ಸ್ವಾಗತಿಸಿದರು. ಸಭೆಗೆ ಆಗಮಿಸಿದ ಹಲವರು ಮುಂದಿನ ಹೋರಾಟದ ಬಗ್ಗೆ ಚರ್ಚಿಸಿದರು.

ಕರ್ನಾಟಕ ಪ್ರಾಂತ ರೈತಸಂಘ, ನೀರಾವರಿ ವಿದ್ಯುತ್ ಪಂಪ್‌ಸೆಟ್ ಬಳಕೆದಾರರ ಸಂಘದ ಆಶ್ರಯದಲ್ಲಿ ಈ ಸಮಾವೇಶ ನಡೆಯಿತು. ರೈತರ ಬೇಡಿಕೆ ಮೇಲೆ 'ಸಂಯುಕ್ತ ಹೋರಾಟ ಕರ್ನಾಟಕ' ನೇತೃತ್ವದಲ್ಲಿ ಫೆ. 16ರಂದು ವಿಧಾನ ಸೌಧ ಚಲೋ ನಡೆಯಲಿದ್ದು, ಇದರಲ್ಲಿ ತಾಲೂಕಿನಿಂದ ನೂರಾರು ಸಂಖ್ಯೆಯಲ್ಲಿ ಭಾಗವಹಿಸಲು ಈ ಸಮಾವೇಶದಲ್ಲಿ ತೀರ್ಮಾನಿಸಲಾಯಿತು.

ಫಾಝಿಲ್ ಕೊಲೆ ಪ್ರಕರಣ ಮರು ತನಿಖೆಗೆ ಡಿವೈಎಫ್ಐ ಆಗ್ರಹ

ಫಾಝಿಲ್ ಕೊಲೆಯನ್ನು ಪ್ರತಿಕಾರದ ಕೊಲೆ ಎಂದು ಹೇಳಿಕೆ ಕೊಟ್ಟ ಶರಣ್ ಪಂಪ್ ವೆಲ್ ಬಂಧನಕ್ಕೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಒತ್ತಾಯಿಸಿದೆ. ಫಾಝಿಲ್ ಕೊಲೆ ಪ್ರಕರಣವನ್ನು ಮರು ತನಿಖೆ ಮಾಡಬೇಕೆಂದು ಆಗ್ರಹಿಸಿ 2023ರ ಫೆಬ್ರುವರಿ 3 ರಂದು ಮಂಗಳೂರಿನ ಮಿನಿ ವಿಧಾನಸೌಧದ ಬಳಿ ಪ್ರತಿಭಟನೆ ನಡೆಸಿದ ಸಂಘಟನೆಯ ಕಾರ್ಯಕರ್ತರು, ಶರಣ್ ಪಂಪ್ ವೆಲ್ ಹೇಳಿಕೆಯನ್ನು ಖಂಡಿಸಿದರು.

ಪ್ರತಿಭಟನೆಯಲ್ಲಿ ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ಬಿ.ಕೆ ಇಮ್ತಿಯಾಜ್ ಮಾತನಾಡುತ್ತಾ, ತುಮಕೂರಿನ ಕಾರ್ಯಕ್ರಮವೊಂದರಲ್ಲಿ ಬಜರಂಗದಳದ ಮುಖಂಡ ಶರಣ್ ಪಂಪ್ ವೆಲ್ ನೀಡಿದ ಹೇಳಿಕೆ ನಾಗರೀಕ ಸಮಾಜ ಒಪ್ಪುವಂತದಲ್ಲ. ಪಾಝಿಲ್ ಕೊಲೆಯು ನೆಟ್ಟಾರ್ ಕೊಲೆಗೆ ಪ್ರತಿಕಾರ ಎಂಬ ಹೇಳಿಕೆಯಿಂದ ಫಾಝಿಲ್ ಕೊಲೆಯಲ್ಲಿ ಶರಣ್ ಪಂಪ್ ವೆಲ್ ಪಾತ್ರವೂ ಇದೆ ಎಂಬುದು ಸಾರ್ವಜನಿಕವಾಗಿ ಬಯಲಾಗಿದೆ. ಮಾತ್ರವಲ್ಲ ಗುಜರಾತ್ ಹಿಂಸಾಚಾರವನ್ನೂ ಕೂಡಾ ಸಮರ್ಥಿಸಿರುವುದರಿಂದ ಜನಾಂಗೀಯ ಹತ್ಯೆಗೆ ಕರೆ ನೀಡಿದಂತಿದೆ. ಇಂತಹ ಹೇಳಿಕೆ ಸಮಾಜದಲ್ಲಿ ಅಶಾಂತಿಯನ್ನು ಸೃಷ್ಟಿಸಲಿದ್ದು ಈ ಹಿನ್ನಲೆಯಲ್ಲಿ ಪೊಲೀಸ್ ಇಲಾಖೆ ಈ ಕೂಡಲೇ ಮತೀಯವಾದಿ ಶರಣ್ ಪಂಪ್ ವೆಲ್ ನನ್ನು ಬಂಧಿಸಬೇಕು. ಮಾತ್ರವಲ್ಲ ಆತನನ್ನು ಜಿಲ್ಲೆಯಿಂದಲೇ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಬಜರಂಗದಳ ಯಾವತ್ತೂ ಬಡತನ, ಉದ್ಯೋಗ, ವೇತನ, ಆರೋಗ್ಯ, ಶಿಕ್ಷಣ ಮತ್ತು ಜನರ ದಿನನಿತ್ಯದ ಬದುಕಿನ ಸಮಸ್ಯೆಗಳ ಕುರಿತು ಮಾತನಾಡುವುದಿಲ್ಲ. ನಿಮ್ಮ ಈ ಮತೀಯ ರಾಜಕಾರಣವನ್ನು ಯಾವುದೇ ಮುಲಾಜಿಲ್ಲದೆ ನಾವು ವಿರೋಧಿಸುತ್ತೇವೆ. ಇಂತಹ ಮತೀಯ ರಾಜಕಾರಣದ ವಿರುದ್ಧದ ಹೋರಾಟದಲ್ಲಿ ಸಂಗಾತಿ ಶ್ರೀನಿವಾಸ್ ಬಜಾಲ್, ಭಾಸ್ಕರ್ ಕುಂಬಳೆ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ಹುತಾತ್ಮರಾಗಿದ್ದಾರೆ ನೆನಪಿರಲಿ ಎಂದು ಇಮ್ತಿಯಾಜ್ ಎಚ್ಚರಿಸಿದರು.



ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡುತ್ತಾ, 'ದೈಹಿಕ ಶಕ್ತಿ ಸಾಮರ್ಥ್ಯದಿಂದಲ್ಲ, ಆತ್ಮಶಕ್ತಿಯಿಂದ. ವಿಧ್ವಂಸಕ ಕೃತ್ಯದಿಂದಲ್ಲ, ಶಾಂತಿ ಮತ್ತು ಪ್ರೀತಿಯಿಂದಲೇ ಭಾರತ ಮೇಲೆದ್ದು ಬರುತ್ತದೆ' ಎಂದು ಸಾರಿದ ಸ್ವಾಮಿ ವಿವೇಕಾನಂದರ ಆಶಯವನ್ನು ಶರಣ್ ಪಂಪ್ ವೆಲ್ ತಿಳಿಯಬೇಕು. ಫಾಝಿಲ್ ಕೊಲೆ ಹಿಂದೂ ಯುವಕರ ಶೌರ್ಯವಲ್ಲ. ಅದೊಂದು ಕ್ರೌರ್ಯ.. ಇಂತಹ ಹೇಳಿಕೆಯು ಹಿಂದೂ ಸಮಾಜದ ಮೇಲೆ ಕಳಂಕವನ್ನು ತಂದೊಡ್ಡಿದೆ. ಅಮಾಯಕ ಮುಸಲ್ಮಾನರನ್ನು ಕೊಲ್ಲುವುದು ಶೌರ್ಯವೆಂದಾದರೆ ನಿಮ್ಮದೇ ಯುವಕರು ಕೊಲೆ ಮಾಡಿದ ಬಂಟ್ವಾಳದ ಹರೀಶ್ ಪೂಜಾರಿ, ಉಡುಪಿಯ ಪ್ರವೀಣ್ ಪೂಜಾರಿ ಮತ್ತು ಆರ್ ಎಸ್ ಎಸ್ ಕಾರ್ಯಕರ್ತ ವಿನಾಯಕ ಬಾಳಿಗ ಇವರೆಲ್ಲರ ಕೊಲೆಗಳನ್ನೆಲ್ಲಾ ಏನೆನ್ನಬೇಕೆಂದು? ಇದಕ್ಕೆ ಶರಣ್ ಪಂಪ್ವೆಲ್ ಉತ್ತರಿಸಬೇಕು ಎಂದರು.

ಡಿವೈಎಫ್ಐ ಜಿಲ್ಲಾ ಮುಖಂಡರಾದ ಶ್ರೀನಾಥ್ ಕಾಟಿಪಳ್ಳ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಡಿವೈಎಫ್ಐ ನಗರ ಅಧ್ಯಕ್ಷರಾದ ನವೀನ್ ಕೊಂಚಾಡಿ, ಜಿಲ್ಲಾ ಮುಖಂಡರಾದ ನಿತಿನ್ ಕುತ್ತಾರ್, ಸಾಧಿಕ್ ಕಣ್ಣೂರು, ಅಶ್ಫಕ್ ಹಳೇಕಲ, ಎಸ್‌ಎಫ್ಐ ಜಿಲ್ಲಾ ಕಾರ್ಯದರ್ಶಿ ರೇವಂತ್ ಕದ್ರಿ, ಅಸುಂತ ಡಿಸೋಜ, ಯೋಗಿತಾ, ಮುಸ್ತಫಾ ಕಲ್ಲಕಟ್ಟೆ, ಸಾಮಾಜಿಕ ಮುಖಂಡ ಮಹಮ್ಮದ್ ಸಾಲಿ ಬಜಪೆ, ಹನೀಫ್ ಬೆಂಗರೆ, ತಯ್ಯೂಬ್ ಬೆಂಗರೆ, ಜಗದೀಶ್ ಬಜಾಲ್, ನೆಲ್ಸನ್ ರೋಚ್ ಮುಂತಾದವರು ಉಪಸ್ಥಿತರಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಅತಿಥಿ ಅಂಕಣ



ನಾ. ದಿವಾಕರ

ಚುನಾವಣಾ ಪ್ರಣಾಳಿಕೆಗಳಂತಾಗುತ್ತಿರುವ ಮುಂಗಡ ಪತ್ರಗಳು



ಅರ್ಥವ್ಯವಸ್ಥೆಯ ನಿರ್ವಹಣೆಯಲ್ಲಿ ಒಂದು ಹಣಕಾಸು ವರ್ಷದಲ್ಲಿ ಸರ್ಕಾರವು ತನ್ನ ಖರ್ಚುವೆಚ್ಚಗಳನ್ನು ಸರಿದೂಗಿಸುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ಯೋಜನೆಗಳು ಮತ್ತು ಕಾರ್ಯಗತಗೊಳಿಸಬಹುದಾದ ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರ ಸರ್ಕಾರವು ತನ್ನ ಆದಾಯವನ್ನು ಹೇಗೆ ಗಳಿಸುತ್ತದೆ ಮತ್ತು ಸಾಮಾನ್ಯವಾಗಿ ಆದಾಯವನ್ನೂ ಮೀರಿದ ವೆಚ್ಚವನ್ನು ಸರಿದೂಗಿಸಲು ಯಾವ ಮಾರ್ಗಗಳನ್ನು ಅನುಸರಿಸುತ್ತದೆ ಹಾಗೂ ಈ ಮೊತ್ತವನ್ನು ಹೇಗೆ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ವಿನಿಯೋಗ ಮಾಡುತ್ತದೆ ಎಂದು ಸ್ಥೂಲವಾಗಿ ಜನಸಾಮಾನ್ಯರ ಮುಂದಿಡುವ ಒಂದು ದಸ್ತಾವೇಜು 'ವಾರ್ಷಿಕ ಮುಂಗಡಪತ್ರ ಅಥವಾ ಬಜೆಟ್'. ಇದನ್ನು ಖರ್ಚು ವೆಚ್ಚಗಳ ಪಟ್ಟಿ ಎಂದರೂ ಸರಿಯೇ. ಜನಸಾಮಾನ್ಯರಿಂದ ವಸೂಲಿ ಮಾಡುವ ತೆರಿಗೆಯನ್ನು ಸರ್ಕಾರ ಹೇಗೆ ಜನರ ಏಳಿಗೆಗಾಗಿಯೇ ಬಳಸುತ್ತದೆ ಎನ್ನುವುದು ಬಜೆಟ್‌ಗಳಿಂದ ಸ್ಪಷ್ಟವಾಗುವುದಾದರೂ, ಇದು ಸರ್ಕಾರ ಅನುಸರಿಸುವ ಬೃಹದಾರ್ಥಿಕ ನೀತಿಗಳಿಗೆ ಮಂಜಿನ ಪರದೆಯಂತೆ ಕಾರ್ಯನಿರ್ವಹಿಸುತ್ತದೆ. ಬಜೆಟ್ ಮಂಡನೆಗೂ ಮುನ್ನ ಹಣಕಾಸು ಸಚಿವಾಲಯ ಸಲ್ಲಿಸುವ ಆರ್ಥಿಕ ಸಮೀಕ್ಷೆಯಲ್ಲಿ ಸರ್ಕಾರದ ದೀರ್ಘಕಾಲಿಕ ಯೋಜನೆಗಳನ್ನು ಸ್ಪಷ್ಟೀಕರಿಸುತ್ತದೆ. ಇವೆರಡರ ನಡುವೆ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನು ಗ್ರಹಿಸದೆ ಹೋದರೆ, ಬಹುಶಃ ಬಜೆಟ್ ಎನ್ನುವುದು ಕೇವಲ ಒಂದು ಪ್ರಹಸನವಾಗಿಬಿಡುತ್ತದೆ.

ಸರ್ಕಾರಗಳ ವಾರ್ಷಿಕ ಮುಂಗಡ ಪತ್ರಗಳು ಕ್ರಮೇಣ ತಮ್ಮ ಪಾರದರ್ಶಕತೆಯನ್ನು ಕಳೆದುಕೊಳ್ಳುತ್ತಿವೆ

ಕೇಂದ್ರ ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಮಂಡಿಸಿರುವ 2023–24ರ ಮುಂಗಡ ಪತ್ರ, ಸಕಾರಾತ್ಮಕವಾಗಿ ಅಲ್ಲವಾದರೂ, ಹಲವು ಕಾರಣಗಳಿಗಾಗಿ ವಿಶಿಷ್ಟ ಎನಿಸುತ್ತವೆ. 2014ರ ನಂತರದಲ್ಲಿ ದೇಶದ ಆಡಳಿತ ವ್ಯವಸ್ಥೆ ಹೆಚ್ಚು ಹೆಚ್ಚು ಕೇಂದ್ರೀಕೃತವಾಗುತ್ತಿರುವುದು ಸ್ಪಷ್ಟವಾದರೂ, ಈ ವರ್ಷದ ಬಜೆಟ್ ಇದನ್ನು ದೃಢೀಕರಿಸಿದಂತೆ ತೋರುತ್ತದೆ. ದೇಶದ ಆರ್ಥಿಕತೆಯ ನಿರ್ವಹಣೆಯಲ್ಲಿ ರಾಜ್ಯಗಳ ಪಾತ್ರವನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ ಜಿಎಸ್‌ಟಿ ಪ್ರಧಾನ ಅಸ್ತ್ರವಾಗಿದ್ದರೆ, ವಾರ್ಷಿಕ ಬಜೆಟ್‌ಗಳು ನಿರಂತರವಾಗಿ ಬಳಸುವ ಮಾರ್ಗಗಳಾಗಿ ಕಾಣುತ್ತಿವೆ. ರಾಜ್ಯ ಸರ್ಕಾರಗಳಿಗೆ ತಮ್ಮ ಬಂಡವಾಳದ ವೆಚ್ಚವನ್ನು ಸರಿದೂಗಿಸಲು ಕೇಂದ್ರ ಸರ್ಕಾರದಿಂದ ನೀಡಲಾಗುವ ಹಣಕಾಸು ಅನುದಾನವನ್ನು ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಜಿಎಸ್‌ಟಿ ತೆರಿಗೆ ಸಂಗ್ರಹದಲ್ಲಿ ರಾಜ್ಯದ ಪಾಲನ್ನು ನೀಡಲು ವಿಳಂಬ ಮಾಡುವುದು ಸಹ ರಾಜ್ಯಗಳ ಆರ್ಥಿಕತೆಗೆ ಮಾರಕವಾಗಿ ಪರಿಣಮಿಸುವ ಸಾಧ್ಯತೆಗಳಿರುತ್ತವೆ.

ಕಾರ್ಪೋರೇಟ್ ಮಾರುಕಟ್ಟೆ ಕೇಂದ್ರಿತ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಯಾವುದೇ ರಾಜಕೀಯ ಪ್ರತಿರೋಧ ಇಲ್ಲದೆ (ಎಡಪಕ್ಷಗಳನ್ನು ಹೊರತುಪಡಿಸಿ) ಜಾರಿಗೊಳಿಸುತ್ತಿರುವ ಕೇಂದ್ರ ಸರ್ಕಾರ ಸ್ವಾತಂತ್ರ್ಯೋತ್ತರ ಭಾರತದ ಜನಕಲ್ಯಾಣ ಪ್ರಭುತ್ವದ ಪರಿಕಲ್ಪನೆಯನ್ನೇ ಕ್ರಮೇಣ ನಿರ್ಲಕ್ಷಿಸುತ್ತಿದೆ. ಸಾಮಾನ್ಯವಾಗಿ ಬಜೆಟ್ ಮಂಡನೆಯಾಗುವ ಸಂದರ್ಭದಲ್ಲಿ ಜನಸಾಮಾನ್ಯರು, ಬಡ ವರ್ಗಗಳು, ದುಡಿಯುವ ವರ್ಗಗಳು, ಕಾರ್ಮಿಕ ವಲಯ, ರೈತ ಸಮುದಾಯ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಹಾತೊರೆಯುವ ಜನಸಮೂಹಗಳು ಕೇಂದ್ರ ಸರ್ಕಾರದ ಬಜೆಟ್ ಮೂಲಕ ಕೆಲವು ಅನುಕೂಲತೆಗಳನ್ನು ನಿರೀಕ್ಷಿಸುತ್ತಿರುತ್ತವೆ. ಜನತೆಯ ನಿತ್ಯ ಜೀವನೋಪಾಯದ ಮಾರ್ಗಗಳನ್ನು ಸುಸ್ಥಿರಗೊಳಿಸುವುದರೊಂದಿಗೇ, ಸಾಮಾನ್ಯ ಜನತೆಗೆ ತಮ್ಮ ಜೀವನ ನಿರ್ವಹಣೆಗೆ ತಗಲುವ ವೆಚ್ಚವನ್ನು ಭರಿಸುವಷ್ಟು ಮಟ್ಟಿಗಾದರೂ ಜೋಲಿ ತುಂಬಿಸುವುದು ಸರ್ಕಾರಗಳ ಆದ್ಯತೆಯಾಗಬೇಕು. ನಿತ್ಯ ಮಾರುಕಟ್ಟೆಯ ಭಾಗಿದಾರರಾದ ಜನಸಾಮಾನ್ಯರ ಖರ್ಚು ಮಾಡುವ ಸಾಮರ್ಥ್ಯ ಹೆಚ್ಚಾಗುವುದರ ಮೂಲಕವೇ ಆರ್ಥಿಕತೆಯೂ ಸಹ ಹೆಚ್ಚು ಚಲನಶೀಲವಾಗಲು ಸಾಧ್ಯ ಎನ್ನುವುದನ್ನೂ ಸರ್ಕಾರಗಳು ಮನಗಾಣಬೇಕು.

ಮಾರುಕಟ್ಟೆ ಆರ್ಥಿಕತೆಯ ಹಿಡಿತ

ಆದರೆ ನವ ಉದಾರವಾದದ ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ ಸರ್ಕಾರಗಳ ಆದ್ಯತೆಗಳು ಬದಲಾಗಿವೆ. ಈ ಬದಲಾದ ಆದ್ಯತೆಗಳನ್ನು ಸಾಕಾರಗೊಳಿಸಲೆಂದೇ ನೀತಿ ಆಯೋಗ, ಹಣಕಾಸು ಆಯೋಗ ಮತ್ತು ವಿತ್ತ ಸಚಿವಾಲಯದ ಸ್ವರೂಪಗಳೂ ಬದಲಾಗುತ್ತಿವೆ. ಹಣಕಾಸು ಆಯೋಗದ ಶಿಫಾರಸುಗಳು ಮೇಲ್ನೋಟಕ್ಕೆ ರಾಜ್ಯಗಳ ಪರ ಅಥವಾ ಜನಕಲ್ಯಾಣ ನೀತಿಗಳ ಪರ ಎಂದು ತೋರಿದರೂ, ಆಳದಲ್ಲಿ ಕಾರ್ಪೋರೇಟ್ ಮಾರುಕಟ್ಟೆಯನ್ನು ಪೋಷಿಸುವುದನ್ನೇ ಆದ್ಯತೆಯಾಗಿರಿಸಿಕೊಳ್ಳುವ ಸರ್ಕಾರಗಳು ಈ ಶಿಫಾರಸುಗಳನ್ನು ಉಲ್ಲಂಘಿಸಿಯೇ ವಾರ್ಷಿಕ ಮುಂಗಡ ಪತ್ರಗಳನ್ನು ರೂಪಿಸುತ್ತವೆ. ಉದಾಹರಣೆಗೆ 2021–26ರ ಹಣಕಾಸು ಆಯೋಗದ ವರದಿಯ ಅನುಸಾರ ಕೇಂದ್ರದ ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲು ಶೇ 41ರಷ್ಟಿರಬೇಕಿತ್ತು. ಆದರೆ ಪ್ರಸಕ್ತ ಮುಂಗಡ ಪತ್ರದಲ್ಲಿ ಇದು ಕೇವಲ ಶೇ 30.4ರಷ್ಟಿದೆ. ಈ ತಾರತಮ್ಯದ ವಿರುದ್ಧ ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳು ಮಾತ್ರವೇ ದನಿ ಎತ್ತುತ್ತವೆ. ಆಡಳಿತಾರೂಢ ಪಕ್ಷದ ಸರ್ಕಾರಳಿಗೆ ಜನಕಲ್ಯಾಣಕ್ಕಿಂತಲೂ ತಮ್ಮ ರಾಜಕೀಯ ಭವಿಷ್ಯ ಮತ್ತು ಅಸ್ತಿತ್ವ ಪ್ರಧಾನ ಆದ್ಯತೆಯಾಗಿರುತ್ತದೆ.

ರಾಜ್ಯಗಳು ತಮ್ಮ ಬಜೆಟ್‌ಗಳಲ್ಲಿ ಆರೋಗ್ಯ ಕ್ಷೇತ್ರದ ವೆಚ್ಚವನ್ನು ಒಟ್ಟು ಮೊತ್ತದ ಶೇ.8 ರಷ್ಟು ವ್ಯಯಿಸಬೇಕು ಎಂದು ಹಣಕಾಸು ಆಯೋಗ ಶಿಫಾರಸು ಮಾಡುತ್ತದೆ. ಆದರೆ ಕಳೆದ ವರ್ಷದ ರಾಜ್ಯ ಬಜೆಟ್‌ನಲ್ಲಿ ಶೇ 5ರಷ್ಟು ಮಾತ್ರ ಆರೋಗ್ಯ ಕ್ಷೇತ್ರಕ್ಕೆ ನೀಡಲಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಈ ಬಾರಿ ಹೆಚ್ಚಿನ ಉತ್ತೇಜನ ನೀಡಲಾಗಿದ್ದರೂ, ಒಟ್ಟಾರೆ ಜಿಡಿಪಿ ಅನುಪಾತದಲ್ಲಿ ನೋಡಿದಾಗ, ಜಿಡಿಪಿಯ ಶೇ 2.9ರಷ್ಟು ಮಾತ್ರ ಶಿಕ್ಷಣಕ್ಕೆ ನೀಡಲಾಗಿದೆ. ಜಾಗತಿಕವಾಗಿ ಯಾವುದೇ ದೇಶದಲ್ಲಿ ಜಿಡಿಪಿಯ ಶೇ 6ರಷ್ಟನ್ನು ಶಿಕ್ಷಣ ಕ್ಷೇತ್ರಕ್ಕೆ ವ್ಯಯಿಸಿದರೆ ಮಾತ್ರವೇ ಅಲ್ಲಿ ಸಮಸ್ತ ಜನತೆಗೂ ಶೈಕ್ಷಣಿಕ ಸೌಲಭ್ಯಗಳು ಪೂರ್ಣಪ್ರಮಾಣದಲ್ಲಿ ಲಭ್ಯವಾಗಲು ಸಾಧ್ಯ ಎಂದು ಹೇಳಲಾಗುತ್ತದೆ. ಆದರೆ ಭಾರತದಲ್ಲಿ ಈವರೆಗೂ ಇದು ಶೇ 3ನ್ನು ದಾಟಿಲ್ಲ. ಈ ವರ್ಷ ಶಿಕ್ಷಣದ ಬಜೆಟ್ ಪ್ರಮಾಣವನ್ನು ಶೇ 8ರಷ್ಟು ಹೆಚ್ಚಿಸಿದ್ದರೂ, ಅದು ಒಟ್ಟಾರೆ ಶಿಕ್ಷಣ ವ್ಯವಸ್ಥೆಯ ಮುನ್ನಡೆಗೆ ಪೂರಕವಾಗಿರುವುದಿಲ್ಲ. ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಈ ಮೂರೂ ಕ್ಷೇತ್ರಗಳಲ್ಲಿ ತಳಮಟ್ಟದ ಜನತೆಗೆ ಸುಲಭವಾಗಿ ಎಟುಕುವಂತಹ ಸೇವಾ ಸೌಲಭ್ಯಗಳನ್ನು ಒದಗಿಸುವುದರಿಂದಲೇ ಸುಸ್ಥಿರ ಅಭಿವೃದ್ಧಿಯನ್ನೂ ಕಾಣಲು ಸಾಧ್ಯ. ಆದರೆ ನವ ಉದಾರವಾದಿ ಆರ್ಥಿಕ ನೀತಿಯಲ್ಲಿ ಸುಸ್ಥಿರತೆಯನ್ನು ಮಾರುಕಟ್ಟೆಯ ಚೌಕಟ್ಟಿನಲ್ಲಿ ನಿಷ್ಕರ್ಷೆ ಮಾಡುವುದರಿಂದ, ಈ ಮೂರೂ ಕ್ಷೇತ್ರಗಳು ಹೆಚ್ಚಿನ ಆದ್ಯತೆಗೆ ಅರ್ಹವಾಗುವುದಿಲ್ಲ.

ಇತ್ತೀಚೆಗೆ ಬಿಡುಗಡೆಯಾದ ಆಕ್ಸ್‌ಫಾಮ್ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಭಾರತದಲ್ಲಿ ಬಡತನ ಹೆಚ್ಚಳಕ್ಕೆ ಮೂಲ ಕಾರಣವನ್ನು ಗುರುತಿಸಬಹುದು. ನಿರುದ್ಯೋಗ, ಹಳ್ಳಿಗಾಡುಗಳ ಮಕ್ಕಳಲ್ಲಿ ಹೆಚ್ಚಾಗುತ್ತಿರುವ ಅಪೌಷ್ಟಿಕತೆ, ಪ್ರಾಥಮಿಕ ಆರೋಗ್ಯ ಸೇವೆಯ ಕೊರತೆ, ಎಳೆ ಮಕ್ಕಳಲ್ಲಿ ಬೆಳವಣಿಗೆಯ ಕೊರತೆ ಮತ್ತು ಹಸಿವೆಯ ಪ್ರಮಾಣ ಇವೆಲ್ಲವೂ ಹೆಚ್ಚಾಗಿರುವುದು, ಪ್ರಾಥಮಿಕ ಶಿಕ್ಷಣದ ಪ್ರವೇಶಾತಿ ಪರಿಣಾಮದ ಮೇಲೆ ಸಹ ಪರಿಣಾಮ ಬೀರುತ್ತವೆ. ಹಾಗಾಗಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ಉತ್ತೇಜಿಸುವ ನೀತಿಗಳು ಪರಸ್ಪರ ಪೂರಕವಾಗಿರಬೇಕಾಗುತ್ತದೆ. ಆರೋಗ್ಯ ಕ್ಷೇತ್ರಕ್ಕೆ ಈ ಬಜೆಟ್‌ನಲ್ಲಿ ಶೇ 3.43ರಷ್ಟು ಹೆಚ್ಚು ಮೊತ್ತವನ್ನು ನಿಯೋಜಿಸಿದ್ದರೂ, ಭಾರತದ ಆರೋಗ್ಯ ಕ್ಷೇತ್ರದ ವೆಚ್ಚ ವಿಶ್ವದಲ್ಲೇ ಕನಿಷ್ಟ ಮಟ್ಟದಲ್ಲಿರುವುದು ವಾಸ್ತವ. ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ನೋಡಿದಾಗ ಭಾರತದಲ್ಲಿ ಅತಿ ಕಡಿಮೆ ವೆಚ್ಚವನ್ನು ಕಾಣಬಹುದು.

ಜನಕಲ್ಯಾಣ ಪ್ರಭುತ್ವದ ನೀತಿಗಳಿಗೆ ವಿದಾಯ ಹೇಳಿ, ಮಾರುಕಟ್ಟೆ ನೀತಿಗಳನ್ನೇ ಪ್ರಧಾನವಾಗಿ ಆಲಂಗಿಸಿರುವ ಕೇಂದ್ರ ಸರ್ಕಾರ, ಈಗ ಜಾರಿಯಲ್ಲಿರುವ ಹಲವಾರು ಜನಕಲ್ಯಾಣ ಯೋಜನೆಗಳಿಗೆ ನೀಡಲಾಗುವ ಅನುದಾನಗಳಲ್ಲೂ ಕಡಿತ ಮಾಡುತ್ತಲೇ ಬಂದಿದ್ದು, ಪ್ರಸಕ್ತ ಬಜೆಟ್‌ನಲ್ಲಿ ಇದು ನಿಚ್ಚಳವಾಗಿ ಗೋಚರಿಸುತ್ತದೆ. 81 ಕೋಟಿ ಜನತೆಗೆ ಇನ್ನೂ ಒಂದು ವರ್ಷದ ಕಾಲ ಉಚಿತ ಪಡಿತರವನ್ನು ನೀಡುವುದಾಗಿ ಸರ್ಕಾರವು ಇತ್ತೀಚೆಗೆ ಘೋಷಿಸಿರುವುದೇ ಭಾರತದಲ್ಲಿರುವ ಬಡತನ ಮತ್ತು ಹಸಿವಿನ ಸೂಚಿಯಾಗಿ ಕಾಣುತ್ತದೆ. ಅದರೂ ಈ ವರ್ಷದ ಮುಂಗಡಪತ್ರದಲ್ಲಿ ಆಹಾರ ಪೂರೈಕೆಗೆ ನೀಡುವ ಸಬ್ಸಿಡಿಯಲ್ಲಿ 80 ಕೋಟಿ ರೂಗಳನ್ನು ಕಡಿತಗೊಳಿಸಲಾಗಿದೆ. ಹಸಿವಿನ ಜಾಗತಿಕ ಸೂಚ್ಯಂಕದಲ್ಲಿ ಭಾರತ ತೀವ್ರ ಕುಸಿದ ಕಂಡಿರುವುದರ ಹಿನ್ನೆಲೆಯಲ್ಲಿ ಈ ಮೊತ್ತವನ್ನು ಹೆಚ್ಚಿಸಬೇಕಿತ್ತು. 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಯುಪಿಎ ಸರ್ಕಾರದ ಮಹತ್ವಾಕಾಂಕ್ಷಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆ ಅಥವಾ ನರೇಗಾ ಯೋಜನೆಯನ್ನು ಲೇವಡಿ ಮಾಡುತ್ತಿದ್ದ ಕೇಂದ್ರ ಸರ್ಕಾರಕ್ಕೆ ಕೋವಿಡ್ ಸಂದರ್ಭದಲ್ಲಿ ನೆರವಿಗೆ ಬಂದಿದ್ದು ಇದೇ ಯೋಜನೆಯೇ. ದೇಶದ ಕೋಟ್ಯಂತರ ಕಾರ್ಮಿಕರು ಲಾಕ್‌ಡೌನ್ ಪರಿಣಾಮದಿಂದ ದುಸ್ಥಿತಿಯಲ್ಲಿದ್ದಾಗ, ಈ ಯೋಜನೆಯೇ ಗುಟುಕು ಜೀವ ಒದಗಿಸಿದ್ದನ್ನು ಸ್ಮರಿಸಬಹುದು. ಆದರೆ ಕಳೆದ ಎಂಟು ವರ್ಷಗಳಿಂದಲೂ ಈ ಯೋಜನೆಗೆ ಮೀಸಲಿಡುವ ಹಣದಲ್ಲಿ ಕೇಂದ್ರ ಸರ್ಕಾರ ಕಡಿತ ಮಾಡುತ್ತಲೇ ಬರುತ್ತಿದೆ. ಈ ವರ್ಷದ ಬಜೆಟ್‌ನಲ್ಲೂ ಮನರೇಗಾ ಯೋಜನೆಗೆ ಮೀಸಲಿಡುವ ಅನುದಾನವನ್ನು 89000 ಕೋಟಿ ರೂಗಳಿಂದ 60000 ಕೋಟಿ ರೂಗಳಿಗೆ ಇಳಿಸಲಾಗಿದೆ.

ಭಾರತದ ಗ್ರಾಮೀಣ ಉದ್ಯೋಗ ವಲಯದಲ್ಲಿ ಪ್ರತಿ ಕುಟುಂಬಕ್ಕೆ ಕನಿಷ್ಠ ನೂರು ದಿನಗಳ ಉದ್ಯೋಗ ಕಲ್ಪಿಸಲು ಸುಮಾರು 1.8ಲಕ್ಷ ಕೋಟಿ ರೂಗಳು ಬೇಕಾಗುತ್ತದೆ. ಅಂದರೆ ಸರ್ಕಾರ ನಿಯೋಜಿಸಿರುವ ಮೊತ್ತದಲ್ಲಿ ಪ್ರತಿ ಕುಟುಂಬಕ್ಕೆ ಕೇವಲ 48 ರಿಂದ 50 ದಿನಗಳಷ್ಟು ಉದ್ಯೋಗ ಕಲ್ಪಿಸಲು ಸಾಧ್ಯವಾಗುತ್ತದೆ. ಇದು ಗ್ರಾಮೀಣ ಬಡತನದ ಮೇಲಷ್ಟೇ ಅಲ್ಲದೆ, ಹಸಿವಿನಿಂದ ಸಂಭವಿಸುವ ಸಾವುಗಳು, ರೈತರ ಆತ್ಮಹತ್ಯೆ, ಅಪೌಷ್ಟಿಕತೆಯಿಂದ ಸಾಯುವ ಎಳೆ ಮಕ್ಕಳು ಮತ್ತು ತಾಯಂದಿರ ಪ್ರಮಾಣದ ಮೇಲೆ ಸಹ ಪರಿಣಾಮ ಬೀರುತ್ತದೆ. ಪ್ರಧಾನಮಂತ್ರಿ ಕಿಸಾನ್ ಯೋಜನೆಯಡಿ ರೈತರಿಗೆ ನೀಡುವ ವಾರ್ಷಿಕ ಮೊತ್ತವನ್ನು 6000 ದಿಂದ 8000ಕ್ಕೆ ಹೆಚ್ಚಿಸಲಾಗಿದ್ದರೂ, ಹಣದುಬ್ಬರದ ಪ್ರಭಾವವನ್ನು ಪರಿಗಣಿಸಿದಾಗ ಈ ಹೆಚ್ಚಳ ಸೀಮಿತವಾಗುತ್ತದೆ. ಮೇಲಾಗಿ ಈ ಯೋಜನೆಗೆ ಬಜೆಟ್‌ನಲ್ಲಿ ಮೀಸಲಿಡುವ ಹಣದ ಮೊತ್ತವನ್ನು ಕಳೆದ ವರ್ಷದ 68 ಸಾವಿರ ಕೋಟಿಗಳಿಂದ 60 ಸಾವಿರ ಕೋಟಿ ರೂಗಳಿಗೆ ಇಳಿಸಲಾಗಿದೆ. ಒಟ್ಟಾರೆ ಕೃಷಿ ಮತ್ತು ಪೂರಕ ವಲಯಗಳ ವೆಚ್ಚವನ್ನು ಶೇ 5ರಷ್ಟು ಕಡಿಮೆ ಮಾಡಲಾಗಿದೆ. ಬೆಂಬಲ ಬೆಲೆ ಮತ್ತು ಮಾರುಕಟ್ಟೆ ಮಧ್ಯಸ್ತಿಕೆಯ ಯೋಜನೆಗೆ ಕಳೆದ ವರ್ಷ ನೀಡಲಾಗಿದ್ದ 1500 ಕೋಟಿ ರೂಗಳು ಈ ಬಜೆಟ್‌ನಲ್ಲಿ ಬಹುಮಟ್ಟಿಗೆ ಇಲ್ಲವಾಗಿದೆ ಎಂದೇ ಹೇಳಬಹುದು.

ಖಾಲಿ ಜೇಬುಗಳ ಗ್ರಾಹಕರ ನಡುವೆ

ಭಾರತವು ಇಂದು ಎದುರಿಸುತ್ತಿರುವ ಆರ್ಥಿಕ ಹಿನ್ನಡೆಯನ್ನು ಗಮನಿಸಿದಾಗ ಜನಸಾಮಾನ್ಯರಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಆರ್ಥಿಕ ನೀತಿಗಳನ್ನು ಮತ್ತು ವಾರ್ಷಿಕ ಬಜೆಟ್‌ಗಳನ್ನು ರೂಪಿಸಬೇಕಾಗುತ್ತದೆ. ಉತ್ಪಾದನೆಯನ್ನು ಹೆಚ್ಚಿಸಬೇಕಾದರೆ, ಉತ್ಪಾದಿತ ಸರಕುಗಳನ್ನು ಕೊಳ್ಳುವ ಜನಸಂಖ್ಯೆಯೂ ಹೆಚ್ಚಾಗಬೇಕು. ಇಲ್ಲವಾದಲ್ಲಿ ಉತ್ಪಾದನೆ ಸ್ಥಗಿತಗೊಳುತ್ತದೆ. ಈಗಾಗಲೇ ಮಾರುಕಟ್ಟೆಯಲ್ಲಿ ಇದರ ಪರಿಣಾಮವನ್ನು ಗುರುತಿಸಲಾಗುತ್ತಿದೆ. ಹಾಗಾಗಿ ಉತ್ಪಾದನೆಯ ಹೆಚ್ಚಳ ಮತ್ತು ಗ್ರಾಹಕ ಬೇಡಿಕೆಯ ಹೆಚ್ಚಳದ ದೃಷ್ಟಿಯಿಂದ ಸರ್ಕಾರವು ಈಗಾಗಲೇ

ಪುಟ 12 ಕ್ಕೆ

ಬಟಾಬಯಲಾದ ಅದಾನಿ ಸಾಮ್ರಾಜ್ಯದ ವಂಚನೆ ಲೋಕ

ಕಾರ್ಪೊರೇಟ್ ಇತಿಹಾಸದಲ್ಲೇ ಅತ್ಯಂತ ದೊಡ್ಡ ಮೋಸ: ಮೋದಿ ಸರಕಾರದ ಕೃಪಾಕಟಾಕ್ಷ



ರಾಷ್ಟ್ರೀಕೃತ ಬ್ಯಾಂಕುಗಳು ನೀಡಿದ ಸಾಲಗಳು ಮತ್ತು ಭಾರತೀಯ ಜೀವ ವಿಮಾ ನಿಗಮದಂಥ (ಎಲ್‌ಐಸಿ) ಸಂಸ್ಥೆಗಳ ಹೂಡಿಕೆಗಳಿಂದಾಗಿ ಅದಾನಿ ಸಮೂಹ ಬಹಳಷ್ಟು ಕಂಪನಿಗಳು ಮತ್ತು ಆಸ್ತಿಗಳನ್ನು ಖರೀದಿಸಿದೆ. ಅದಾನಿ ಕಂಪನಿಗಳಲ್ಲಿ ಎಲ್‌ಐಸಿ ಸುಮಾರು 80,000 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದೆ. ಅದು ಪಡೆದ ಸಾಲಗಳಲ್ಲಿ ಒಟ್ಟು ಶೇಕಡ 40ರಷ್ಟು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೂಲಕ ಪಡೆದದ್ದಾಗಿದೆ. ಹೀಗಾಗಿ, ಅದಾನಿ ಗುಂಪಿನ ಕಂಪನಿಗಳ ಷೇರು ಬೆಲೆಗಳಲ್ಲಿನ ಕುಸಿತವು ಜನರ ಉಳಿತಾಯ ಮತ್ತು ಸಾರ್ವಜನಿಕ ನಿಧಿಗಳಿಗೆ ಒಂದು ದೊಡ್ಡ ಅಪಾಯವಾಗಿದೆ.

ಪ್ರಕಾಶ್ ಕಾರತ್

ಅಮೆರಿಕದ ಚಿಕ್ಕ ಹೂಡಿಕೆ ಕಂಪನಿಯೊಂದು ಭಾರತೀಯ ದಿಗ್ಗಜ ಉದ್ಯಮ ಕಂಪನಿ ಅದಾನಿ ಸಮೂಹಕ್ಕೇ ಸವಾಲು ಹಾಕಿದ್ದು ಅದರ ಅಡಿಪಾಯವನ್ನೇ ಅಲುಗಾಡಿಸಿಬಿಟ್ಟಿದೆ. ಚಿಕ್ಕ ಮಾರಾಟ ಸಂಸ್ಥೆ ಹಿಂಡನ್‌ಬರ್ಗ್ ರೀಸರ್ಚ್, ಅದಾನಿ ಸಮೂಹದ ಬಗ್ಗೆ, ಅದರ ವಿದೇಶಿ ಚಟುವಟಿಕೆಗಳಲ್ಲಿ ನಡೆಸಲಾದ ಮೋಸಗಳ ಕುರಿತು ಸುಸ್ಪಷ್ಟ ಪುರಾವೆಗಳುಳ್ಳ 129–ಪುಟಗಳ ವರದಿಯೊಂದನ್ನು ಬಿಡುಗಡೆ ಮಾಡಿದೆ. 578 ಉಪ–ಕಂಪನಿಗಳು (ಸಬ್ಸಿಡಿಯರಿ) ಮತ್ತು ಅದಾನಿ ಗ್ರೂಪ್‌ಗೆ ಸಂಬಂಧಿಸಿದ ಏಳು ಲಿಸ್ಟೆಡ್ ಕಂಪನಿಗಳ ಶೆಲ್ ಕಂಪನಿಗಳ ಕುರಿತು ಈ ವರದಿಯಿದೆ. ಇದು 'ಕಾರ್ಪೊರೇಟ್ ಇತಿಹಾಸದಲ್ಲೇ ಅತ್ಯಂತ ದೊಡ್ಡ ವಂಚನೆಯಾಗಿದೆ' ಎಂದು ಹಿಂಡನ್‌ಬರ್ಗ್ ವರ್ಣಿಸಿದೆ. ನಿಧಿಗಳು ಮತ್ತು ಮಾರಿಷಸ್, ಸೈಪ್ರಸ್ ಹಾಗೂ ಯುಎಇಗಳಲ್ಲಿರುವ ಶೆಲ್ ಕಂಪನಿಗಳ ಸಂಕೀರ್ಣ ಜಾಲಗಳನ್ನು ಲಿಸ್ಟೆಡ್ ಕಂಪನಿಗಳ ಷೇರುಗಳ ಬೆಲೆಗಳಲ್ಲಿ ವಂಚಿಸಲು ಮತ್ತು ಭಾರಿ ಸಾಲಗಳು ಮತ್ತು ಕೆಲವು ಠೇವಣಿ ಮತ್ತಿತರ ನಗದು (ಲಿಕ್ವಿಡ್ ಅಸೆಟ್) ಸ್ಥಿತಿಗತಿ ಆರೋಗ್ಯ ಪೂರ್ಣವಾಗಿದೆ ಎಂಬುದನ್ನು ತೋರಿಸಲು ಹಣವನ್ನು ಬ್ಯಾಲೆನ್ಸ್‌ಶೀಟ್‌ಗೆ ವರ್ಗಾಯಿಸಲು ಬಳಸಿಕೊಳ್ಳುತ್ತಿರುವುದನ್ನು ಹಿಂಡನ್‌ಬರ್ಗ್ ವರದಿ ಬಯಲಿಗೆಳೆದಿದೆ. ಅದಾನಿ ಕಂಪನಿಗಳ ಮೌಲ್ಯಗಳನ್ನು ವಾಸ್ತವಕ್ಕಿಂತ ಶೇಕಡ 85ರಷ್ಟು ಹೆಚ್ಚಾಗಿ ಬಿಂಬಿಸಲಾಗಿದೆ (ಓವರ್‌ಸ್ಟೇಟ್) ಎಂದು ವರದಿ ಹೇಳಿದೆ. ಅದಾನಿ ಗ್ರೂಪ್ 'ಖುಲ್ಲಂಖುಲ್ಲಾ ಸ್ಟಾಕ್ ಮೋಸ ಮತ್ತು ಲೆಕ್ಕಪತ್ರ ವಂಚನೆ ಯೋಜನೆಯಲ್ಲಿ' ಭಾಗವಹಿಸಿದೆ ಎಂದು ವರದಿ ಆರೋಪಿಸಿದೆ.

'ರಾಷ್ಟ್ರೀಯತೆ'ಯ ಗುರಾಣಿ ಬಳಸುವ ಪ್ರಯತ್ನ:

ಹಿಂಡನ್‌ಬರ್ಗ್ ವರದಿಗೆ ಅದಾನಿ ಸಮೂಹ ಪ್ರತಿಕ್ರಿಯಿಸುತ್ತ, 'ಇದು ಭಾರತದ ಮೇಲಿನ ಯೋಜಿತ ದಾಳಿಯಾಗಿದೆ' ಎಂದು ಹೇಳಿದೆ. ತನ್ನನ್ನು ರಕ್ಷಿಸಿಕೊಳ್ಳಲು ಯಾವುದೇ ಸೂಕ್ತ ಅಂಶಗಳು ಇಲ್ಲದೇ ಇರುವುದರಿಂದ ಅದಾನಿ ಗ್ರೂಪ್ ರಾಷ್ಟ್ರೀಯತೆಯ ಗುರಾಣಿಯನ್ನು ಬಳಸಿಕೊಂಡು ತನ್ನ ಹಗರಣಗಳನ್ನು ಮುಚ್ಚಿಕೊಳ್ಳಲು ಹೊರಟಿದೆ. ಹಿಂಡನ್‌ಬರ್ಗ್ ವರದಿಯು 'ಭಾರತೀಯ ಸಂಸ್ಥೆಗಳ ಸ್ವಾತಂತ್ರ್ಯ, ಗುಣಮಟ್ಟ, ವಿಶ್ವಾಸಾರ್ಹತೆ ಮತ್ತು ಭಾರತದ ಯಶಸ್ಸಿನ ಕತೆ ಹಾಗೂ ಮಹತ್ವಾಕಾಂಕ್ಷೆ' ಮೇಲಿನ ದಾಳಿ ಎಂದು ಅದಾನಿ ಸಮೂಹ ಬಡಬಡಿಸಿದೆ.

ಜಗತ್ತಿನ 3ನೇ ಕುಬೇರ ಪಟ್ಟದಿಂದ 22ನೇ ಸ್ಥಾನಕ್ಕೆ ಕುಸಿತ:

ಹಿಂಡನ್‌ಬರ್ಗ್ ವರದಿಯ ಪರಿಣಾಮ ತತ್‌ಕ್ಷಣಕ್ಕೇ ಕಂಡು ಬಂದಿದೆ. ವರದಿ ಪ್ರಕಟವಾದ ಮರು ವಾರದಲ್ಲೇ ಅದಾನಿ ಗ್ರೂಪ್ 67 ಬಿಲಿಯ ಡಾಲರ್, ಅಂದರೆ ಸುಮಾರು 5.6 ಲಕ್ಷ ಕೋಟಿ ರೂಪಾಯಿ ಮೊತ್ತದ ಮಾರುಕಟ್ಟೆ ಮೌಲ್ಯವನ್ನು ಕಳೆದುಕೊಂಡಿದೆ. ಸ್ವತಃ ಗೌತಮ್ ಅದಾನಿಯೇ ತನ್ನ ಸಂಪತ್ತಿನ 50 ಬಿಲಿಯ ಡಾಲರ್ ಕಳೆದುಕೊಂಡಿದ್ದು ಜಗತ್ತಿನ ಮೂರನೇ ಕುಬೇರ ಪಟ್ಟವನ್ನೂ ಕಳೆದುಕೊಂಡಿದ್ದಾರೆ. ಈಗ 10 ಲಕ್ಷ ಕೋಟಿ ರೂಪಾಯಿ ಮೊತ್ತದ ಮಾರುಕಟ್ಟೆ ಮೌಲ್ಯವನ್ನು ಕಳೆದುಕೊಂಡು, ಆತನೀಗ 22ನೇ ಸ್ಥಾನಕ್ಕೆ ಕುಸಿದಿದ್ದಾರೆ.

ಅದಾನಿ ಸಮೂಹದ ಮೋಸದ ವ್ಯವಹಾರಗಳು ಜನರಿಗೆ ಕಳವಳಕಾರಿ ವಿಷಯವಾಗಿದೆ. ಯಾಕೆಂದರೆ ಹಲವಾರು ವರ್ಷಗಳಿಂದ ದೇಶದ ನೈಸರ್ಗಿಕ ಸಂಪತ್ತು ಮತ್ತು ಸಾರ್ವಜನಿಕ ಹಣವನ್ನು ಕೊಳ್ಳೆ ಹೊಡೆಯಲಾಗಿದೆ. ಮೋದಿ ಸರಕಾರದ ಕೃಪಾಕಟಾಕ್ಷದಿಂದಾಗಿ ಅದಾನಿ ಸಮೂಹವು ಬಂದರುಗಳು, ವಿಮಾನ ನಿಲ್ದಾಣಗಳ ಅತಿ ದೊಡ್ಡ ಖಾಸಗಿ ನಿರ್ವಾಹಕನಾಗಿ ಹೊರಹೊಮ್ಮಿದೆ. ಆಹಾರಧಾನ್ಯಗಳ ಅತ್ಯಂತ ದೊಡ್ಡ ಗೋದಾಮು ಒಡೆಯನಾಗಿದೆ. ವಿದ್ಯುತ್ ಪ್ರಸರಣ ಮತ್ತು ಸಿಮೆಂಟ್ ಉದ್ಯಮದ ಐದನೇ ಒಂದರಷ್ಟು ಪಾಲನ್ನು ಅದು ನಿಯಂತ್ರಿಸುತ್ತದೆ. ಕಲ್ಲಿದ್ದಲು ಗಣಿಗಾರಿಕೆಯಲ್ಲಿ ದೊಡ್ಡ ಪಾಲು ಹೊಂದಿರುವ ಅದು ಶಾಖೋತ್ಪನ್ನ ವಿದ್ಯುತ್ ತಯಾರಿಕೆಯಲ್ಲಿ ಅತಿ ದೊಡ್ಡ ಖಾಸಗಿ ಉತ್ಪಾದಕನಾಗಿದೆ.

ರಾಷ್ಟ್ರೀಕೃತ ಬ್ಯಾಂಕುಗಳು ನೀಡಿದ ಸಾಲಗಳು ಮತ್ತು ಭಾರತೀಯ ಜೀವ ವಿಮಾ ನಿಗಮದಂತಹ (ಎಲ್‌ಐಸಿ) ಸಂಸ್ಥೆಗಳ ಹೂಡಿಕೆಗಳಿಂದಾಗಿ ಅದಾನಿ ಸಮೂಹ ಬಹಳಷ್ಟು ಕಂಪನಿಗಳು ಮತ್ತು ಆಸ್ತಿಗಳನ್ನು ಖರೀದಿಸಿದೆ. ಅದಾನಿ ಕಂಪನಿಗಳಲ್ಲಿ ಎಲ್‌ಐಸಿ ಸುಮಾರು 80,000 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದೆ. ಅದಾನಿ ಸಮೂಹ ಪಡೆದ ಸಾಲಗಳಲ್ಲಿ ಒಟ್ಟು ಶೇಕಡ 40 ರಷ್ಟು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೂಲಕ ಪಡೆದದ್ದಾಗಿದೆ. ಹೀಗಾಗಿ, ಅದಾನಿ ಗುಂಪಿನ ಕಂಪನಿಗಳ ಷೇರು ಬೆಲೆಗಳಲ್ಲಿನ ಕುಸಿತವು ಜನರ ಉಳಿತಾಯ ಮತ್ತು ಸಾರ್ವಜನಿಕ ನಿಧಿಗಳಿಗೆ ಒಂದು ದೊಡ್ಡ ಅಪಾಯವಾಗಿದೆ.

ವರ್ಗ ಸೌಹಾರ್ದತೆ ಬೆಂಬಲದ ರೂಪದಲ್ಲಿ....

ಅದಾನಿ 20,000 ಕೋಟಿ ರೂಪಾಯಿ ಎತ್ತುವಳಿ ಮಾಡಲು ಷೇರುಗಳನ್ನು ಬಿಡುಗಡೆ ಮಾಡುವ (ಫಾಲೋ ಆನ್ ಆಫರ್–ಎಫ್‌ಒಎ) ಹೊತ್ತಿನಲ್ಲಿ ಹಿಂಡನ್‌ಬರ್ಗ್ ವರದಿ ಹೊರಬಿದ್ದಿದೆ. ಅದಾನಿ ಸಮೂಹದ ಕಂಪನಿಗಳ ಬೆಲೆಗಳು ಪಾತಾಳಕ್ಕೆ ಕುಸಿದರೂ ಸಾಂಸ್ಥಿಕೇತರ ಹೂಡಿಕೆದಾರರು ದೊಡ್ಡ ಪ್ರಮಾಣದಲ್ಲಿ ಹಣ ಸುರಿದಿದ್ದರಿಂದ ಷೇರುಗಳ ಆಫರ್ ಪೂರ್ಣವಾಗಿ ಮಾರಾಟವಾಗಿದೆ. ಹೀಗೆ ಹೂಡಿದವರಲ್ಲಿ ಅತಿ ಶ್ರೀಮಂತ ವ್ಯಕ್ತಿಗಳೂ ಇದ್ದಾರೆ. ವರ್ಗ ಸೌಹಾರ್ದತೆ ಬೆಂಬಲದ ರೂಪದಲ್ಲಿ ಮುಕೇಶ್ ಅಂಬಾನಿ, ಸಜ್ಜನ್ ಜಿಂದಾಲ್, ಸುನಿಲ್ ಮಿತ್ತಲ್ ಮತ್ತು ಪಂಕಜ್ ಪಟೇಲ್‌ನಂಥ ದೊಡ್ಡ ಉದ್ಯಮಿಗಳು ಕೂಡ ಅದಾನಿ ಗುಂಪಿನ ಷೇರು ಖರೀದಿಗೆ ಹಣ ಹೂಡಿದ್ದಾರೆ. ಆದರೆ, ಮರು ದಿನವೇ ಅದಾನಿ ಎಂಟರ್‌ಪ್ರೈಸಸ್ ಷೇರು ನೀಡಿಕೆಯನ್ನು ರದ್ದು ಮಾಡಿದೆ ಹಾಗೂ ಎಲ್ಲ ಹೂಡಿಕೆದಾರರಿಗೆ ಹಣವನ್ನು ವಾಪಸ್ ಮಾಡುವುದಾಗಿ ಪ್ರಕಟಿಸಿದೆ. 'ಫಾಲೋ–ಆನ್ ಆಫರ್'ನಲ್ಲಿ ಅದಾನಿಯ ಎರಡು ಮುಂಚೂಣಿ ಕಂಪನಿಗಳು ಹೂಡಿಕೆ ಮಾಡಿವೆ ಎಂಬ ಆರೋಪಗಳು ಬಂದಿರುವ ಹಿನ್ನೆಲೆಯಲ್ಲಿ ಈ ಹಠಾತ್ ನಿರ್ಧಾರ ಕೈಗೊಂಡಿರುವ ಸಾಧ್ಯತೆಯಿದೆ.

ಹಿಂದೆಯೂ ಆರೋಪಗಳಿದ್ದವು

ಅದಾನಿ ಸಮೂಹದ ಭಾರಿ ಪ್ರಗತಿ ಹಾಗೂ ಅದರ ತ್ವರಿತ ವಿಸ್ತರಣೆಯನ್ನು ಭಾರತದಲ್ಲಿ ಹಿಂದೆ ಯಾರೂ ಪ್ರಶ್ನಿಸಿರಲಿಲ್ಲವೆಂದಲ್ಲ. ಗೌತಮ್ ಅದಾನಿ ತನ್ನ ಸಾಮ್ರಾಜ್ಯ ಕಟ್ಟಲು ಹೊರಟಿದ್ದ ವಿಚಾರದಲ್ಲಿ ಅನೇಕ ಗಂಭೀರ ಪ್ರಶ್ನೆಗಳು ಹಾಗೂ ಆರೋಪಗಳು ಎದ್ದಿದ್ದವು. ಕಲ್ಲಿದ್ದಲು ಆಮದಿನ ವೆಚ್ಚದಲ್ಲಿ ಓವರ್ ಇನ್‌ವಾಯ್ಸಿಂಗ್, ಆತನ ವಿದೇಶಿ ಕಂಪನಿಗಳ ನಿಧಿ ವಿಚಾರದಲ್ಲಿ ಪಾರದರ್ಶಕತೆ ಇಲ್ಲದ್ದು, ಪರಿಸರ ನಿಯಮಗಳ ನಗ್ನ ಉಲ್ಲಂಘನೆ ಮತ್ತು ಯೋಜನೆಗಳಿಗೆ ಅನುಮೋದನೆ ಪಡೆಯಲು ಕಾನೂನು ನಿಯಮಗಳನ್ನೇ ತಿರುಚುವುದು ಮೊದಲಾದ ಪ್ರಶ್ನೆಗಳನ್ನು ಮಾಧ್ಯಮದವರು ಹಾಗೂ ವಾಣಿಜ್ಯೋದ್ಯಮ ವಿಶ್ಲೇಷಕರು ಹಲವು ಬಾರಿ ಎತ್ತಿದ್ದರು. ಆದರೆ ಸೆಬಿ ಮತ್ತು ಆರ್‌ಬಿಐನಂಥ ನಿಯಂತ್ರಣ ಸಂಸ್ಥೆಗಳಾಗಲೀ ಅನುಷ್ಠಾನ ನಿರ್ದೇಶನಾಲಯದಂಥ (ಇ.ಡಿ.) ಅನುಷ್ಠಾನ ಸಂಸ್ಥೆಗಳಾಗಲೀ ಇವುಗಳಿಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿರಲಿಲ್ಲ.

ಪ್ರಶ್ನಿಸಿದವರ ದಮನ

ಅಕ್ರಮ ವ್ಯವಹಾರಗಳನ್ನು ಪ್ರಶ್ನಿಸುವ ಪತ್ರಕರ್ತರಿಗೆ ಕಿರುಕುಳ ಕೊಟ್ಟು ಬಾಯಿ ಮುಚ್ಚಿಸಲು ಹಾಗೂ ದಮನಿಸಲು ಅದಾನಿಗಳು ತಮ್ಮ ಆರ್ಥಿಕ ಮತ್ತು ರಾಜಕೀಯ ಪ್ರಭಾವವನ್ನು ಬಳಸಿಕೊಂಡಿದ್ದಾರೆ. ಅದಾನಿಗಳ ಯಾವುದೇ ಅನುಮಾನಾಸ್ಪದ ವ್ಯವಹಾರಗಳ ಬಗ್ಗೆ ಸುದ್ದಿಗಳನ್ನು ಪ್ರಕಟಿಸಿದ, ಪ್ರಸಾರ ಮಾಡಿದ ಪತ್ರಕರ್ತರು ಮತ್ತು ಮಾಧ್ಯಮ ಸಂಸ್ಥೆಗಳ ವಿರುದ್ಧ ನಾಗರಿಕ ಮಾನಹಾನಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಉದಾಹರಣೆಗೆ, ಅದಾನಿ ಎಲ್‌ಎನ್‌ಜಿ ಟರ್ಮಿನಲ್‌ನಲ್ಲಿ ಸರಕಾರಿ ಸ್ವಾಮ್ಯದ ಭಾರತೀಯ ತೈಲ ಕಂಪನಿ (ಐಒಸಿ) ಮತ್ತು ಜಿಎಐಎಲ್ (ಭಾರತೀಯ ಅನಿಲ ಪ್ರಾಧಿಕಾರ) ಯಾಕೆ ಹೂಡಿಕೆ ಮಾಡುತ್ತಿವೆ ಎಂದು ಪ್ರಶ್ನಿಸಿ ವರದಿ ಮಾಡಿದ್ದ 'ದಿ ವೈರ್' ವಿರುದ್ಧ 2017 ನವೆಂಬರ್‌ನಲ್ಲಿ ನೂರು ಕೋಟಿ ರೂಪಾಯಿ ಮಾನನಷ್ಟ ದಾವೆ ಹೂಡಲಾಗಿತ್ತು.

ಇಕನಾಮಿಕ್ ಅಂಡ್ ಪಾಲಿಟಿಕಲ್ ವೀಕ್ಲಿಯಲ್ಲಿ ಬರೆದಿದ್ದಕ್ಕಾಗಿ ಪರಂಜಯ್ ಗುಹಾ ಠಾಕೂರ್ತಾ, ರವಿ ನಾಯರ್ ಮತ್ತಿತರ ಪತ್ರಕರ್ತರು ಕೂಡ ಇಂಥ ಮಾನನಷ್ಟ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. ಕಾನೂನು ಮೊಕದ್ದಮೆಗಳ ಮೂಲಕ ಮಾಧ್ಯಮದ ಬಾಯಿ ಮುಚ್ಚಿಸುವುದು ಅದಾನಿ ಸಮೂಹದ ಉದ್ದೇಶವಾಗಿದೆ.

ಸ್ಟಾಕ್ ವಂಚನೆ, ಹಣಕಾಸು ದುರ್ಬಳಕೆ ಮತ್ತು ಲೆಕ್ಕಪತ್ರ ವಂಚನೆ ಮುಂತಾದ ಆರೋಪಗಳು ಹಾಗೂ ಭಾರತದ ಅಗ್ರ ಉದ್ಯಮಿಗೆ ಕಳಂಕ ತರುವ ಪಿತೂರಿಯಿದು ಎಂಬ ಪ್ರತ್ಯಾರೋಪಗಳ ನಡುವೆ ಅದಾನಿ ಹಿಂಡನ್‌ಬರ್ಗ್ ಕಥನದ ನೈಜ ಪಾಠಗಳು ಮರೆಯಾಗಲು ಬಿಡಬಾರದು.

ಅದಾನಿ: ಮೋದಿಯವರ ಮುದ್ದಿನ ಬಂಡವಾಳಶಾಹಿ

ಅದಾನಿಯ 'ಅದೃಷ್ಟ'ಕ್ಕೂ ಮೋದಿಯವರ ರಾಜಕೀಯ ಪಥಕ್ಕೂ ಸಂಬಂಧವಿದೆ:

ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿ ಮೇಲೆದ್ದು ಬಂದಿದ್ದು ನರೇಂದ್ರ ಮೋದಿ ಸರಕಾರದ ಆಶ್ರಯ ಮತ್ತು ರಕ್ಷಣೆಯಿಂದಾಗಿ ಎನ್ನುವುದನ್ನು ಮನಗಾಣದೆ ಅದಾನಿ ಕತೆ ಅಪೂರ್ಣವಾಗುತ್ತದೆ. 2002ರಲ್ಲಿ ಮೋದಿ ಗುಜರಾತ್ ಮುಖ್ಯಮಂತ್ರಿ ಆದಾಗಲೇ ಮೋದಿ ಮತ್ತು ಅದಾನಿ ನಡುವಣ ಮೈತ್ರಿ ಆರಂಭವಾಗಿತ್ತು. ಆಗಿನಿಂದಲೂ ಅದಾನಿಯ 'ಅದೃಷ್ಟ'ಕ್ಕೂ ನರೇಂದ್ರ ಮೋದಿಯವರ ರಾಜಕೀಯ ಪಥಕ್ಕೂ ಒಂದಕ್ಕೊಂದು ನಿಕಟ ಸಂಬಂಧವಿದೆ. ಮೋದಿ ಅಂತಿಮವಾಗಿ 2014ರಲ್ಲಿ ಪ್ರಧಾನಿಯಾಗಿ ದೆಹಲಿ ತಲುಪಿದರು. 2014ರಲ್ಲಿ 50.4 ಸಾವಿರ ಕೋಟಿ ರೂಪಾಯಿ ಇದ್ದ ಗೌತಮ್ ಅದಾನಿ ಸಂಪತ್ತು 2022ರ ವೇಳೆಗೆ 10.30 ಲಕ್ಷ ಕೋಟಿ ರೂಪಾಯಿಗೆ ಏರಿದೆ. ಮೋದಿಯ ಮುದ್ದಿನ ಬಂಡವಾಳಶಾಹಿ ಯಾವುದೇ ನಿಯಂತ್ರಣವಿಲ್ಲದೆ ಓಡಾಡುತ್ತಿದ್ದಾನೆ. ಯಾವುದೇ ನಿಯಂತ್ರಣ ಸಂಸ್ಥೆಗಾಗಲೀ ಸರಕಾರಕ್ಕಾಗಲೀ ಆತನನ್ನು ಮುಟ್ಟುವ ಧೈರ್ಯವಿಲ್ಲ. ಯಾವುದೇ ಶಿಕ್ಷೆಯ ಭಯವಿಲ್ಲದೆ ಉದ್ಯಮ ಹಿತಾಸಕ್ತಿಗಳನ್ನು ಅದಾನಿ ಸಮೂಹ ಬೆಳೆಸುತ್ತಿರುವುದು ಸಮಕಾಲೀನ ಸಂದರ್ಭದಲ್ಲಿ ಕ್ರೋನಿ ಬಂಡವಾಳಕ್ಕೆ ಅತ್ಯಂತ ಕೆಟ್ಟ ಉದಾಹರಣೆಗಳಲ್ಲಿ ಒಂದಾಗಿದೆ.



‘ಅಮೃತ ಕಾಲ’ದ ಮೊದಲ ಬಜೆಟ್!!

ಜನಸಾಮಾನ್ಯರ ಬದುಕಿನ ಬಾಬ್ತುಗಳಿಗೆ ಹಣಕಡಿತಗಳ ಸಾಲು ಸಾಲು!

ಕೇಂದ್ರ ಹಣಕಾಸು ಮಂತ್ರಿಗಳು ಫೆಬ್ರುವರಿ 1ರಂದು ಮಂಡಿಸಿದ 2023–24ರ ಬಜೆಟ್ ಅಮೃತ ಕಾಲದ ಮೊದಲ ಬಜೆಟ್ ಎಂದು ಅವರು ವರ್ಣಿಸಿದ್ದಾರೆ. ಈ ಬಜೆಟನಲ್ಲಿ ಏಳು ಆದ್ಯತೆಗಳನ್ನು ಗುರುತಿಸಿದ್ದು ಇವು ಅಮೃತಕಾಲದಲ್ಲಿ ಭಾರತಕ್ಕೆ ಮಾರ್ಗದರ್ಶನ ನೀಡುವ ‘ಸಪ್ತರ್ಷಿಗಳು’ ಎಂದೂ ಅವರು ವರ್ಣಿಸಿದ್ದಾರೆ. 7ಲಕ್ಷ ರೂ. ವಾರ್ಷಿಕ ಆದಾಯದ ವರೆಗೆ ಈಗ ಆದಾಯ ತೆರಿಗೆ ಇರುವುದಿಲ್ಲ ಎಂದು ಪ್ರಕಟಿಸಿದ್ದಾರೆ. ಪ್ರಧಾನ ಮಂತ್ರಿಗಳು ಅಮೃತಕಾಲದ ಈ ಮೊದಲ ಬಜೆಟ್ ಸಮೃದ್ಧಿಯ ಆಕಾಂಕ್ಷೆ ಹೊತ್ತಿರುವ ಸಮಾಜದ, ರೈತರ ಮತ್ತು ಮಧ್ಯಮ ವರ್ಗದ ಕನಸುಗಳನ್ನು ಈಡೇರಿಸುವ, ಅಭಿವೃದ್ಧ ಭಾರತ ಕಟ್ಟಲು ಒಂದು ಭದ್ರ ಬುನಾದಿ ಹಾಕುವ ಬಜೆಟ್‌ಎಂದು ಪ್ರಶಂಸಿಸಿದ್ದಾರೆ. ಆದರೆ ಆಡಂಭರದ ಮಾತುಗಳ ಆಳಕ್ಕೆ ಹೋಗಿ ವಿಶ್ಲೇಷಿಸಿದರೆ ಇದು ಒಂದೆಡೆಯಲ್ಲಿ ಹಣಕಾಸು ಕೊರತೆ ಎಂಬುದನ್ನು ತಗ್ಗಿಸಲು ಸರಕಾರದ ಖರ್ಚುಗಳಲ್ಲಿ ಕಡಿತ ಮಾಡಿರುವುದು, ಇನ್ನೊಂದೆಡೆಯಲ್ಲಿ ಶ್ರೀಮಂತರಿಗೆ ಇನ್ನಷ್ಟು ತೆರಿಗೆ ರಿಯಾಯ್ತಿಗಳನ್ನು ನೀಡಿರುವುದನ್ನು ಕಾಣಬಹುದು. ಈ ಬಜೆಟಿನ ಇನ್ನೂ ಕೆಲವು ಮುಖ್ಯಾಂಶಗಳನ್ನು ಹೀಗೆ ಪಟ್ಟಿ ಮಾಡಬಹುದು:

ಅರ್ಥವ್ಯವಸ್ಥೆಯನ್ನು ಕುಗ್ಗಿಸುವ ಜನ–ವಿರೋಧಿ ಬಜೆಟ್

ಕೇಂದ್ರ ಬಜೆಟ್ 2023–24 ಭಾರತದ ಅರ್ಥವ್ಯವಸ್ಥೆಯ ಸದ್ಯದ ಸನ್ನಿವೇಶವನ್ನು ಎದುರಿಸುವಲ್ಲಿ ವಿಫಲವಾಗಿರುವ ಜನ–ವಿರೋಧಿ ಬಜೆಟ್ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಟೀಕಿಸಿದೆ.

ಭಾರತದ ಅರ್ಥವ್ಯವಸ್ಥೆ ಮಹಾಸೋಂಕು ಎರಗುವ ಮೊದಲೇ ನಿಧಾನಗತಿಗಿಳಿದಿತ್ತು.ಮಹಾಸೋಂಕಿನ ಎರಡು ವರ್ಷಗಳಲ್ಲಿ ಈ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ತದನಂತರದ ಚೇತರಿಕೆಯ ಮೇಲೆ ಜಾಗತಿಕ ಆರ್ಥಿಕ ಹಿಂಜರಿತ ಮತ್ತು ಆರ್ಥಿಕ ಸ್ಥಗಿತತೆಯತ್ತ ಸಾಗುವ ಸಾಧ್ಯತೆಯು ಪ್ರತಿಕೂಲ ಪರಿಣಾಮಗಳನ್ನು ಬೀರುತ್ತಿದೆ. ಇಂತಹ ಸನ್ನಿವೇಶದಲ್ಲಿ ಈ ಬಜೆಟ್ ಉದ್ಯೋಗ ಸೃಷ್ಟಿಯೊಂದಿಗೆ ಜನರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುವ ಮತ್ತು ಆಂತರಿಕ ಬೇಡಿಕೆಯ ಬೆಳವಣಿಗೆಗೆ ಒತ್ತಾಸೆ ನೀಡುವ ಕೇಂದ್ರೀಯ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕಿತ್ತು ,ಈ ಬಜೆಟ್ ಅದರಲ್ಲಿ ವಿಫಲವಾಗಿದೆ ಎಂದು ಅದು ಹೇಳಿದೆ.

ಇದಕ್ಕೆ ವ್ಯತಿರಿಕ್ತವಾಗಿ, ಇದು ವಿತ್ತೀಯ ಕೊರತೆಯನ್ನು ಕಡಿಮೆ ಮಾಡಲು ಸರ್ಕಾರದ ವೆಚ್ಚಗಳನ್ನು ಹಿಂಡುತ್ತದೆ ಮತ್ತು ಶ್ರೀಮಂತರಿಗೆ ಮತ್ತಷ್ಟು ತೆರಿಗೆ ರಿಯಾಯಿತಿಯನ್ನು ನೀಡುತ್ತದೆ. ಆಕ್ಸ್‌ಫಾಮ್ ವರದಿಯು ಭಾರತದಲ್ಲಿ ಶೇಕಡಾ 1 ರಷ್ಟು ಶ್ರೀಮಂತರು ಕಳೆದ 2 ವರ್ಷಗಳಲ್ಲಿ ಉತ್ಪತ್ತಿಯಾದ ಸಂಪತ್ತಿನ ಶೇಕಡಾ 40.5 ಅನ್ನು ಗಿಟ್ಟಿಸಿಕೊಂಡಿದ್ದಾರೆ ಎಂದು ತೋರಿಸಿರುವ ಈ ಬಜೆಟ್ ಬಂದಿದೆ. ಹೀಗೆ, ಇದು ಸಂಕೋಚನಗೊಳಿಸುವ ಬಜೆಟ್ ಆಗಿದ್ದು ಆರ್ಥಿಕ ಬಿಕ್ಕಟ್ಟನ್ನು ಉಲ್ಬಣಗೊಳಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

2023–24ರಲ್ಲಿ ಸರಕಾರದ ಒಟ್ಟು ವೆಚ್ಚದ ಹೆಚ್ಚಳವು ಕೇವಲ 7 ಶೇ. ಈ ಅವಧಿಯಲ್ಲಿ ಜಿಡಿಪಿ (ಹಣದುಬ್ಬರದೊಂದಿಗೆ) ಹೆಚ್ಚಳ 10.5 ಶೇ. ಎಂದು ಅಂದಾಜಿಸಲಾಗಿದೆ. ಹೀಗಾಗಿ, ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಸರ್ಕಾರದ ವೆಚ್ಚದಲ್ಲಿ ಇಳಿಕೆಯಾಗಿದೆ. ಬಡ್ಡಿ ಪಾವತಿಗಳನ್ನು ಹೊರತುಪಡಿಸಿದರೆ, ಈ ವೆಚ್ಚವು ಕಳೆದ ವರ್ಷಕ್ಕಿಂತ ಕೇವಲ 5.4 ಶೇಕಡಾ ಹೆಚ್ಚು. ಸೂಚ್ಯ ಹಣದುಬ್ಬರ ದರ 4 ಶೇ. ಮತ್ತು ಸುಮಾರು 1 ಶೇ. ಜನಸಂಖ್ಯಾ ಹೆಚ್ಚಳವನ್ನು ಗಣನೆಗೆ ತೆಗೆದುಕೊಂಡರೆ, “ಜನಕೇಂದ್ರಿತ” ಬಜೆಟ್ ಎಂದು ಕರೆಯಲ್ಪಡುವ ಇದು ನಮ್ಮ ಬಹುಪಾಲು ಜನರ ಜೀವನೋಪಾಯದ ಮೇಲೆ ಮತ್ತಷ್ಟು ದಾಳಿಗಳನ್ನು ಮಾಡುತ್ತದೆ.

ನಿರುದ್ಯೋಗ ದರವು ಇದುವರೆಗೆ ಕಾಣದ ಎತ್ತರಕ್ಕೆ ಏರಿರುವಾಗ ಈ ಬಜೆಟ್ ಮನರೇಗ ಯೋಜನೆಗೆ ಹಂಚಿಕೆಯನ್ನು ಶೇಕಡಾ 33 ರಷ್ಟು ಕಡಿಮೆ ಮಾಡುತ್ತದೆ. ಆಹಾರ ಸಬ್ಸಿಡಿಯಲ್ಲಿ ರೂ. 90,000 ಕೋಟಿ, ರಸಗೊಬ್ಬರ ಸಬ್ಸಿಡಿಯಲ್ಲಿ ರೂ. 50,000 ಕೋಟಿ ಮತ್ತು ಪೆಟ್ರೋಲಿಯಂ ಸಬ್ಸಿಡಿಯಲ್ಲಿ ರೂ. 6,900 ಕೋಟಿ ಕಡಿತ ಮಾಡುತ್ತದೆ.

ಸಾಂಕ್ರಾಮಿಕ ರೋಗದಿಂದ ಉಂಟಾದ ವಿನಾಶದ ಹೊರತಾಗಿಯೂ ಕಳೆದ ವರ್ಷ ಆರೋಗ್ಯಕ್ಕಾಗಿ ಮೀಸಲಿಟ್ಟ ರೂ. 9255 ಕೋಟಿ ಖರ್ಚಾಗದೆ ಉಳಿದಿದೆ. ಅಂತೆಯೇ, ಶಿಕ್ಷಣ ಬಜೆಟ್‌ನಲ್ಲಿ ರೂ. 4297 ಕೋಟಿ ಖರ್ಚಾಗದೇ ಉಳಿದಿದೆ.

ಐಸಿಡಿಎಸ್ ಯೋಜನಾ ಕಾರ್ಯಕರ್ತರಿಗೆ ಈಗಾಗಲೇ ನೀಡಲಾಗುತ್ತಿರುವ ಅಲ್ಪ ಸಂಭಾವನೆ ಯಾವುದೇ ಏರಿಕೆ ಕಾಣುತ್ತಿಲ್ಲ. ಲಿಂಗ ಬಜೆಟ್ ಒಟ್ಟು ಖರ್ಚಿನ ಶೇಕಡಾ 9 ಮಾತ್ರ. 16 ಶೇ. ದಷ್ಟಿರುವ ಪರಿಶಿಷ್ಟ ಜಾತಿಗಳ ಬಜೆಟಿಗೆ ಕೇವಲ 3.5 ಶೇಕಡಾ ಮತ್ತು 8.6 ಶೇ. ಪರಿಶಿಷ್ಟ ಬುಡಕಟ್ಟು ಜನಗಳ ಬಜೆಟಿಗೆ ಕೇವಲ 2.7 ಶೇ.. ರೈತರ ಆದಾಯವನ್ನು ದ್ವಿಗುಣಗೊಳಿಸುವ ಅಬ್ಬರದ ಹೇಳಿಕೆಗಳ ಟೊಳ್ಳುತನವು ಪ್ರಧಾನ ಮಂತ್ರಿ ಕಿಸಾನ್ ನಿಧಿಗೆ ಹಂಚಿಕೆಯನ್ನು ರೂ. 68,000 ಕೋಟಿ ರೂ. ಗಳಿಂದ ರೂ.60,000 ಕೋಟಿಗೆ ಇಳಿಸಿರುವದರಲ್ಲಿ ಕಾಣಬಹುದು.

ಬಂಡವಾಳ ವೆಚ್ಚಗಳಲ್ಲಿ ಗಣನೀಯ ಹೆಚ್ಚಳ ಮಾಡಲಾಗಿದೆ, ಇದು ಉದ್ಯೋಗ ಸೃಷ್ಟಿಗೆ ಅನುವು ಮಾಡಿಕೊಡುತ್ತದೆ ಎಂಬ ಸರ್ಕಾರದ ಹೇಳಿಕೆ ಕೇವಲ ತೋರಿಕೆ, ಏಕೆಂದರೆ 2022–2023 ರಲ್ಲಿ ಸಾರ್ವಜನಿಕ ಉದ್ಯಮದ ಸಂಪನ್ಮೂಲಗಳನ್ನು ಒಳಗೊಂಡಂತೆ ಒಟ್ಟು ಬಂಡವಾಳ ವೆಚ್ಚಗಳು ಕೇವಲ 9.6 ಶೇಕಡಾ ಹೆಚ್ಚಿವೆ ಎಂದು ಪರಿಷ್ಕೃತ ಅಂದಾಜುಗಳೇ ತೋರಿಸುತ್ತವೆ, ಇದು ಜಿಡಿಪಿ ಹೆಚ್ಚಳಕ್ಕಿಂತ ಕೆಳಮಟ್ಟದಲ್ಲಿಯೇ ಇದೆ.

ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು ರೂ. 5 ರಿಂದ 7 ಲಕ್ಷ ರೂ. ಗೆ ಏರಿಸಿರುವುದು ಸಂಬಳದಾರ ವಿಭಾಗಗಳಿಗೆ ಸ್ವಲ್ಪ ಪರಿಹಾರವನ್ನು ಒದಗಿಸಿದೆ. ಆದಾಗ್ಯೂ, ಹಣದುಬ್ಬರ ಮತ್ತು ಸಾಮಾಜಿಕ ವಲಯದ ವೆಚ್ಚದಲ್ಲಿ ಕಡಿತದಿಂದ ಜನರು ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ಅಗತ್ಯ ಸೇವೆಗಳಿಗೆ ಹೆಚ್ಚು ಖರ್ಚು ಮಾಡಬೇಕಾಗಿ ಬರುತ್ತದೆ ಎಂಬುದನ್ನು ಗಣನೆಗೆ ತಗೊಂಡರೆ ಕಡಿತವೇ ಹೆಚ್ಚು. ಈ ಬಜೆಟ್ ರಾಜ್ಯ ಸರ್ಕಾರಗಳಿಗೆ ಸಂಪನ್ಮೂಲ ವರ್ಗಾವಣೆಯನ್ನು ಹಿಸುಕುವ ಮೂಲಕ ಹಣಕಾಸು ಒಕ್ಕೂಟ ತತ್ವದ ಮೇಲೆ ಮತ್ತಷ್ಟು ದಾಳಿಗಳನ್ನು ಹೇರುವುದನ್ನು ಮುಂದುವರೆಸಿದೆ. ಈ ವರ್ಗಾವಣೆಗಳು 2022–23 ರಲ್ಲಿ 8.4 ಶೇಕಡಾ ಹಣದುಬ್ಬರ ದರದ ಹೊರತಾಗಿಯೂ 2021–22 ರ ಮಟ್ಟದಲ್ಲೇ ಇವೆ ಎಂದು 2022–23 ರ ಪರಿಷ್ಕೃತ ಅಂದಾಜು ತೋರಿಸುತ್ತದೆ. ಅಲ್ಲದೆ ಸಾಲ ಪಡೆಯಲು ರಾಜ್ಯ ಸರ್ಕಾರಗಳಿಗೆ ಮತ್ತಷ್ಟು ಷರತ್ತುಗಳನ್ನು ವಿಧಿಸಲಾಗಿದೆ.

ಹಣಕಾಸು ಸಚಿವರು ನೀಡಿರುವ ಮಾಹಿತಿಯ ಪ್ರಕಾರ ಶ್ರೀಮಂತರಿಗೆ ತೆರಿಗೆ ರಿಯಾಯಿತಿಗಳು ಮತ್ತು ಒಟ್ಟಾರೆ ತೆರಿಗೆ ಪ್ರಸ್ತಾವನೆಗಳು 2023–24ರಲ್ಲಿ 35,000 ಕೋಟಿ ರೂ ಆದಾಯ ನಷ್ಟಕ್ಕೆ ಕಾರಣವಾಗುತ್ತವೆ.

ಜನರಿಗೆ ಬಹಳಷ್ಟು ಹೆಚ್ಚು ಅಗತ್ಯವಿರುವ ಪರಿಹಾರವನ್ನು ಒದಗಿಸಲು ಮತ್ತು ಅರ್ಥವ್ಯವಸ್ಥೆ ಸುಧಾರಿಸಿಕೊಳ್ಳುವಂತೆ ಆಂತರಿಕ ಬೇಡಿಕೆಯನ್ನು ಹೆಚ್ಚಿಸಲು ಬಜೆಟ್ ಈ ಕೆಳಗಿನವುಗಳನ್ನು ಮಾಡಬೇಕಿತ್ತು:

......ಪುಟ 10 ನೋಡಿ



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

ಶ್ರಮ, ಉದ್ಯೋಗ ಮತ್ತು ಸಂಬಂಧಿತ ವಲಯಗಳು	2022–23 ಕೋಟಿ ರೂ.	2023–24 ಕೋಟಿ ರೂ.	ಇಳಿಕೆ
ಶ್ರಮ ಮತ್ತು ಉದ್ಯೋಗ	24,034**	13,222	44.98%
ಮನರೇಗ ಯೋಜನೆ	89,400*	60,000	32.90%
ಗ್ರಾಮೀಣ ಉದ್ಯೋಗ	1,53,525*	1,01,475	33.90%
ಆತ್ಮನಿರ್ಭರ್ ಉ.ಯೋ.	6,400	2,273	64.48%
ಪಿಎಸ್‌ಯು/ಜೆವಿ/ಎಸ್‌ಪಿವಿ ಇತ್ಯಾಧಿಗಳಲ್ಲಿ ಹೂಡಿಕೆ	38,687	34,353	11.20%

ಕೃಷಿ ವಲಯಕ್ಕೆ	2022–23	2023–24	ಇಳಿಕೆ
ಕೃಷಿ	1,24,000	1,15,538	6.82%
ಕೃಷಿ ವಿಕಾಸ ಯೋಜನೆ	10,433	7,150	31.46%
ಕಿಸಾನ್ ಸಮ್ಮಾನ್ ನಿಧಿ	68,000	60,000	11.76%
ಕೃಷಿ ಉನ್ನತಿ ಯೋಜನೆ	7,153	7,066	1.62%
ಕೃಷಿ ಸಿಂಚಾಯಿ ಯೋಜನಾ	12,954	10,787	16.70%
ರಸಗೊಬ್ಬರ ಸಬ್ಸಿಡಿ	2,25,220*	1,75,100	22.25%
ಯೂರಿಯ ಸಬ್ಸಿಡಿ	1,54,098*	1,31,100	14.92%
ಬೆಳೆ ವಿಮಾ ಯೋಜನೆ	15,500	13,625	12.00%
ಹಸಿರು ಕ್ರಾಂತಿ (2021–22)	6,747	–	ನಿರ್ನಾಮ
PSS-MIS(ಬೆಳೆ ಬೆಂಬಲ)	1,500*	–	”
ಪಿಎಂ–ಆಶಾ(ಎಂಎಸ್‌ಪಿ ಗೆ)	1.00	–	”

ವಸತಿ, ಸಾಮಾಜ ಕಲ್ಯಾಣ ಮತ್ತು ಇತರ ಸಬ್ಸಿಡಿಗಳು	2022–23	2023–24	ಇಳಿಕೆ
ಪಿಎಂ ಆವಾಸ್ ಯೋಜನಾ	90,020**	79,590	11.58%
ಗ್ರಾಮೀಣ ಅಭಿವೃದ್ಧಿ	1,81,121.8*	1,57,545	13.00%
ಅಲ್ಪಸಂಖ್ಯಾತರ ಅಭಿವೃದ್ಧಿಯ ಒಟ್ಟು ಕಾರ್ಯಕ್ರಮ	1,810	610	66.30%
ಪೆನ್ಷನ್	2,44,780*	2,34,359	4.20%
ಸಾಮರ್ಥ್ಯ–ಮಾತೃವಂದನಾ	2,622.11	2,581.94	1.53%
ಪೆಟ್ರೋಲಿಯಂ ಸಬ್ಸಿಡಿ	9,191*	2,257	75.38%
ಎಲ್‌ಪಿಜಿ ಸಬ್ಸಿಡಿ	5,813	2,257	61.00%

* ಪರಿಷ್ಕೃತ ಅಂದಾಜು ** 2021–22ರ ನಿಜವಾದ ವೆಚ್ಚ(ಎಲ್ಲವೂ ಕೋಟಿ ರೂ.)

- ಲಿಂಗ ಬಜೆಟ್ ಒಟ್ಟು ಖರ್ಚಿನ ಶೇಕಡಾ 9 ಮಾತ್ರ.
- 16 ಶೇಕಡಾ ಜನಸಂಖ್ಯೆ ಇರುವ ಪರಿಶಿಷ್ಟ ಜಾತಿ ಬಜೆಟಿಗೆ ಕೇವಲ ಶೇ. 3.5, ಮತ್ತು ಶೇ. 8.6 ರಷ್ಟಿರುವ ಪರಿಶಿಷ್ಟ ಬುಡಕಟ್ಟುಗಳಿಗೆ ಕೇವಲ ಶೇಕಡಾ 2.7.
- ಸಾಂಕ್ರಾಮಿಕ ರೋಗದಿಂದ ಉಂಟಾದ ವಿನಾಶದ ಹೊರತಾಗಿಯೂ ರೂ. ಕಳೆದ ವರ್ಷ ಆರೋಗ್ಯಕ್ಕಾಗಿ ಮೀಸಲಿಟ್ಟ 9,255 ಕೋಟಿ ರೂ. ಖರ್ಚಾಗದೆ ಉಳಿದಿದೆ.
- 2 ಕೋಟಿ ರೂ. ಮೇಲೆ ಆದಾಯ ಇರುವವರಿಗೆ, ಆದಾಯ ತೆರಿಗೆಯ ಮೇಲೆ ಸರ್ಚಾರ್ಜ್‌ನ್ನು 37% ದಿಂದ 25% ಕ್ಕೆ ಇಳಸಲಾಗಿದೆ. ಇದರಿಂದಾಗಿ ಒಟ್ಟಾರೆ ಗರಿಷ್ಟ ಆದಾಯ ತೆರಿಗೆ 42.7% ದಿಂದ 39%ಕ್ಕೆ ಇಳಯುತ್ತದೆ!

ಹಿಂಡೆನ್‌ಬರ್ಗ್ ವರದಿ: ಅದಾನಿ ಸಮೂಹದ ಅಕ್ರಮ, ವಂಚನೆಗಳ ಚಿತ್ರ

ನವ ಉದಾರವಾದಿ ಹಗರಣಗಳ ಅಮೃತಕಾಲದ ಆವೃತ್ತಿ?

ಇತ್ತೀಚೆಗೆ ಅಮೆರಿಕ ಮೂಲದ 'ಹಿಂಡೆನ್‌ಬರ್ಗ್ ರಿಸರ್ಚ್' ಎಂಬ ಸಂಸ್ಥೆಯ ವರದಿಯೊಂದು, ಅದಾನಿ ಸಮೂಹ ನಡೆಸಿದೆ ಎನ್ನಲಾದ ಬೃಹತ್ ಹಣಕಾಸು ವಂಚನೆಯ ಜಾಲವನ್ನು ಬಯಲು ಮಾಡಿದೆ.

ಅದಾನಿ ಸಮೂಹ "ತನ್ನ ಶೇರು ಬೆಲೆಗಳ ಏರಿಕೆಗಾಗಿ ಶೇರು ಮಾರುಕಟ್ಟೆ ಅಕ್ರಮದಂಥ ಲಜ್ಜೆ ಗೆಟ್ಟ ಮಾರ್ಗದಲ್ಲಿ ತೊಡಗಿತ್ತು ಮತ್ತು ದಶಕಗಳ ಅವಧಿಯಲ್ಲಿ ಸುಮಾರು $218 ಬಿಲಿಯನ್ ಮೌಲ್ಯದ ಲೆಕ್ಕಪತ್ರ ವಂಚನೆ ಮಾಡಿದೆ" ಎಂದು ಅದು ವರದಿ ಮಾಡಿದೆ. ಈ ವರದಿ ಬಹಿರಂಗವಾದ ಬೆನ್ನಲ್ಲೇ ಅದಾನಿ ಸಮೂಹದ ಕಂಪನಿಗಳ ಷೇರುಗಳು ಇದುವರೆಗಿನ ಐದು ವಹಿವಾಟು ಅವಧಿಗಳಲ್ಲಿ (ಫೆಬ್ರವರಿ 1ರ ವರೆಗಿನ) 35% ವರೆಗೆ ಕುಸಿತ ಕಂಡು, ಸಮೂಹದ ಮಾರುಕಟ್ಟೆ ಬಂಡವಾಳ ಮೌಲ್ಯದಲ್ಲಿ ರೂ. 7.4 ಲಕ್ಷ ಕೋಟಿಗಳಷ್ಟು ಕರಗಿ ಹೋಗಿದೆ. ಇದರ ಪರಿಣಾಮವಾಗಿ ಅದಾನಿ ಸಮೂಹವು ಇದೇ ಜನವರಿ 31 ರಂದು ಮುಕ್ತಾಯಗೊಂಡ ಅದಾನಿ ಎಂಟರ್ಪ್ರೈಸಸ್ ನ ರೂ. 20,000 ಕೋಟಿ ಮೌಲ್ಯದ "ಮುಂದುವರಿದ ಷೇರು ವಿಕ್ರಯ"(FPO) ಪ್ರಕ್ರಿಯೆಯನ್ನು ಹಿಂದಕ್ಕೆ ಪಡೆಯಲು, ಎಲ್ಲ ಹೂಡಿಕೆದಾರರಿಗೆ ಹಣವನ್ನು ಹಿಂದಿರುಗಿಸಲು ನಿರ್ಧರಿಸಿರುವುದು ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿರುವುದನ್ನು ಸೂಚಿಸುತ್ತದೆ.

ಕೋಟ ನಾಗರಾಜ

ಅದಾನಿ ಸಮೂಹವನ್ನು "ಕಾರ್ಪೊರೇಟ್ ಇತಿಹಾಸದಲ್ಲಿ ಅತಿ ದೊಡ್ಡ ವಂಚನೆ ಎಸಗಿದ" ಗುಂಪು ಎಂದು ವರದಿಯಲ್ಲಿ ಆಪಾದಿಸಲಾಗಿದೆ. ಹಿಂಡೆನ್‌ಬರ್ಗ್ ನ ಎರಡು ವರ್ಷಗಳ ತನಿಖೆಯು, ಕಳೆದ ಮೂರು ವರ್ಷಗಳಲ್ಲಿ ಗೌತಮ್ ಅದಾನಿಯವರ ನಿವ್ವಳ ಮೌಲ್ಯಕ್ಕೆ 100 ಶತಕೋಟಿಗಿಂತ ಹೆಚ್ಚು ಸೇರಲ್ಪಡಲು, ಅದಾನಿ ಸಮುದಾಯದ ಷೇರು ಬೆಲೆಯಲ್ಲಿ 800% ಏರಿಕೆ ಆಗಿರುವುದೇ ಬಹುತೇಕ ಕಾರಣ ಎಂದು ತೋರಿಸಿದೆ. 2019 ರ ಅಂತ್ಯದ ವೇಳೆಗೆ 2 ಲಕ್ಷ ಕೋಟಿ ರೂಪಾಯಿಗಳಷ್ಟಿದ್ದ ಗೌತಮ್ ಅದಾನಿಯವರ ಸಮೂಹದ ಮಾರುಕಟ್ಟೆ ಬಂಡವಾಳ ಮೌಲ್ಯವು ಕೇವಲ ಮೂರೇ ವರ್ಷಗಳಲ್ಲಿ ರೂ. 20.74 ಲಕ್ಷ ಕೋಟಿಗಳಷ್ಟು ಬೃಹತ್ ಪ್ರಮಾಣದ ಅಸಹಜವಾದ ಏರಿಕೆ ಕಂಡಿದೆ.

ಸಾಂಕ್ರಾಮಿಕದ ಸಮಯದಲ್ಲಿ ಭಾರತದ ಜಿಡಿಪಿ 8% ರಷ್ಟು ಕುಸಿತ ಕಾಣುತ್ತಿದ್ದ ಸಂಧರ್ಭದಲ್ಲೇ ಅದಾನಿ ಗುಂಪಿಗೆ ಪ್ರತಿ ತಿಂಗಳು ಸರಾಸರಿ 56,700 ಕೋಟಿ ರೂಗಳಷ್ಟು ಸೇರ್ಪಡೆಯಾಗುತ್ತ ಹೋಗಿದೆ.

ಅದಾನಿ ಅವರ ನಿವ್ವಳ ಮೌಲ್ಯವು 2019ರ ಡಿಸೆಂಬರ್ 31ರಲ್ಲಿ $10 ಬಿಲಿಯನ್ ಇದ್ದು, 2022ರ ಡಿಸೆಂಬರ್ 31ರ ಹೊತ್ತಿಗೆ $121 ಬಿಲಿಯನ್ ಗೆ ಏರಿಕೆ ಕಂಡಿದೆ. ಬ್ಲೂಮ್‌ಬರ್ಗ್ ಬಿಲಿಯನೇರ್ಸ್ ಇಂಡೆಕ್ಸ್ ಪ್ರಕಾರ, ಈ ಹೊತ್ತಿಗೆ ಅದಾನಿ ಸಂಪತ್ತು ಮುಖೇಶ್ ಅಂಬಾನಿಯ ಆಸ್ತಿಯನ್ನೂ ($87.1 ಬಿಲಿಯನ್) ಮೀರಿಸಿತು.

ಇನ್ನೊಂದು ನವ–ಉದಾರವಾದಿ ಹಗರಣ
ಹಿಂದಿನ ಹಗರಣಗಳ ಮುಂದುವರಿಕೆ?

1990 ರ ದಶಕದಲ್ಲಿ ನವ ಉದಾರವಾದಿ ನೀತಿಗಳನ್ನು ಅಳವಡಿಸಿ ಕೊಂಡಾಗಿನಿಂದ, ನಮ್ಮ ದೇಶವು ಅನೇಕ ಹಣಕಾಸು ಹಗರಣಗಳಿಗೆ ಸಾಕ್ಷಿಯಾಗಿದೆ.

ಸತ್ಯಂ ಕಂಪ್ಯೂಟರ್, ವಿಜಯ್ ಮಲ್ಯ, ಜೆಟ್ ಏರ್‌ವೇಸ್, ಭೂಷಣ್ ಸ್ಟೀಲ್, ನೀರವ್ ಮೋದಿ, ಮೆಹುಲ್ ಚೋಕ್ಸಿ, ವಿನ್ಸಮ್ ಡೈಮಂಡ್ಸ್, ಸ್ಟರ್ಲಿಂಗ್ ಬಯೋಟೆಕ್, ರುಚಿ ಸೋಯಾ, DHFL, IL&FS ಹೀಗೆ ಹಲವಾರು ಹಗರಣಗಳನ್ನು ಇಲ್ಲಿ



ಹೆಸರಿಸಬಹುದು. ಈ ಪ್ರಕರಣಗಳು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಹೇಗೆ ಅಪಾರ ನಷ್ಟ ಉಂಟುಮಾಡಿವೆ ಎಂಬುದೀಗ ಸರ್ವ ವಿದಿತ.

ಈಗ ಅದಾನಿ ಸಮೂಹದಲ್ಲಿ ವಿಕಸನಗೊಳ್ಳುತ್ತಿರುವ ಬಿಕ್ಕಟ್ಟು, ಈ ಸಮೂಹದಲ್ಲಿ ಉದಾರವಾಗಿ ಹೂಡಿಕೆ ಮಾಡಿರುವ ಎಲ್‌ಐಸಿ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಂತಹ ದೈತ್ಯ ಸಾರ್ವಜನಿಕ ಹಣಕಾಸು ಸಂಸ್ಥೆಗಳ ಹಿತದೃಷ್ಟಿಯಿಂದ ಕಳವಳಕಾರಿ ಬೆಳವಣಿಗೆಯಾಗಿದೆ.

ಅದಾನಿ ಸಮೂಹದಲ್ಲಿ ಎಲ್‌ಐಸಿಯ ಸಂಯೋಜಿತ ಹೂಡಿಕೆ, ಅದರ ಒಟ್ಟು ಷೇರು ಮಾರುಕಟ್ಟೆಯ ಹೂಡಿಕೆಯ (ಇಕ್ವಿಟಿ ಹೂಡಿಕೆ) 8% ರಷ್ಟಿದ್ದು, ಅದಾನಿ ಸಮೂಹದ ಷೇರು ಮೌಲ್ಯದ ಕುಸಿತದಿಂದ ಸುಮಾರು ರೂ. 16,647 ಕೋಟಿಗಳಷ್ಟು ಹೂಡಿಕೆ ಮೌಲ್ಯ ಕರಗಿದೆ. ಇದರ ಜೊತೆಯಲ್ಲೇ "ಅದಾನಿ ಎಂಟರ್ಪ್ರೈಸಸ್" ನ ಷೇರುಗಳ ವಿಕ್ರಯದಲ್ಲೂ ಆಂಕರ್ ಹೂಡಿಕೆದಾರನಾಗಿ ರೂ. 300 ಕೋಟಿಯಷ್ಟು ಹೂಡಿಕೆಗೆ ನಿರ್ಧಾರ ಕೈಗೊಂಡಿದ್ದರೂ, ಈ ಪ್ರಕ್ರಿಯೆಯನ್ನು ವಾಪಸ್ ಪಡೆಯುವ ಸಮೂಹದ ನಿರ್ಧಾರದಿಂದ ಈ ಹಣ ಮಾರುಕಟ್ಟೆ ಅಪಾಯದಿಂದ ಬಚಾವಾಗಿರುವುದು ಸಮಾಧಾನಕರ ಸಂಗತಿ. ಇದೇ ರೀತಿ ಎಸ್‌ಬಿಐ ಉದ್ಯೋಗಿಗಳ ಪಿಂಚಣಿ ನಿಧಿ ಮತ್ತು ಎಸ್‌ಬಿಐ ಲೈಫ್ ಸಹ ಅದರಲ್ಲಿ 225 ಕೋಟಿ ರೂ. ಹೂಡಿಕೆ ಮಾಡುವುದಿತ್ತು.

ಹಿಂಡನ್ ಬರ್ಗ್ ಸಂಶೋಧನೆ ವರದಿ ಪ್ರಕಾರ ಸಮೂಹದ ಐದು ಕಂಪನಿಗಳು ಅಲ್ಪಾವಧಿಯ ದ್ರವ್ಯತೆ (Short term liquidity) ಅಪಾಯವನ್ನು ಸೂಚಿಸುತ್ತವೆ, ಅಂದರೆ ಈ ಕಂಪನಿಗಳು 'ತ್ವರಿತವಾಗಿ ನಗದಾಗಿ' ಪರಿವರ್ತಿಸ ಬಹುದಾದ ಆಸ್ತಿಗಳಿಗಿಂತ, (Current Assets) ಹೆಚ್ಚು 'ತ್ವರಿತ ಜವಾಬ್ದಾರಿ' (Current Liabilities)ಗಳನ್ನು ಹೊಂದಿವೆ. ಇವುಗಳ ಅನುಪಾತ 1:0.

"ಸಾಲದ ಮನೆ" ಮತ್ತು ಅಕ್ರಮ ಹಣ ವರ್ಗಾವಣೆಯ ಆರೋಪ

ಕ್ರೆಡಿಟ್ ಸೂಸ್ಸಿ (Credit Suisse) ಸಂಸ್ಥೆಯ ವರದಿ 2015 ರಲ್ಲೇ ಅದಾನಿ ಸಮೂಹವು "ಸಾಲದ ಮನೆ"ಯಾಗಿರುವುದಾಗಿ ಎಚ್ಚರಿಕೆ ನೀಡಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು.

ಮಾರಿಷಸ್ ಮೂಲದ ನಾಲ್ಕು ಫಂಡ್‌ಗಳು–ಎಲಾರಾ ಇಂಡಿಯಾ ಆಪರ್ಚುನಿಟೀಸ್ ಫಂಡ್, ಕ್ರೆಸ್ಟಾ ಫಂಡ್, ಅಲ್ಬುಲಾ ಇನ್ವೆಸ್ಟ್‌ಮೆಂಟ್ ಫಂಡ್ ಮತ್ತು ಎಪಿಎಂಎಸ್ ಇವು ಅದಾನಿ ಸಮೂಹದಲ್ಲಿ ಅವರ ಸಂಪೂರ್ಣ $6.9 ಶತಕೋಟಿ ನಿರ್ವಹಣೆಯ ಅಡಿಯಲ್ಲಿ ಹೂಡಿಕೆ ಮಾಡಿವೆ.

ಈ ನಾಲ್ಕು ಫಂಡ್ ಗಳು ಹಿಂದೆ ದಿವಾಳಿಯಾಗಿರುವ ವಿನ್ಸಮ್ ಡೈಮಂಡ್ಸ್ ಅಂಡ್ ಜ್ಯುವೆಲ್ಲರಿ ಲಿಮಿಟೆಡ್, ಸ್ಟರ್ಲಿಂಗ್ ಬಯೋಟೆಕ್ ಲಿಮಿಟೆಡ್, ರುಚಿ ಸೋಯಾ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಕರುತುರಿ ಗ್ಲೋಬಲ್ ಕಂಪನಿಗಳಲ್ಲಿ ಷೇರುದಾರರಾಗಿದ್ದರು ಎನ್ನುವುದು ಗಮನಾರ್ಹ ಸಂಗತಿ. ಈ ಹಿಂದೆ ಈ ನಿಧಿಗಳನ್ನು ಅಕ್ರಮ ಹಣ ವರ್ಗಾವಣೆ ಮತ್ತು ತೆರಿಗೆ ವಂಚನೆ ವಿಷಯದಲ್ಲಿ ತನಿಖೆಗೆ ಒಳಪಡಿಸಲಾಗಿತ್ತು.

ಅದಾನಿ ಸಮೂಹ ತನ್ನ ನಿರ್ವಹಣೆ ಹಾಗೂ ವಿಸ್ತರಣೆಗಾಗಿ ಬಾಹ್ಯ ಸಾಲವನ್ನು ಅವಲಂಬಿಸಿರುವುದು ಗೊತ್ತಿರುವ ವಿಷಯವೆ. ಆದರೆ ಅದಾನಿಯವರ ಸ್ವಂತ ಹಣವನ್ನೇ ಮಾರಿಷಸ್ ನ ಸುಪ್ತ (ಶೆಲ್-shell) ಮಾರ್ಗ ಬಳಸಿ ಅಕ್ರಮವಾಗಿ ಷೇರು ಮಾರುಕಟ್ಟೆಯ ವಂಚನೆಗಾಗಿ ವರ್ಗಾವಣೆ ಮಾಡಲಾಗಿದೆಯೇ ಎನ್ನುವುದು ತನಿಖೆ ಮೂಲಕವಾಗಿ ಗೊತ್ತಾಗಬೇಕಿದೆ.

ಹಿಂಡೆನ್ ಬರ್ಗ್ ರಿಸರ್ಚ್‌ನ ವಂಚನೆ ಆರೋಪಗಳಲ್ಲಿ ಪ್ರಮುಖ ಅಂಶವೇನೆಂದರೆ, ಅದಾನಿ ಸಮೂಹ ಕಂಪನಿಗಳು ಮತ್ತು ಅದಾನಿ ಒಡೆತನದ ಕಡಲಿನಾಚೆಯ ಶೆಲ್ ಕಂಪನಿಗಳು ಪರಸ್ಪರ ಸಾಲದ ರೂಪದಲ್ಲಿ ಅಕ್ರಮ ಹಣ ವರ್ಗಾವಣೆ (Money Laundering) ಮಾರ್ಗದಿಂದ ಲೆಕ್ಕ ಪತ್ರಗಳ ವಂಚನೆಯಲ್ಲಿ ತೊಡಗಿವೆ. ವರದಿಯ ಪ್ರಕಾರ "ಇದೊಂದು ಇಸ್ಪೀಟ್ ಎಲೆಗಳ ಮನೆ, ಸಾಲವೇ ಅದರ ಇಂಧನವಾಗಿದೆ".


ಪುಟ 15 ಕ್ಕೆ



ಅದಾನಿ ಸಮೂಹ 1988 ರಲ್ಲಿ ಸ್ಥಾಪನೆಯಾದ ಸರಕು ವ್ಯಾಪಾರ ಸಮೂಹ. 2013 ರಲ್ಲಿ, ಈ ಸಮೂಹದ ಹೆಚ್ಚಿನ ಆಸ್ತಿಗಳು ಗುಜರಾತ್‌ಗೆ ಸೀಮಿತವಾಗಿದ್ದವು. ಇತ್ತೀಚಿನ ವರ್ಷಗಳಲ್ಲಿ, ಇದು $23 ಬಿಲಿಯನ್ ನಷ್ಟು ಆದಾಯ (ವಾರ್ಷಿಕ ಮಾರಾಟ) ಹೊಂದಿರುವ, ಭಾರತದಾದ್ಯಂತ ಇಂಧನ, ಕೈಗಾರಿಕಾ ಮತ್ತು ಸಾಗಾಣಿಕೆ(ಲಾಜಿಸ್ಟಿಕ್ಸ್)ಯಲ್ಲಿ ತೊಡಗಿಸಿಕೊಂಡಿರುವ ಏಳು ಸಾರ್ವಜನಿಕ ಕಂಪನಿಗಳೂ ಸೇರಿ ಸಂಘಟಿತ ಸಂಸ್ಥೆಯಾಗಿ ಬೆಳೆದಿದೆ. 2014 ರಿಂದ ಹೆಚ್ಚಾಗಿ ಸಿಮೆಂಟ್, ಬಂದರುಗಳು, ವಿಮಾನ ನಿಲ್ದಾಣಗಳು ಮತ್ತು ಇಂಧನ ವಲಯಗಳಲ್ಲಿ ಸುಮಾರು 30 ಕಂಪನಿಗಳನ್ನು ಸ್ವಾಧೀನ ಪಡಿಸಿಕೊಂಡಿದೆ. ಈ ಅವ್ಯಾಹತ ಸ್ವಾಧೀನ–ಚಾಲಿತ ಬೆಳವಣಿಗೆ ಸಾಧ್ಯವಾಗಿಸುವಲ್ಲಿ ಭಾರತೀಯ ಬ್ಯಾಂಕುಗಳು ನೀಡಿರುವ ಸಾಲ ಪ್ರಮುಖ ಪಾತ್ರ ವಹಿಸಿವೆ.




ವ್ಯಂಗ್ಯಚಿತ್ರ: ಅಲೋಕ್ ನಿರಂತರ್



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್



ವ್ಯಂಗ್ಯಚಿತ್ರ: ಪಿ.ಮಹಮ್ಮದ್



‘ಅಮೃತ ಕಾಲ’ದ ವಿಷಕಾರಿಯಾಗುವ ಬಜೆಟ್–ಸಿಐಟಿಯು

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಕೇಂದ್ರ ಬಜೆಟ್ ಒಂದು ರಾಜಕೀಯ ಜುಮ್ಲಾವೇ ಹೊರತು ಬೇರೇನೂ ಅಲ್ಲ ಎಂದು ಸಿಐಟಿಯ ಹೇಳಿದೆ. ದೇಶ ಎದುರಿಸುತ್ತಿರುವ ಕಠೋರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅದು ಒಂದು ಮಾತನ್ನೂ ಹೇಳುವುದಿಲ್ಲ. ಇದರ ಮೊದಲು ಮಂಡಿಸಿದ ಆರ್ಥಿಕ ಸಮೀಕ್ಷೆಯು ಒಂದು ಸುಂದರ ಚಿತ್ರವನ್ನು ಪ್ರಸ್ತುತಪಡಿಸುವ ಮೂಲಕ ಅದನ್ನು ಮರೆಮಾಚಲು ಪ್ರಯತ್ನಿಸಿತ್ತು ಎಂದು ಅದು ಹೇಳಿದೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಜನವಿರೋಧಿ, ರಾಷ್ಟ್ರವಿರೋಧಿ ಮತ್ತು ಕಾರ್ಪೊರೇಟ್ ಪರವಾದ ಚಾರಿತ್ರ್ಯಕ್ಕೆ ಈ ಬಜೆಟ್ ಮತ್ತೊಮ್ಮೆ ಪುರಾವೆಯಾಗಿದೆ. 2024ರ ಲೋಕಸಭೆ ಚುನಾವಣೆಗೂ ಮುನ್ನವೇ ಕೊನೆಯ ಬಜೆಟ್ ಆಗಿರುವುದರಿಂದ ಜನರಿಗೆ ಒಂದಿಷ್ಟು ಪರಿಹಾರ ನೀಡಬಹುದೆಂಬ ನಿರೀಕ್ಷೆ ಕೆಲವೆಡೆ ಇದ್ದರೂ ಅಮೃತ ಕಾಲದ ಮೊದಲ ಬಜೆಟ್ ಜನರ ಪಾಲಿಗೆ ವಿಷಮಯವಾಗಿ ಪರಿಣಮಿಸಿದೆ. ಬಹುಶಃ ಬಿಜೆಪಿ–ಆರ್‌ಎಸ್‌ಎಸ್ ತಮ್ಮ ಕೋಮು ವಿಭಜಕ ಅಜೆಂಡಾವನ್ನು ಹೆಚ್ಚು ಅವಲಂಬಿಸಲು ಬಯಸುತ್ತವೆ. ಆದ್ದರಿಂದ ಕಾರ್ಮಿಕ ವರ್ಗ ಮತ್ತು ಜನತೆ ಜಾಗೃತರಾಗಬೇಕು ಎಂದು ಎಚ್ಚರಿಸಿರುವ ಸಿಐಟಿಯು ತನ್ನ ಎಲ್ಲಾ ಸಮಿತಿಗಳು, ಅಂಗಸಂಸ್ಥೆಗಳು ಮತ್ತು ಕಾರ್ಮಿಕ ವರ್ಗ ಮತ್ತು ದೇಶಾದ್ಯಂತ ಎಲ್ಲ ಶ್ರಮಜೀವಿಗಳು ಈ ಬಜೆಟ್ ಅನ್ನು ಬಲವಾಗಿ ವಿರೋಧಿಸಬೇಕು ಮತ್ತು ಕೆಲಸದ ಸ್ಥಳಗಳು ಮತ್ತು ವಸತಿ ಪ್ರದೇಶಗಳಲ್ಲಿ ಪ್ರತಿಭಟನೆಗಳನ್ನು ನಡೆಸಬೇಕೆಂದು ಕರೆ ನೀಡಿದೆ.


ಆರ್ಥಿಕ ಸಮೀಕ್ಷೆಯು 2022–23ರಲ್ಲಿ ಜಿಡಿಪಿಯಲ್ಲಿ 6.5% ಕುಸಿತವಾಗಲಿದೆ ಎಂದು ಹೇಳಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಎಂದೂ ಸತತ ನಾಲ್ಕು ವರ್ಷಗಳ ಕಾಲ ಬೆಳವಣಿಗೆ ಇಳಿಮುಖಗೊಂಡಿರಲಿಲ್ಲ. ಉತ್ಪಾದನಾ ವಲಯದಲ್ಲಿ ಬೆಳವಣಿಗೆಯ ಬದಲು ಇಳಿಕೆಯಾಗಿದೆ–ಕಳೆದ ಹಣಕಾಸು ವರ್ಷದ 9.9% ಕ್ಕೆ ಹೋಲಿಸಿದರೆ 1.6% ಕ್ಕೆ ಇಳಿದಿದೆ. ಉದ್ಯೋಗ ನಷ್ಟ, ಕಾರ್ಮಿಕರು ಮತ್ತು ಸಾಮಾನ್ಯ ಜನರ ಕೆಲಸದ ಮತ್ತು ಜೀವನ ಪರಿಸ್ಥಿತಿಗಳು ಹದಗೆಡುತ್ತಿರುವುದು, ಆತಂಕಕಾರಿ ನಿರುದ್ಯೋಗ ಮತ್ತು ಹಣದುಬ್ಬರವು ಕಾರ್ಮಿಕರು ಮತ್ತು ಒಟ್ಟಾರೆಯಾಗಿ ಜನಸಾಮಾನ್ಯರಿಗೆ ಅಪಾರ ಸಂಕಟಗಳನ್ನು ಉಂಟುಮಾಡಿವೆ. ಆದರೆ ಸರಕಾರಕ್ಕೆಇಂತಹ ಹಣದುಬ್ಬರದ ಪರಿವೆಯೇ ಇದ್ದಂತಿಲ್ಲ. ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ರಫ್ತು ಬೆಳವಣಿಗೆಯಲ್ಲಿ ಸ್ಥಗಿತತೆ, ಚಾಲ್ತಿ ಖಾತೆ ಕೊರತೆಯಲ್ಲಿ ಹೆಚ್ಚಳ, ರೂಪಾಯಿಯ ಬೆಲೆಯಲ್ಲಿ ನಿರಂತರ ಕುಸಿತ, ಹೆಚ್ಚಿನ ಸಾಲ– ಜಿಡಿಪಿ ಅನುಪಾತದಂತಹ ಆರ್ಥಿಕ ಸಮೀಕ್ಷೆಯಲ್ಲಿ ಉಲ್ಲೇಖಿಸಲಾದ ಅಪಾಯಗಳನ್ನು ಸಹ ಪರಿಹರಿಸಲು ಈ ಬಜೆಟ್ ವಿಫಲವಾಗಿದೆ ಎಂದು ಸಿಐಟಿಯು ಹೇಳಿದೆ.

ಪೆಟ್ರೋಲಿಯಂ ಸಬ್ಸಿಡಿಯಲ್ಲಿ ಕಳೆದ ವರ್ಷದ ಪರಿಷ್ಕೃತ ಅಂದಾಜಿನಿಂದ 75% ರಷ್ಟು ತೀವ್ರ ಕಡಿತವು ಅರ್ಥವ್ಯವಸ್ಥೆಯ ಎಲ್ಲಾ ವಲಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಮತ್ತು ಬೆಲೆಗಳಲ್ಲಿ ತೀವ್ರವಾಗಿ ಏರಿಕೆಯಾಗುತ್ತದೆ ಎಂದು ಅದು ಎಚ್ಚರಿಸಿದೆ.

ಇತ್ತೀಚೆಗೆ ಬಿಡುಗಡೆಯಾದ ಆಕ್ಸ್‌ಫ್ಯಾಮ್ ವರದಿಯು ಮೇಲ್ತುದಿಯ 10% ಶ್ರೀಮಂತ ಮಂದಿಗೆ ಹೋಲಿಸಿದರೆ ಭಾರತದ ತಳಭಾಗದ ಅರ್ಧದಷ್ಟು ಜನರು ಆರು ಪಟ್ಟು ಹೆಚ್ಚು ಪರೋಕ್ಷ ತೆರಿಗೆಗಳನ್ನು ಪಾವತಿಸುತ್ತಾರೆ ಎಂದು ಸೂಚಿಸಿದ್ದರೆ, ಈ ಬಜೆಟ್ ಸೂಪರ್ ಶ್ರೀಮಂತರ ಮೇಲಿನ ತೆರಿಗೆ ದರವನ್ನು ಮತ್ತಷ್ಟು ಕಡಿಮೆ ಮಾಡಿದೆ. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಹಸಿವಿನಿಂದ ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿರುವವರ ನೆಲೆಯಾಗಿರುವಾಗ, ಆಹಾರದ ಮೇಲಿನ ಒಟ್ಟು ಸಬ್ಸಿಡಿಯನ್ನು ರಷ್ಟು ಕಡಿತಗೊಳಿಸಲಾಗಿದೆ.

ನಮ್ಮ ದೇಶದ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಮೂಲಸೌಕರ್ಯದ ಕರುಣಾಜನಕ ಪರಿಸ್ಥಿತಿಗಳನ್ನು ಬಹಿರಂಗಪಡಿಸಿದ ಕೋವಿಡ್ ಸಾಂಕ್ರಾಮಿಕ ಸಮಯದ ಆರೋಗ್ಯ ದುರಂತದಿಂದ ಮೋದಿ

......ಪುಟ 11 ನೋಡಿ



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಕಾರ್ಪೊರೇಟ್ ಬಂಟರು ಹೇಳಿದಂತೆ ಸಿದ್ಧಪಡಿಸಿದ ಬಜೆಟ್–ಎಐಕೆಎಸ್

‘ಅಮೃತಕಾಲ’ದ ಟೊಳ್ಳು ಮಾತುಗಳ ಮೂಲಕ ರೈತರು, ಕಾರ್ಮಿಕರ ಮೇಲೆ ಪ್ರತೀಕಾರ ದಾಳಿ

ಕೇಂದ್ರ ಬಜೆಟ್ 2023–24 ಶ್ರೀಮಂತರಿಗಾಗಿ, ಕಾರ್ಪೊರೇಟ್ ಬಂಟರ ಆಣತಿಯಂತೆ ತಯಾರಿಸಿದ ಬಜೆಟ್, ರೈತರು, ಬಡವರು ಮತ್ತು ಶ್ರಮಜೀವಿಗಳ ಹಿತಾಸಕ್ತಿಗೆ ವಿರುದ್ಧವಾಗಿರುವ ಬಜೆಟ್ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಪ್ರತಿಕ್ರಿಯೆ ನೀಡಿದೆ. ಆಡಂಬರದ ಮಾತುಗಳೇನೋ ದಂಡಿಯಾಗಿದೆ, ಆದರೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ನಿಜವಾದ ಹಂಚಿಕೆಯ ವಿಷಯದಲ್ಲಿ ಟೊಳ್ಳಾಗಿದೆ ಎಂದು ಅದು ಹೇಳಿದೆ. ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಈ ಎಲ್ಲ ದ್ರೋಹಗಳನ್ನು ಬಯಲಿಗೆಳೆಯಲು ಎಲ್ಲಾ ರೈತರು ಮತ್ತು ಕಾರ್ಮಿಕರೊಂದಿಗೆ ಒಗ್ಗೂಡಿ ಈ ರೈತ, ಕಾರ್ಮಿಕ ವಿರೋಧಿ, ಕಾರ್ಪೊರೇಟ್ ಪರವಾದ ಬಜೆಟ್ ವಿರುದ್ಧ ಪ್ರತಿಭಟಿಸಲು ಎಐಕೆಎಸ್ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಅಮೃತ ಕಾಲ ಎಂಬ ಎಲ್ಲಾ ಮಾತುಗಳು ಟೊಳ್ಳು, ಭಾರತದ ಆಹಾರ ಉತ್ಪಾದಕರು, ಶ್ರಮಜೀವಿಗಳು ಮತ್ತು ಬಡವರಿಗೆ ಯಾವುದೇ ಗಣನೀಯ ಪರಿಹಾರವನ್ನು ಒದಗಿಸಲಾಗಿಲ್ಲ. ಹಣಕಾಸು ಮಂತ್ರಿಗಳ ಭಾಷಣದಲ್ಲಿ ಹೇಳಿಕೊಂಡಿರುವದೆಲ್ಲವೂ ಸಂಪೂರ್ಣ ಸುಳ್ಳು ಎಂಬುದು ವಿವಿಧ ಬಾಬ್ತುಗಳಿಗೆ ನಿಜವಾದ ಹಂಚಿಕೆಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. ಈ ಸರ್ಕಾರದ ಕೊನೆಯ ಪೂರ್ಣ ಬಜೆಟ್ ಅದರ ಜನವಿರೋಧಿ, ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಬಿಡಲು ಏನನ್ನೂ ಮಾಡಿಲ್ಲ, ಬದಲಿಗೆ ಅವನ್ನು ಇದು ಅದನ್ನು ಮತ್ತಷ್ಟು ಬಲಪಡಿಸುತ್ತದೆ. ಆರೋಗ್ಯ, ಶಿಕ್ಷಣ ಅಥವಾ ಸಾಮಾಜಿಕ ಭದ್ರತೆಯ ವಿಷಯದಲ್ಲಿ ಜನಸಾಮಾನ್ಯರಿಗೆ ಬಜೆಟ್ ಯಾವುದೇ ಪರಿಹಾರವನ್ನು ನೀಡುವುದಿಲ್ಲ ಎಂದು ಎಐಕೆಎಸ್ ಈ ಬಜೆಟನ್ನು ವಿಶ್ಲೇಷಿಸುತ್ತ ಹೇಳಿದೆ.

ಎಂ.ಎಸ್.ಸ್ವಾಮಿನಾಥನ್ ಆಯೋಗದ ಸಿ2+50 % ಶಿಫಾರಸ್ಸುಗಳ ಪ್ರಕಾರ ಕನಿಷ್ಠ ಬೆಂಬಲ ಬೆಲೆಗಳನ್ನು ಜಾರಿಗೆ ತರಲು ಬಿಜೆಪಿ ಸರ್ಕಾರ ನಿರಾಕರಿಸಿದೆ ಮತ್ತು ಕನಿಷ್ಟ ಬೆಂಬಲ ಬೆಲೆಗೆ ಕಾನೂನು ಖಾತರಿಯನ್ನು ಖಾತರಿಯನ್ನೂ ಕೊಟ್ಟಿಲ್ಲ. ರೈತರ ಸಂಕಷ್ಟದ ಪರಿಸ್ಥಿತಿಯನ್ನು ತಗ್ಗಿಸಲು ಈ ಬಜೆಟ್ ಏನನ್ನೂ ಮಾಡುವುದಿಲ್ಲ. ಗ್ರಾಮೀಣ ಉದ್ಯೋಗ, ಮನರೇಗ, ಆಹಾರ ಭದ್ರತೆ, ರಸಗೊಬ್ಬರ ಸಬ್ಸಿಡಿ ಇತ್ಯಾದಿಗಳ ಮೇಲೆ ಸರಕಾರದ ವೆಚ್ಚಗಳನ್ನು ವೆಚ್ಚವನ್ನು ತೀವ್ರವಾಗಿ ಕಡಿತಗೊಳಿಸುವ ಮೂಲಕ

ಕಾರ್ಪೊರೇಟ್ ಪರವಾದ ಮೂರು ಕಾಯಿದೆಗಳನ್ನು ಹಿಂಪಡೆಯಲು ಒತ್ತಾಯಿಸಿದ ಐತಿಹಾಸಿಕ ಐಕ್ಯ ರೈತ ಚಳವಳಿಯ ಕೈಯಲ್ಲಿ ಅನುಭವಿಸಿದ ಹೀನಾಯ ಸೋಲಿಗೆ ಬಿಜೆಪಿ ಸರ್ಕಾರ ರೈತರಿಂದ ಸೇಡು ತೀರಿಸಿಕೊಳ್ಳುತ್ತಿದೆ ಎಂದು ಎಐಕೆಎಸ್ ಹೇಳಿದೆ.

ಆರ್ಥಿಕ ಹಿಂಜರಿತ, ಹವಾಮಾನ ಬದಲಾವಣೆಯ ಬೆದರಿಕೆಗಳು ಮತ್ತು ಇತರ ಪರಿಸ್ಥಿತಿಗಳಿಂದಾಗಿ ಅನಿಶ್ಚಿತತೆಗಳು ಹೆಚ್ಚಾಗಿರುವ ಸಮಯದಲ್ಲಿ ಬಂದಿರುವ ಈ ಬಜೆಟ್ ನಲ್ಲಿ ರೈತರು ಮತ್ತು ಶ್ರಮಜೀವಿಗಳ ಆದಾಯವನ್ನು ಹೆಚ್ಚಿಸಲು ಏನೂ ಇಲ್ಲ. ಕೃಷಿಗಾಗಿ ಬಜೆಟ್ ಅಂದಾಜು 2022–23 ರಲ್ಲಿ 1,24,000 ಕೋಟಿಗಳಿಂದ ಈ ವರ್ಷ 1,15,531.79 ಕೋಟಿಗಳಿಗೆ ಗಣನೀಯವಾಗಿ ಕಡಿಮೆಯಾಗಿದೆ. ವಾಸ್ತವವಾಗಿ, ಈ ಬಜೆಟ್‌ನಲ್ಲಿ ಕೃಷಿಗೆ ಬಜೆಟ್‌ನಲ್ಲಿ ಹಂಚಿಕೆಗಳಲ್ಲಿ ಸಮಗ್ರ ಕಡಿತವಾಗಿದೆ.

ಬಹುಪ್ರಚಾರಿತ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯು ಕಳೆದ ವರ್ಷಕ್ಕಿಂತ ಯಾವುದೇ ಹೆಚ್ಚಳವನ್ನು ಕಂಡಿಲ್ಲ. ಹಂಚಿಕೆ 60,000 ಕೋಟಿ ರೂ. ಸರಕಾರ ಹೇಳಿಕೊಳ್ಳುವಂತೆ ಇದರ ಫಲಾನುಭವಿಗಳು ಸುಮಾರು 12 ಕೋಟಿ ಎಂದಾಗಿದ್ದರೆ 72,000 ಕೋಟಿ ರೂ. ಕೊಡಬೇಕಿತ್ತು. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ 2022–23 ರ ಬಜೆಟ್ ಅಂದಾಜು ರೂ.15,500 ಕೋಟಿಗಳಿಗೆ ಹೋಲಿಸಿದರೆ ಈ ಬಜೆಟ್ ಕೇವಲ ರೂ.13625 ಕೋಟಿಗಳನ್ನು ನಿಗದಿಪಡಿಸಿದೆ. ಈ ಹಿಂದೆ ಕೋರ್ ಸ್ಕೀಮ್ ಎಂದು ಪ್ರಚಾರ ಮಾಡಿದ್ದ ಮತ್ತು 2021–22 ರಲ್ಲಿ ರೂ.6,747 ಕೋಟಿಗಳ ಹಂಚಿಕೆಯನ್ನು ಹೊಂದಿದ್ದ ‘ಹಸಿರು ಕ್ರಾಂತಿ’ಗೆ ಕಳೆದ ಮತ್ತು ಪ್ರಸ್ತುತ ಬಜೆಟ್‌ನಲ್ಲಿ ಯಾವುದೇ ಹಂಚಿಕೆ ಇರಲಿಲ್ಲ. ಈ ಬಾರಿಯೂ ಇಲ್ಲ. ರಸಗೊಬ್ಬರ ಸಬ್ಸಿಡಿಗಳಲ್ಲಿ, ಗ್ರಾಮೀಣ ಉದ್ಯೋಗದಲ್ಲಿ, ತೀವ್ರ ಕಡಿತಗಳಾಗಿವೆ. ಮನರೇಗದ ಅಡಿಯಲ್ಲಿ ಕಾನೂನಾತ್ಮಕವಾಗಿ ಖಾತರಿಪಡಿಸಿದ 100 ದಿನಗಳ ಉದ್ಯೋಗವನ್ನು ಒದಗಿಸಲು 2.72 ಲಕ್ಷ ಕೋಟಿ ರೂ.ಗಳ ಅಗತ್ಯವಿರುವ ಸಮಯದಲ್ಲಿ, ಸರಕಾರದ ಆರ್ಥಿಕ ಸಮೀಕ್ಷೆಯೂ ಈ ಯೋಜನೆಯಡಿಯಲ್ಲಿ ಬೇಡಿಕೆಯು ಸಾಂಕ್ರಾಮಿಕ ಪೂರ್ವದ ಅವಧಿಗಿಂತ ಇನ್ನೂ ಹೆಚ್ಚಾಗಿದೆ ಎಂದು ತೋರಿಸಿರುವಾಗಲೂ, ಈ ಬಜೆಟಿನಲ್ಲಿ ಒದಗಿಸಿರುವುದು ಕೇವಲ 60,000 ಕೋಟಿ ರೂ, ಹಿಂದಿನ ವರ್ಷದ ಪರಿಷ್ಕೃತ ಅಂದಾಜು ರೂ. 89,000 ಕೋಟಿಯಲ್ಲೂ 33% ಕಡಿತವಾಗಿದೆ., ಈ ಮಹತ್ವದ ಯೋಜನೆಗೆ ಅಸಮರ್ಪಕ ಹಂಚಿಕೆಯಿಂದಾಗಿ ಕೂಲಿ ಪಾವತಿಯ ವಿಳಂಬಗಳು ಲಭ್ಯವಿರುವ ಕೆಲಸದ ದಿನಗಳನ್ನು ಮತ್ತಷ್ಟು ಕುಂಠಿತಗೊಳಿಸಿರುವ ವರದಿಗಳು ಬಹಳಷ್ಟು ಬಂದಿವೆ. ಆದರೂಈ ವರ್ಷದ ಬಜೆಟ್ ನಲ್ಲಿನ ಈ ಕಡಿತ ದೇಶದ ಗ್ರಾಮೀಣ ಬಡವರ ಬಗ್ಗೆ ಸರ್ಕಾರದ ನಿರಾಸಕ್ತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಎಐಕೆಎಸ್ ಟೀಕಿಸದೆ.

ಆತ್ಮನಿರ್ಭರ್ ಭಾರತ್ ರೋಜ್‌ಗಾರ್ ಯೋಜನೆಗೆ ಸಹ ರೂ.5758 ಕೋಟಿಯಿಂದ ರೂ.2273 ಕೋಟಿಗೆ ಹಂಚಿಕೆಯನ್ನು ಕಡಿತಗೊಳಿಸಲಾಗಿದೆ. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವ ಎಲ್ಲಾ ಮಾತು ಮರೆತೇ ಹೋದಂತಿದೆ. 2022–23 ಪರಿಷ್ಕೃತ ಅಂದಾಜುಗಳಲ್ಲಿ ರೂ.1500 ಕೋಟಿಗಳಷ್ಟಿದ್ದ ಮಾರುಕಟ್ಟೆ ಮಧ್ಯಸ್ಥಿಕೆ ಮತ್ತು ಬೆಲೆ ಬೆಂಬಲ ಯೋಜನೆಗೆ ಹಂಚಿಕೆ 2023–24ರ ಬಜೆಟ್‌ನಲ್ಲಿ ಯಾವುದೇ ಉಲ್ಲೇಖವನ್ನು ಕಂಡಿಲ್ಲ..

ಆಹಾರ ಸಬ್ಸಿಡಿಯಲ್ಲಿ ಅತಿದೊಡ್ಡ ಕುಸಿತ ಕಂಡುಬಂದಿದೆ, 2022–23 ರ ಪರಿಷ್ಕೃತ ಅಂದಾಜು ರೂ.287194 ಕೋಟಿಗಳಿಂದ ರೂ.1,97,350 ಕೋಟಿಗಳಿಗೆ, ಅಂದರೆ 31 ಪ್ರತಿಶತದಷ್ಟು ಇಳಿಕೆಯಾಗಿದೆ. ಆಹಾರ ಭದ್ರತೆ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ **......ಪುಟ 11 ನೋಡಿ**



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಫೇಸ್‌ಬುಕ್

ಸಿಪಿಐ(ಎಂ) ಪೊಲಿಟ್‌ಬ್ಯುರೊ.... ಪುಟ 8 ರಿಂದ

1. ಉದ್ಯೋಗ ಸೃಷ್ಟಿಸುವ ಯೋಜನೆಗಳಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಗಣನೀಯವಾಗಿ ಹೆಚ್ಚಿಸುವುದು.
2. ಹೆಚ್ಚಿನ ಕೂಲಿಯೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಾಗಿ ಹಂಚಿಕೆಯನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸುವುದು
3. 5 ಕೆಜಿ ಉಚಿತ ಆಹಾರ ಧಾನ್ಯಗಳ ಜೊತೆಗೆ 5 ಕೆಜಿ ಸಬ್ಸಿಡಿ ಆಹಾರ ಧಾನ್ಯಗಳನ್ನು ಮತ್ತೆಒದಗಿಸುವುದು.
4. ಸಂಪತ್ತು ಮತ್ತು ಪಿತ್ರಾರ್ಜಿತ ತೆರಿಗೆಯನ್ನು ವಿಧಿಸುವುದು.
5. ಆಹಾರ ಮತ್ತು ಔಷಧಗಳು ಸೇರಿದಂತೆ ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿಯನ್ನು ಹಿಂಪಡೆಯುವುದು.

ಈ ಬಜೆಟ್‌ನ ಜನವಿರೋಧಿ ಮತ್ತು ಅರ್ಥವ್ಯವಸ್ಥೆಯನ್ನು ಕುಗ್ಗಿಸುವ ಅಂಶಗಳ ವಿರುದ್ಧ ಮತ್ತು ಮೇಲಿನ ಬೇಡಿಕೆಗಳ ಅನುಷ್ಠಾನಕ್ಕೆ ಆಗ್ರಹಿಸಿ ಸಿಪಿಐ(ಎಂ) ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗಳನ್ನು ಫೆಬ್ರುವರಿ 22 ರಿಂದ 28 ರ ವರೆಗೆ ಸಂಘಟಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಜನರ ಜೀವನೋಪಾಯಗಳನ್ನು ಕಾಪಾಡಬೇಕೆಂಬ ಕಾಳಜಿ ಹೊಂದಿರುವ ಎಲ್ಲಾ ವಿಭಾಗಗಳ ಜನರು ಪ್ರತಿಭಟಿಸಿ ಎದ್ದು ನಿಲ್ಲಬೇಕು ಎಂದು ಕರೆ ನೀಡಿದೆ.

ಸಿಐಟಿಯು........ ಪುಟ 10 ರಿಂದ

ನೇತೃತ್ವದ ಬಿಜೆಪಿ ಸರ್ಕಾರವು ಯಾವುದೇ ಪಾಠಗಳನ್ನು ಕಲಿತಿಲ್ಲ ಎಂದು ಬಜೆಟ್ ಸ್ಪಷ್ಟವಾಗಿ ತೋರಿಸುತ್ತದೆ.

ಮೋದಿ ಸರಕಾರದ ಬಡವರ–ವಿರೋಧಿ, ಅಲ್ಪಸಂಖ್ಯಾತ–ವಿರೋಧಿ, ಮಹಿಳಾ ವಿರೋಧಿ, ದಲಿತ ಮತ್ತು ಬುಡಕಟ್ಟು ವಿರೋಧಿ ಧೋರಣೆಯು ಬಜೆಟ್‌ನಲ್ಲಿ ಸ್ಪಷ್ಟವಾದ ಅಭಿವ್ಯಕ್ತಿ ಪಡೆದಿದೆ. ಅದರ ಮಾಮೂಲಿಯಾದ ಮೋಸಗೊಳಿಸುವ ತಂತ್ರಗಳು ಈ ಬಜೆಟ್‌ನಲ್ಲೂ ಸ್ಪಷ್ಟವಾಗಿ ಗೋಚರಿಸುತ್ತವೆ.

9 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ವೆಚ್ಚ ಈ ಬಜೆಟಿನ ವಿಶೇಷತೆ ಎಂದು ತುತ್ತೂರಿ ಊದಲಾಗುತ್ತಿದೆ. ಆದರೆ ಇದಕ್ಕೆ ಹಣ ನೀಡುವುದು ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಮೂಲಕ ಹೆಚ್ಚು ಆದಾಯವನ್ನು ಗಳಿಸುವ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಉಡುಗೊರೆಯಾಗಿ ನೀಡುವ ಮೂಲಕ. ಇದು ಮುಂದಿನ 30–35 ವರ್ಷಗಳ ಕಾಲ ಸರ್ಕಾರದ ಆದಾಯ ಸಂಗ್ರಹದ ಸಾಮರ್ಥ್ಯವನ್ನು ಖಾಸಗಿ ಕಂಪನಿಗಳಿಗೆ, ಹೆಚ್ಚಾಗಿ ಅದರ ಬಂಟರಿಗೆ ವಹಿಸಿಕೊಡುವುದಲ್ಲದೆ ಬೇರೇನೂ ಅಲ್ಲ ಎಂದಿರುವ ಸಿಐಟಿಯು ಈ ಬಜೆಟ್ ಸಾರ್ವಜನಿಕ ವಲಯದ ಘಟಕಗಳಲ್ಲಿ ಹೂಡಿಕೆಯನ್ನು 11% ರಷ್ಟು ಕಡಿಮೆ ಮಾಡಿದೆ ಎಂಬ ಅಂಶದತ್ತ ಗಮನ ಸೆಳೆದಿದೆ.

ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿ, ಎಂಎಸ್‌ಎಂಇಗಳಿಗೆ ಬೆಂಬಲ ಏನೂ ಇಲ್ಲ. ಸಾಮಾನ್ಯ ಜನರಿಗೆ ಜಿಎಸ್‌ಟಿಯಲ್ಲಿ ಯಾವುದೇ ಪರಿಹಾರ ನೀಡುವುದಿಲ್ಲ.

ಎಐಕೆಎಸ್........ ಪುಟ 10 ರಿಂದ

ಮೇಲಿನ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶ ಸಾಂಕ್ರಾಮಿಕ ಸಮಯದ ಹೆಚ್ಚುವರಿ ಆಹಾರಧಾನ್ಯ ಯೋಜನೆಯನ್ನು ಬದಲಿಸಿದಾಗ ಸ್ಪಷ್ಟವಾಗಿ ಕಂಡು ಬಂದಿತ್ತು. ಆಹಾರ ಸಬ್ಸಿಡಿಯಲ್ಲಿ ಇಳಿಕೆ ಆಹಾರ ರ ರೈತರಿಂದ ಧಾನ್ಯಗಳ ಸಂಗ್ರಹಣೆಯ ಮೇಲೂ ನೇರ ಪರಿಣಾಮಗಳನ್ನು ಬೀರುತ್ತದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿ ಆಹಾರಧಾನ್ಯಗಳಿಗೆ ವಿಕೇಂದ್ರೀಕೃತ ಸಂಗ್ರಹಣೆಗಾಗಿ ಬಜೆಟ್ ಹಂಚಿಕೆಯಲ್ಲಿ ಶೇಕಡಾ 17 ರಷ್ಟು ಕಡಿತವಾಗಿದೆ. ಭಾರತೀಯ ಆಹಾರ ನಿಗಮಕ್ಕೆ ಆಹಾರ ಸಬ್ಸಿಡಿ ಹಂಚಿಕೆಯನ್ನು ರೂ.1,45,920 ಕೋಟಿ ಯಿಂದ ರೂ.1,37,207 ಕೋಟಿಗೆ ಕಡಿತ ಮಾಡಲಾಗಿದೆ. ರೂ.8,713 ಕೋಟಿ ಕಡಿತ. ಈ ಕ್ರಮಗಳು ರೈತರ ಆದಾಯದ ದೃಷ್ಟಿಯಿಂದ ಮಾತ್ರವಲ್ಲದೆ ಹಣದುಬ್ಬರದ ಪ್ರವೃತ್ತಿಯ ದೃಷ್ಟಿಯಿಂದಲೂ ಕಳವಳಕ್ಕೆ ಕಾರಣವಾಗಿದೆ. ಇದನ್ನು ಗಮನಕ್ಕೆ ತಗೊಳ್ಳದಿರಲು ಸಾಧ್ಯವಿಲ್ಲ ಎಂದು ಎಐಕೆಎಸ್ ವಿಶ್ಲೇಷಿಸಿದೆ.

ಸಹಕಾರಿಗಳನ್ನು ಕೇಂದ್ರೀಕರಿಸುವ ಮತ್ತು ಕೇಂದ್ರ ಸರ್ಕಾರದಿಂದ ನಿಯಂತ್ರಣಕ್ಕೆ ತರುವ ಪ್ರಯತ್ನದ ವಾಸನೆಯೂ ಈ ಬಜೆಟಿನಲ್ಲಿದೆ. ಇದು ಒಕ್ಕೂಟ ವ್ಯವಸ್ಥೆಯಡಿ ರಾಜ್ಯಗಳ ಹಕ್ಕುಗಳಿಗೆ ವಿರುದ್ಧವಾಗಿದೆಕೃಷಿ ವೇಗವರ್ಧಕ ನಿಧಿಯನ್ನು ರಚಿಸುವುದಾಗಿ ಹೇಳಲಾಗಿದೆ. ಈ ಮೊದಲು ಕೃಷಿ ಮೂಲಸೌಕರ್ಯ ನಿಧಿ ರಚಿಸುವುದಾಗಿ ಹೇಳಿ 2022–23ರಲ್ಲಿ 500 ಕೋಟಿಗಳನ್ನು ಹಂಚಿಕೆ ಮಾಡಲಾಗಿತ್ತು, ಆದರೆ ಪರಿಷ್ಕೃತ ಅಂದಾಜಿನಲ್ಲಿ ಅದನ್ನು ಕೇವಲ 150 ಕೋಟಿಗೆ ಇಳಿಸಲಾಯಿತು. ಕೃಷಿಗಾಗಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದ ಮಾತು ರೈತರಿಗಿಂತ ಹೆಚ್ಚಾಗಿ ಕಾರ್ಪೊರೇಟ್ ಕಂಪನಿಗಳಿಗೆ ಸಹಾಯ ಮಾಡುವ ಗುರಿಯನ್ನು ಹೊಂದಿದೆ.

ಅಲ್ಪಸಂಖ್ಯಾತರ ಅಭಿವೃದ್ಧಿಯ ಸರ್ವವ್ಯಾಪಿ ಕಾರ್ಯಕ್ರಮಕ್ಕೆ ಹಂಚಿಕೆಯನ್ನು ಕಳೆದ ವರ್ಷದ ರೂ.1810 ಕೋಟಿಗಳಿಂದ ರೂ. 610 ಕೋಟಿಗಳಿಗೆ, ಮೂರನೇ ಎರಡರಷ್ಟು ಕಡಿತಗೊಳಿಸುವ ಮೂಲಕ ಬಿಜೆಪಿ ಸರ್ಕಾರವು ತನ್ನ ಕೋಮುವಾದಿ ಗುಣವನ್ನು ಬಹಿರಂಗಪಡಿಸಿದೆ ಎಂದು ಎಐಕೆಎಸ್ ಹೇಳಿದೆ.

ಎಲ್ಲ ಗ್ರಾಮೀಣ ಬಡವರನ್ನು ನಿರ್ಲಕ್ಷಿಸಿರುವ ಈ ಬಜೆಟ್ ಜನರ ಬದುಕನ್ನು ಮತ್ತಷ್ಟು ಅನಿಶ್ಚಿತತೆಗೆ ತಳ್ಳಲಿದೆ–ಎಐಎಡಬ್ಲ್ಯುಯು

ಈ ಬಜೆಟ್ ನಿರುದ್ಯೋಗ ಮತ್ತು ಹಸಿವಿನ ದೊಡ್ಡ ಸಮಸ್ಯೆಯ ಬಗ್ಗೆ ಏನನ್ನೂ ಮಾಡಲು ವಿಫಲವಾಗಿದೆ. ಆದ್ದರಿಂದ ಇದು ಜನವಿರೋಧಿ ಎಂದು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ (ಎಐಎಡಬ್ಲ್ಯುಯು)ದ ಕೇಂದ್ರ ಕಾರ್ಯಕಾರಿ ಸಮಿತಿ ಖಂಡಿಸಿದೆ. ಮನರೇಗಕ್ಕೆ ಬಜೆಟ್‌ನಲ್ಲಿ 33% ಇಳಿಕೆಯಾಗಿರುವುದರಿಂದ ಈ ಬಜೆಟ್ ಗ್ರಾಮೀಣ ಜನರ ಜೀವನೋಪಾಯದ ಮೇಲೆ ಭೀಕರ ದಾಳಿಯಾಗಿದೆ. ಇದು ತನ್ನದೇ 'ಆರ್ಥಿಕ ಸಮೀಕ್ಷೆ'ಯನ್ನೂ ನಿರ್ಲಕ್ಷಿಸಿದೆ. ಇದರ ಅಡಿಯಲ್ಲಿ ಉದ್ಯೋಗಕ್ಕೆ ಬೇಡಿಕೆ ಸಾಂಕ್ರಾಮಿಕ ಪೂರ್ವದ ಅವಧಿಗಿಂತ ಇನ್ನೂ ಹೆಚ್ಚಾಗಿದೆ ಎಂದು ಗಮನಿಸಿದೆ. ಈ ಯೋಜನೆಯ ಅಡಿಯಲ್ಲಿ ಕೆಲಸದ ದಿನಗಳ ಲಭ್ಯತೆಯು ಕೇವಲ 42 ದಿನಗಳು, ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದೆ. ಸಾಮಾನ್ಯವಾಗಿ ಈ ಯೋಜನೆಗೆ ಕೊಡುವ ಹಣದಲ್ಲಿ 20% ಕ್ಕಿಂತ ಹೆಚ್ಚು ಹಿಂದಿನ ವರ್ಷಗಳ ಬಾಕಿಗಳನ್ನು ತೆರವುಗೊಳಿಸಲು ಹೋಗುತ್ತದೆ. ಒಂದು ಅಂದಾಜಿನ ಪ್ರಕಾರ ಕಾನೂನು ಪ್ರಕಾರ 100 ದಿನಗಳ ಕೆಲಸ ಒದಗಿಸಲು ಕನಿಷ್ಠ ಬಜೆಟ್ ರೂ. 2.72 ಲಕ್ಷ ಕೋಟಿ ಇರಬೇಕು. ಒಟ್ಟಾರೆಯಾಗಿ ಗ್ರಾಮೀಣ ಭಾರತದಲ್ಲಿ ನಿರುದ್ಯೋಗ ದರ ಹೆಚ್ಚಿದೆ ಎಂಬ ಬುಡಮಟ್ಟದ ವಾಸ್ತವತೆಯನ್ನು ಒಪ್ಪಿಕೊಳ್ಳಲು ಸರ್ಕಾರ ನಿರಾಕರಿಸುತ್ತಿರುವುದರಿಂದ ಗ್ರಾಮೀಣ ಉದ್ಯೋಗಕ್ಕೆ ಕಳೆದ ವರ್ಷಕ್ಕಿಂತ ಯಾವುದೇ ಹೆಚ್ಚಳ ಕಂಡುಬಂದಿಲ್ಲ ಎಂದು ಎಐಎಡಬ್ಲ್ಯುಯು ಹೇಳಿದೆ.

ಅಲ್ಲದೆ 2022 ರ ವೇಳೆಗೆ ಎಲ್ಲರಿಗೂ ಮನೆ ನೀಡಲು ಸರ್ಕಾರ ವಿಫಲವಾಗಿದೆ ಆದರೆ ಅದರ ಪ್ರಚಾರಕ್ಕಾಗಿ ಕೋಟಿಗಳನ್ನು ಖರ್ಚು ಮಾಡಿದೆ. ಎಲ್ಲಾ ಗ್ರಾಮೀಣ ಬಡವರನ್ನು ಈ ಬಜೆಟ್‌ನಲ್ಲಿ ನಿರ್ಲಕ್ಷಿಸಲಾಗಿದೆ.

ಚುನಾವಣೆ ವರ್ಷವಾಗಿದ್ದರೂ ಈ ಬಜೆಟ್‌ನಲ್ಲಿ ಜನರ ಮೂಲಭೂತ ಸೌಕರ್ಯಗಳನ್ನು ಈಡೇರಿಸಿಲ್ಲ. ಮುಂದುವರಿದ ಆರ್ಥಿಕ ಬಿಕ್ಕಟ್ಟುಗಳು ಒಟ್ಟಾರೆಯಾಗಿ ಭಾರತದ ಜನರ ಬಜೆಟ್ ಮೇಲೆ ದೊಡ್ಡ ಪರಿಣಾಮ ಬೀರುತ್ತವೆ ಎಂದು ತೋರುತ್ತದೆ, ಆದರೆ ಕೇಂದ್ರ ಸರ್ಕಾರವು ತನ್ನ ಶ್ರೀಮಂತ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಮುಂದುವರೆಸಿದೆ. ಈ ಬಜೆಟ್ ಜನರ ಬದುಕನ್ನು ಮತ್ತಷ್ಟು ಅನಿಶ್ಚಿತತೆಗೆ ತಳ್ಳಲಿದೆ ಎಂದಿರುವ ಎಐಎಡಬ್ಲ್ಯುಯು ತನ್ನ ಘಟಕಗಳಿಗೆ ಈ ಜನವಿರೋಧಿ ಮತ್ತು ಕಾರ್ಪೊರೇಟ್ ಪರವಾದ ಬಜೆಟ್‌ನ ವಿರುದ್ಧ ಪ್ರತಿಭಟನೆಗಳನ್ನು ಆಯೋಜಿಸಲು ಎಲ್ಲಾ ಹಂತಗಳಲ್ಲಿ, ವಿಶೇಷವಾಗಿ ಗ್ರಾಮ ಪಂಚಾಯತ್‌ಗಳು, ಪ್ರದೇಶಗಳು, ತಹಸಿಲ್‌ಗಳು ಮತ್ತು ಜಿಲ್ಲೆಗಳಲ್ಲಿ ಜನರನ್ನು ತಲುಪಲು ಕರೆ ನೀಡಿದೆ.

ದೇಶದ ಮಹಿಳೆಯರನ್ನು ವಂಚಿಸಿರುವ ಬಜೆಟ್–ಎಐಡಿಡಬ್ಲ್ಯುಎ

ಈ ಬಜೆಟ್ ಮಹಿಳೆಯರು ಮತ್ತು ಅವರ ಕುಟುಂಬಗಳ ಖರ್ಚಿನಲ್ಲಿ ದೊಡ್ಡ ಕಾರ್ಪೊರೇಟ್‌ಗಳಿಗೆ ಸಬ್ಸಿಡಿಗಳನ್ನು ಒದಗಿಸುವ ಒಂದು ಕಸರತ್ತಾಗಿ ಕಾಣುತ್ತದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಹೇಳಿದೆ. ಪ್ರಧಾನಮಂತ್ರಿ ಮತ್ತು ಹಣಕಾಸು ಸಚಿವರು ಈ ಬಜೆಟ್ ಮಹಿಳಾ ಪರ ಬಜೆಟ್ ಎಂದು ಸಾರುತ್ತಿದ್ದಾರೆ, ಆದರೆ ಅಂಕಿಅಂಶಗಳು ಸಂಪೂರ್ಣವಾಗಿ ವಿಭಿನ್ನವಾದ ಕಥೆಯನ್ನು ಹೇಳುತ್ತವೆ. ಲಿಂಗ ಬಜೆಟ್‌ನ ಒಟ್ಟು ಪ್ರಮಾಣವು ಜಿಡಿಪಿಯ 0.71 ಶೇ. ದಿಂದ 0.73 ಶೇ. ಹೆಚ್ಚಿದೆ. ಆದರೆ ಹಣದುಬ್ಬರವನ್ನು ಗಮನೆಗೆ ತಗೊಂಡರೆ ನೈಜ ಮೌಲ್ಯವು 3%ದಷ್ಟು ಇಳಿಕೆಯನ್ನೇ ತೋರಿಸುತ್ತದೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ಸಂಬಂಧಿಸಿದಂತೆ, ಅದರ ಒಟ್ಟು ವೆಚ್ಚವು ಸಂಪೂರ್ಣ ವೆಚ್ಚದ ಬಜೆಟ್ ವೆಚ್ಚದ ಶೇಕಡಾ 0.05 ರಷ್ಟಿದೆ. ಇದರಲ್ಲಿ 80 ಶೇ. ಸಕ್ಷಮ್ ಅಂಗನವಾಡಿ ಪೋಶನ್ 2.0 ಯೋಜನೆಗೆ ಹೋಗುತ್ತದೆ. ಸುರಕ್ಷತಾ ಸಮಸ್ಯೆಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯವನ್ನು ಪರಿಹರಿಸುವ ಯೋಜನೆಗಳಿಗೆಬಜೆಟ್ ಹೆಚ್ಚಳ ಬಹಳ ಕಡಿಮೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಕ್ರೀಡಾಪಟುಗಳ ಸುರಕ್ಷತೆ ಬಹಳ ಆತಂಕದ ವಿಷಯವಾಗುತ್ತಿದೆ. ಆದರೆ ಈ ಬಜೆಟಿನಲ್ಲಿ ಮಹಿಳಾ ಕ್ರೀಡಾಪಟುಗಳಿಗೆಂದು ಏನೂ ಕೊಟ್ಟಿಲ್ಲ.

ಬಜೆಟ್‌ನ ಮುಖ್ಯ ಒತ್ತು ಮಹಿಳೆಯರ ಉಳಿತಾಯವನ್ನು ಕ್ರೋಡೀಕರಿಸುವುದು ಮತ್ತು ಕಾರ್ಪೊರೇಟ್ ಪೂರೈಕೆ ಸರಪಳಿಗಳೊಂದಿಗೆ ಅದನ್ನು ಜೋಡಿಸುವುದೇ ಆಗಿದೆ. ದೀನ್ ದಯಾಳ್ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ 81 ಲಕ್ಷ ಉಳಿತಾಯ ಗುಂಪುಗಳನ್ನು ಹೊಂದಿದ್ದು, ಅದನ್ನು ಉನ್ನತೀಕರಿಸಿ ದೊಡ್ಡ ಉದ್ಯಮಗಳನ್ನಾಗಿ ಮಾಡಲಾಗುವುದು ಎಂದು ಹಣಕಾಸು ಸಚಿವರು ಹೇಳಿದರು. ಆದರೆ ಅವರಿಗೆ ಒದಗಿಸಲಾಗುವ ಸಾಲ ಹೆಚ್ಚಾಗಿ ಖಾಸಗಿಯವರ ಮೂಲಕವೇ. ಮಹಿಳೆಯರಿಗೆ ಕಡಿಮೆ ಬಡ್ಡಿಯ ಸಾಲ ನೀಡಿಕೆಯ ಬಗ್ಗೆ ಬಜೆಟ್ ಏನೂ ಹೇಳಿಲ್ಲ. ಮಹಿಳೆಯರಿಗಾಗಿ ಘೋಷಿಸಲಾದ ಹೊಸ ಉಳಿತಾಯ ಯೋಜನೆ, ಮಹಿಳಾ ಸಮ್ಮಾನ್ ಉಳಿತಾಯ ಪತ್ರ, ಉಳಿಸಲು ಶಕ್ತರಾಗಿರುವ ಬೆರಳೆಣಿಕೆಯಷ್ಟು ಮಹಿಳೆಯರಿಗೆ ಮಾತ್ರ ಅನ್ವಯಿಸುತ್ತದೆ. ಹೀಗಾಗಿ, ಸರ್ಕಾರ ಘೋಷಿಸಿದ ಆರ್ಥಿಕ ಯೋಜನೆಗಳು ಮಹಿಳೆಯರ ಹೆಚ್ಚುತ್ತಿರುವ ಸಾಲದ ಸಮಸ್ಯೆಯನ್ನು ಪರಿಹರಿಸಲು ಏನೇನೂ ಸಹಾಯ ಮಾಡುವುದಿಲ್ಲ ಎಂದು ಎಐಡಿಡಬ್ಲ್ಯುಎ ಟೀಕಿಸಿದೆ. ಈ ಸಾಲದ ಬಲೆಗೆ ಮೂಲ ಕಾರಣವೆಂದರೆ, ಜೀವನೋಪಾಯದ ಕೊರತೆ ಮತ್ತು ಎಂಎಫ್‌ಐಗಳು ಮತ್ತು ಖಾಸಗಿ ಸಣ್ಣ ಹಣಕಾಸು ಬ್ಯಾಂಕುಗಳು ವಿಧಿಸುವ ಹೆಚ್ಚಿನ ಬಡ್ಡಿ ದರಗಳು. ಇದು ಮಹಿಳೆಯರ ಉಳಿತಾಯವನ್ನು ಖಾಸಗಿ ಸಾಲ ನೀಡುವ ಏಜೆನ್ಸಿಗಳ ತೆಕ್ಕೆಗೆ ಹಾಕುತ್ತದೆ ಎಂದು ಅದು ಹೇಳಿದೆ.

ಮನರೇಗಕ್ಕೆ 33% ಕಡಿತ ಮಹಿಳಾ–ಆಧಾರಿತ ಯೋಜನೆಗಳ ಮೇಲೆ ನೇರ ದಾಳಿಯಾಗಿದೆ. ನಿರೀಕ್ಷೆಯಂತೆ, ಸ್ಕೀಮ್ ವರ್ಕರ್‌ಗಳ ಹಕ್ಕುಗಳನ್ನು ಗುರುತಿಸುವ ಅಥವಾ ಅವರ ಸಂಭಾವನೆಯನ್ನು ಹೆಚ್ಚಿಸುವ ಯಾವುದೇ ಪ್ರಕಟಣೆ ಇಲ್ಲ. ರಾಷ್ಟ್ರೀಯ ಸಹಾಯ ಕಾರ್ಯಕ್ರಮದ ಅಡಿಯಲ್ಲಿ (ವಿಧವಾ ಪಿಂಚಣಿ ಸೇರಿದಂತೆ) ಹಂಚಿಕೆಗಳು ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ಯೋಜನೆಗಳು ಯಾವುದೇ ಗಣನೀಯ ಹೆಚ್ಚಳವನ್ನು ಕಂಡಿಲ್ಲ.

ಶೈಕ್ಷಣಿಕ ವೆಚ್ಚದಲ್ಲಿನ ಅತ್ಯಂತ ಕಳವಳಕಾರಿ ಪ್ರವೃತ್ತಿಯು ಡಿಜಿಟಲ್ ಶಿಕ್ಷಣಕ್ಕೆ ಒತ್ತು ನೀಡುವುದು, ರಾಜೀವ್ ಗಾಂಧಿ ಮತ್ತು ಮೌಲಾನಾ ಆಜಾದ್ ಫೆಲೋಶಿಪ್‌ಗಳನ್ನು ಮರುಸ್ಥಾಪಿಸದೇ ಇರುವುದು ಮತ್ತು ಶಿಕ್ಷಣಕ್ಕೆ ಹಣಕಾಸಿನ ಮಾದರಿಯಾಗಿ ವಿದ್ಯಾರ್ಥಿ ಸಾಲಗಳಿಗೆ ಒತ್ತು ನೀಡುವುದು. ಇವೆಲ್ಲವೂ ಮಹಿಳಾ/ಬಾಲಕಿಯರ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ ಎಂದಿರುವ ಎಐಡಿಡಬ್ಲ್ಯುಎ ಜನವಾದಿ ಮಹಿಳಾ ಸಂಘಟನೆಯ ಘಟಕಗಳು ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಪ್ರತಿಭಟನೆಗಳನ್ನು ನಡೆಸಿ **'ಒಳಗೊಳ್ಳುವ ಬಜೆಟ್' ಹೆಸರಿನಲ್ಲಿ ಈ ಸರಕಾರ ಮಾಡುತ್ತಿರುವ ವಂಚನೆಯನ್ನು ಬಯಲಿಗೆಳೆಯಬೇಕು ಮತ್ತು 2024 ರಲ್ಲಿ ಈ ಕ್ರೂರ ಮತ್ತು ಕಾರ್ಪೊರೇಟ್ ಪರವಾದ ಸರ್ಕಾರದ ಸೋಲಿಗೆ ಕೆಲಸ ಮಾಡಬೇಕು ಎಂದು ಕರೆ ನೀಡಿದೆ.**

ಆದಿವಾಸಿ ಸ್ಕೀಮ್‌ಗಳಿಗೆ ಇದು ಅಮೃತ ಕಾಲವಲ್ಲ, ಲೂಟಿಕಾಲ–ಎಎಆರ್‌ಎಂ

ಬಜೆಟಿನ ಹಿಂದಿನ 'ಬುಡಕಟ್ಟು ವಿಶೇಷ ಯೋಜನೆ'(ಟಿಎಸ್‌ಪಿ) ಯನ್ನು ಈಗ ಬುಡಕಟ್ಟು ವಿಶೇಷ ಯೋಜನೆ (ಟಿಎಸ್‌ಎಸ್) ಮಟ್ಟಕ್ಕೆ ಇಳಿಸಲಾಗಿದೆ. ಇದರ ಅಧಿಕೃತ ಮಾರ್ಗಸೂತ್ರಗಳ ಪ್ರಕಾರ ಬಜೆಟಿನ ಒಟ್ಟು ನೀಡಿಕೆಗಳಲ್ಲಿ ಬುಡಕಟ್ಟು ಸಮುದಾಯಗಳಿಗೆ ಅವುಗಳ ಒಟ್ಟು ಜನಸಂಖ್ಯೆಯ ಅನುಪಾತದಲ್ಲಿ ಟಿಎಸ್‌ಎಸ್ ನಡಿ ಹಣ ನೀಡಿಕೆಗಳಿರಬೇಕು. 2011ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆಯಲ್ಲಿ ಬುಡಕಟ್ಟು ಸಮುದಾಯಗಳ ಜನಸಂಖ್ಯಾ ಪ್ರಮಾಣ 8.6%. ಆದರೆ ಈ ಬಾರಿಯ ಬಜೆಟಿನ ಅನೆಕ್ಸರ್ 10ಬಿ ಯ ಪ್ರಕಾರ ಪರಿಶಿಷ್ಟ ಬುಡಕಟ್ಟುಗಳಿಗೆ ಒಟ್ಟು ಹಣನೀಡಿಕೆಗಳು ಒಟ್ಟು ಬಜೆಟಿನ 2.7%. ಮಾತ್ರ.

ಇನ್ನೂ ಆಘಾತಕಾರಿ ಸಂಗತಿಯೆಂದರೆ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗೆಂದು ಕೊಡುವ ಈ ಅಸಮರ್ಪಕ ಹಣವನ್ನೂ ಕೂಡ ಆದಿವಾಸಿಗಳಿಗಾಗಿ ಬಳಸುವುದಿಲ್ಲ, ಸರಕಾರದ ಸಾಮಾನ್ಯ ಪ್ರಾಜೆಕ್ಟುಗಳಿಗೆ ಬಳಸಲಾಗುತ್ತಿದೆ. ಉದಾ: ಬುಡಕಟ್ಟು ಅಭಿವೃದ್ಧಿಗೆಂದು ಈ ಬಜೆಟಿನಲ್ಲಿ ನೀಡಿರುವ ಹಣದಲ್ಲಿ ದೊಡ್ಡ ಭಾಗ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದಲ್ಲಿದೆ. ಅದನ್ನು 6395 ಕೋಟಿರೂ. ನಿಂದ 23,375ಕೋಟಿ ರೂ.ಗೆ ಭಾರೀ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಇವೆಲ್ಲ ನಾಲ್ಕು ಪಥದ ರಸ್ತೆಗಳು ಬುಡಕಟ್ಟು ಜನಗಳಿಗಾಗಿಯೋ ಅಥವ ಬುಡಕಟ್ಟು ಪ್ರದೇಶಗಳಿಂದ ಖನಿಜಗಳ ಸಾಗಾಣಿಕೆಗಗಿಯೋ ಎಂದು ಆದಿವಾಸಿ ಅಧಿಕಾರ್ ಮಂಚ್ (ಎಎಆರ್‌ಎಂ) ಪ್ರಶ್ನಿಸಿದೆ. ಆದ್ದರಿಂದಲೇ ಅದು ಈ ಬಜೆಟ್ ಆದಿವಾಸಿಗಳಿಗೆ ಅಮೃತ ಕಾಲವನ್ನು ಸೂಚಿಸುವುದಿಲ್ಲ, ಬದಲಿಗೆ ಲೂಟಿಕಾಲವನ್ನು ಸೂಚಿಸುತ್ತದೆ ಎಂದಿದೆ. ವಾಸ್ತವವಾಗಿ ಇದು ಬುಡಕಟ್ಟು ಜನಗಳ ಕಲ್ಯಾಣಕ್ಕೆ ಅಗತ್ಯವಾದ ಹಣದಲ್ಲಿ ಕಡಿತ ಮಾಡಿದೆ ಎಂದು ಅದು ಹೇಳಿದೆ.

ವಸಾಹತುಶಾಹಿ ಆಳರಸರ ವಿರುದ್ಧ ಸೆಟೆದು ನಿಂತ ವೀರ ಕ್ರಾಂತಿಕಾರಿಗಳು.....

ಪುಟ 2 ರಿಂದ

ಪ್ರತಿ ಗಾಯದಿಂದ ರಕ್ತ ಒಸರುತ್ತಲೇ ಇತ್ತು, ಆದರೆ ಪ್ರೇಮಾನಂದ ಒಂದೂ ಮಾತನಾಡಲಿಲ್ಲ ಅಥವಾ ಅಳುಕಲಿಲ್ಲ.

ಭಾತ್ರಾ ಸಿಂಗ್

ಬಂಧನಕ್ಕೆ ಒಳಗಾಗುವ ಮೊದಲು ಭಾತ್ರಾ ಸಿಂಗ್ ಲಾಯಲ್‌ಪುರದ (ಈಗ ಪಾಕಿಸ್ತಾನದಲ್ಲಿದೆ)



ಖಾಲ್ಸಾ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಅವರ ಕುರಿತು ಸವಿಸ್ತಾರವಾಗಿ ಬರೀಂದ್ರ ಘೋಷ್ ತಮ್ಮ ವೃತ್ತಾಂತದಲ್ಲಿ ಬರೆಯುತ್ತಾರೆ: ಅವರನ್ನುಆರಂಭದಲ್ಲೇ ಒಂದು ಗೂಡಿನಲ್ಲಿ (ಸೆಲ್‌ನಲ್ಲಿ) ಕೂಡಿಹಾಕುತ್ತಾರೆ, ಏಕೆಂದರೆ ಅವರು ಮುಷ್ಕರ ನಡೆಯುತ್ತಿದ್ದಾಗ ಸೂಪರಿಂಟೆಂಡೆಂಟ್ ಮೇಲೆ ದಾಳಿ ಮಾಡುತ್ತಾರೆ. ಅದಕ್ಕಾಗಿ ವಾರ್ಡರುಗಳು ಅವರನ್ನು ಮನಸೋಇಚ್ಛೆ ಜ್ಞಾನ ತಪ್ಪುವಂತೆ ಹೊಡೆಯುತ್ತಾರೆ. ಆ ಹೊತ್ತಿನಿಂದ ಅವರನ್ನು ಒಂದು ಗೂಡಿನಲ್ಲಿಡುತ್ತಾರೆ ಮತ್ತು ಎರಡು ವರ್ಷಗಳಿಗೂ ಹೆಚ್ಚು ಕಾಲ ಹೊರಗಡೆ ಬಿಡುವುದಿಲ್ಲ. ಅವರಿಗಾಗಿಯೇ ವರಾಂಡಾದ ಒಂದು ಮೂಲೆಯಲ್ಲಿ ತಂತಿ ಬಲೆಗಳಿಂದ ಒಂದು ಬೋನನ್ನು ಸಿದ್ಧಪಡಿಸುತ್ತಾರೆ. ಅಲ್ಲೇ ತಿನ್ನಬೇಕು, ಅಲ್ಲೇ ಮಲಮೂತ್ರಗಳನ್ನು ಮಾಡಬೇಕು ಮತ್ತು ಅಲ್ಲಿಯೇ ಮಲಗಬೇಕು. ಅದರ ಪರಿಣಾಮವಾಗಿ ಅವರ ಆರೋಗ್ಯ ಹಾಳಾಯಿತು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ, ಅವರು ಬಹುಮಟ್ಟಿಗೆ ಜೀವವಿಲ್ಲದಂತಾದರು. ಅದೇ ರೀತಿಯಲ್ಲಿ, ಮತ್ತೊಬ್ಬ ಸಿಖ್, ಅಮರ್ ಸಿಂಗ್ ಅವರೂ ಅದೇ ಗತಿಯಲ್ಲಿ ನರಳಬೇಕಾಯಿತು.

ಪುಲಿನ್‌ಬಿಹಾರಿ ದಾಸ್



ಡಾಕಾ ಪಿತೂರಿ ಪ್ರಕರಣದಲ್ಲಿನ ಅವರ ಪಾತ್ರದ ಕಾರಣ ಏಳು ವರ್ಷಗಳ ಶಿಕ್ಷೆಗಾಗಿ ಪುಲಿನ್ ಬಿಹಾರಿ ದಾಸ್ ಅವರನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಬಂಧಿಸುತ್ತಾರೆ. ಗೌರ್ನರ್ ಜನರಲ್ ಕೌನ್ಸಿಲ್‌ನ ಗೃಹ ಸದಸ್ಯ ಸರ್ ರೆಜಿನಾಲ್ಡ್ ಕ್ರಡೊಕ್ ಅವರು ಅಂಡಮಾನ್ ಜೈಲಿಗೆ ಭೇಟಿ ನೀಡಿದಾಗ ಇಬ್ಬರು ಹಿರಿಯ ಕ್ರಾಂತಿಕಾರಿಗಳು – ವಿಡಿ ಸಾವರ್ಕರ್ ಮತ್ತು ಬರೀಂದ್ರ ಕುಮಾರ್ ಘೋಷ್ – ಕ್ಷಮಾದಾನಕ್ಕಾಗಿ ಗೋಗರೆಯುವುದನ್ನು ನಾವು ನೋಡಿದ್ದೇವೆ. ಆದರೆ, ಜೈಲಿಗೆ ಭೇಟಿ ನೀಡಿದ ಬಗ್ಗೆ ತನ್ನ ಟಿಪ್ಪಣಿಯಲ್ಲಿ ಕ್ರಡೊಕ್ ಅವರು ಹೀಗೆ ಬರೆದಿದ್ದರು: "ಡಾಕ್ಕಾ ತಂಡದ ಮುಖಂಡ ಪುಲಿನ್ ಬಿಹಾರಿ ಒಂದು ಮಾತನ್ನೂ ಆಡಲಿಲ್ಲ." ಭಾರತದ ಪ್ರಧಾನ ಭೂಭಾಗಕ್ಕೆ ಬಹುತೇಕ ಕ್ರಾಂತಿಕಾರಿ ಖೈದಿಗಳನ್ನು ಸ್ಥಳಾಂತರಿಸಬೇಕು ಎಂದು ಜನವರಿ 6, 1914 ರಂದು ತೀರ್ಮಾನ ಮಾಡಿದಾಗ, ಬರೆದ ತಮ್ಮ ಆದೇಶದಲ್ಲಿ "ಪುಲಿನ್‌ಬಿಹಾರಿಯೊಬ್ಬನನ್ನೇ ಅಂಡಮಾನಿನಲ್ಲಿ ಇರಿಸಬೇಕೆಂದು" ಆದೇಶಿಸಿದ್ದರು.

ಜನರ ಜೀವನೋಪಾಯದ ಮೇಲೆ ನಿರಂತರ ದಾಳಿಗಳ ವಿರುದ್ಧ............

ಪುಟ 4 ರಿಂದ

ಸಾಂವಿಧಾನಿಕ ನಿಲುವನ್ನು ನಿರ್ಲಜ್ಜವಾಗಿ ಉಲ್ಲಂಘಿಸಿ ಆಳುವ ಪಕ್ಷದ ರಾಜಕೀಯ ಉದ್ದೇಶಗಳನ್ನು ಈಡೇರಿಸುವುದನ್ನು ಮುಂದುವರೆಸುತ್ತಿದ್ದಾರೆ. ಕೇರಳ, ತೆಲಂಗಾಣ, ಮಹಾರಾಷ್ಟ್ರ ಮತ್ತು ಈಗ ತಮಿಳುನಾಡಿನ ರಾಜ್ಯಪಾಲರುಗಳು ಮತ್ತು ದಿಲ್ಲಿ, ಲಕ್ಷದ್ವೀಪ, ಅಂಡಮಾನ್ ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಉಪ ರಾಜ್ಯಪಾಲರುಗಳು ತಮ್ಮ ಸಾಂವಿಧಾನಿಕ ಸ್ಥಾನಗಳನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಳ್ಳುತ್ತಾರೆ

ತಮಿಳುನಾಡು ರಾಜ್ಯಪಾಲರು ವಿಧಾನಸಭೆಗೆ ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣದ ಭಾಗವನ್ನು ಓದಲು ನಿರಾಕರಿಸಿದರು. ಕೇರಳದ ರಾಜ್ಯಪಾಲರು ಚುನಾಯಿತ ರಾಜ್ಯ ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ಅನುಮೋದನೆ ಕೊಡದೆ ಸುಮ್ಮನೆ ಕುಳಿತುಕೊಳ್ಳುವುದನ್ನು ಮುಂದುವರೆಸಿದ್ದಾರೆ.

ರಾಜ್ಯಪಾಲರ ಹುದ್ದೆಯನ್ನು ರಾಜ್ಯ ಸರ್ಕಾರಗಳ ಸಾಂವಿಧಾನಿಕ ಪಾತ್ರವನ್ನು ದುರ್ಬಲಗೊಳಿಸಲು ಒಂದು ಸಾಧನವಾಗಿ ಬಳಸಲಾಗುತ್ತಿದೆ. ಇದರಲ್ಲಿ ಒಕ್ಕೂಟತತ್ವ–ವಿರೋಧಿ ಪ್ರವೃತ್ತಿಯ ಮತ್ತು ಅಧಿಕಾರಗಳ ಕೇಂದ್ರೀಕರಣದ ಗೀಳಿನ ದುರ್ವಾಸನೆ ಬರುತ್ತಿದೆ.

ತ್ರಿಪುರ ವಿಧಾನಸಭೆ ಚುನಾವಣೆ

ಪ್ರಜಾಪ್ರಭುತ್ವ ಮತ್ತು ಕಾನೂನು ಸುವ್ಯವಸ್ಥೆಯನ್ನು ದುರ್ಬಲಗೊಳಿಸುವ ಭಯೋತ್ಪಾದನೆ ಮತ್ತು ಹಿಂಸಾಚಾರದ ರಾಜಕೀಯವನ್ನು ಹರಿಯ ಬಿಟ್ಟಿರುವ ಬಿಜೆಪಿ ರಾಜ್ಯ ಸರ್ಕಾರವನ್ನು ಅಧಿಕಾರದಿಂದ ತೆಗೆದುಹಾಕುವಂತೆ ಮಾಡಲು ಸಿಪಿಐ(ಎಂ) ತ್ರಿಪುರಾದ ಎಲ್ಲಾ ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಸಹಕಾರವನ್ನು ಕೋರುತ್ತಿದೆ.

ಹಿಂಸಾಚಾರದ ವಿಧಾನವು ಸ್ಪಷ್ಟವಾಗಿ ಭಯೋತ್ಪಾದನೆ ಮತ್ತು ಭಯದ ವಾತಾವರಣವನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ, ಇದು ಮುಕ್ತ ಮತ್ತು ನ್ಯಾಯಸಮ್ಮತವಾದ ಮತದಾನ ನಡೆಯುವಂತೆ ಮಾಡುವುದರ ಮೇಲೆ ಖಂಡಿತವಾಗಿಯೂ ದುಷ್ಟ ಪರಿಣಾಮ ಬೀರುತ್ತದೆ. ಮುಕ್ತ ಮತ್ತು ನ್ಯಾಯಸಮ್ಮತವಾದ ಮತದಾನ ನಡೆಯುವಂತೆ ಖಾತ್ರಿಪಡಿಸಲು ಭಾರತದ ಚುನಾವಣಾ ಆಯೋಗ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಪೂರ್ವಭಾವಿಯಾಗಿ ಮಧ್ಯಪ್ರವೇಶಿಸಬೇಕು.

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಬೇಕಾದರೆ ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂಪೂರ್ಣವಾಗಿ ಮರುಸ್ಥಾಪಿಸಬೇಕು.

ಕೇಂದ್ರ ಸಮಿತಿ ಕರೆಗಳು

1. ತ್ರಿಪುರಾದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತವಾದ ಚುನಾವಣೆಗಳನ್ನು ನಡೆಸಲು ಪೂರ್ವಷರತ್ತಾಗಿ.

   ಪ್ರಜಾಪ್ರಭುತ್ವ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ಮರುಸ್ಥಾಪಿಸಲು ತ್ರಿಪುರಾದ ಜನತೆ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೌಹಾರ್ದ.

   ಸಿಪಿಐ(ಎಂ) ದೇಶಾದ್ಯಂತ ಸೌಹಾರ್ದವನ್ನು ವ್ಯಕ್ತಪಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಿದೆ.

2. ಹೆಚ್ಚುತ್ತಿರುವ ನಿರುದ್ಯೋಗ, ಬಡತನ ಮತ್ತು ಅಸಮಾನತೆಗಳೊಂದಿಗೆ ಜನರ ಜೀವನೋಪಾಯದ ಮೇಲಿನ ನಿರಂತರ ದಾಳಿಗಳ ವಿರುದ್ಧ ಫೆಬ್ರವರಿಯ ಕೊನೆಯ ವಾರದಲ್ಲಿ 22 ರಿಂದ 28 ರ ವರೆಗೆ ರಾಷ್ಟ್ರವ್ಯಾಪಿ ಪ್ರತಿಭಟನೆಯ ಕಾರ್ಯಾಚರಣೆಗೆ ಕರೆ.

   2023–24ರ ಕೇಂದ್ರ ಬಜೆಟ್‌ನಲ್ಲಿ ಉದ್ಭವಿಸುವ ಪ್ರಶ್ನೆಗಳ ಜೊತೆಗೆ, ಈ ಪ್ರತಿಭಟನಾ ಕಾರ್ಯಾಚರಣೆಗಳು ಈ ಕೆಳಗಿನ ಬೇಡಿಕೆಗಳನ್ನು ಎತ್ತಿತೋರಿಸುತ್ತವೆ:

   * ಉದ್ಯೋಗ ಸೃಷ್ಟಿಸುವ ಮೂಲಸೌಕರ್ಯ ಯೋಜನೆಗಳಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಬೇಕು.
   * 5 ಕೆಜಿ ಉಚಿತ ಆಹಾರ ಧಾನ್ಯಗಳ ಜೊತೆಗೆ 5 ಕೆಜಿ ಸಬ್ಸಿಡಿ ಆಹಾರ ಧಾನ್ಯಗಳನ್ನು ಮತ್ತೆ ಕೊಡಬೇಕು.
   * ಹೆಚ್ಚಿನ ಕೂಲಿಯೊಂದಿಗೆ ಮನರೇಗಕ್ಕೆ ಹಂಚಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಬೇಕು
   * ಸಂಪತ್ತು ಮತ್ತು ಪಿತ್ರಾರ್ಜಿತ ತೆರಿಗೆಯನ್ನು ವಿಧಿಸಬೇಕು.
   * ಶ್ರೀಮಂತರಿಗೆ ತೆರಿಗೆ ರಿಯಾಯಿತಿಗಳನ್ನು ಹಿಂಪಡೆಯಬೇಕು ಮತ್ತು ಅತಿ ಶ್ರೀಮಂತರ ಮೇಲೆ ಒಂದು ತೆರಿಗೆಯನ್ನು ವಿಧಿಸಬೇಕು.
   * ಔಷಧಿಗಳು ಸೇರಿದಂತೆ ಆಹಾರ ಮತ್ತು ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿಯನ್ನು ಹಿಂಪಡೆಯಬೇಕು.

3. 2023 ಏಪ್ರಿಲ್ 5 ರಂದು ಸಂಸತ್ತಿಗೆ ಮಜ್ದೂರ್–ಕಿಸಾನ್ ರ್‍ಯಾಲಿಯ ಕರೆಗೆ ಸಿಪಿಐ(ಎಂ) ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತದೆ.

ಮಾರ್ಚ್ ತಿಂಗಳ ಅವಧಿಯಲ್ಲಿ ಸಿಪಿಐ(ಎಂ) ದೇಶಾದ್ಯಂತ ಈ ಕೆಳಗಿನ ವಿಷಯಗಳ ಮೇಲೆ ರಾಜಕೀಯ ಪ್ರಚಾರಾಂದೋಲನ ಮತ್ತು ಚಟುವಟಿಕೆಗಳನ್ನು ಆಯೋಜಿಸುತ್ತದೆ:

(1) ಒಕ್ಕೂಟತತ್ವದ ಮೇಲೆ ಹೆಚ್ಚುತ್ತಿರುವ ದಾಳಿಗಳೊಂದಿಗೆ, ಚುನಾಯಿತ ರಾಜ್ಯ ಸರ್ಕಾರಗಳ ವಿರುದ್ಧ, ವಿಶೇಷವಾಗಿ ಬಿಜೆಪಿಯೇತರ ರಾಜ್ಯ ಸರ್ಕಾರಗಳ..., ಬಿಜೆಪಿಯ ನೀತಿಗಳ ವಿರುದ್ಧ ಪ್ರತಿಭಟನೆ, ಮತ್ತು ಒಕ್ಕೂಟ ರಚನೆಯನ್ನು ನಾಶಪಡಿಸುವ ಏಕಘಟಕ ಪ್ರಭುತ್ವ ರಚನೆಯನ್ನು ಹೇರುವ ಪ್ರಯತ್ನಗಳನ್ನು ವಿರೋಧಿಸುವುದು.

(2) ನ್ಯಾಯಾಂಗದ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವ ಬಿಜೆಪಿ ಸರ್ಕಾರದ ಪ್ರಯತ್ನಗಳನ್ನು ಖಂಡಿಸುವ ಪ್ರಚಾರಾಂದೋಲನಗಳು. ಉನ್ನತ ನ್ಯಾಯಾಂಗವನ್ನುಸರ್ಕಾರಕ್ಕೆಅಧೀನಗೊಳಿಸುವ ಮೋದಿ ಸರ್ಕಾರದ ಪ್ರಯತ್ನಗಳ ವಿರುದ್ಧ ನ್ಯಾಯಾಂಗದ ಸಾಂವಿಧಾನಿಕ ಪಾತ್ರವನ್ನು ರಕ್ಷಿಸಲು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಸಜ್ಜುಗೊಳಿಸಬೇಕು.

(3) ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಸುಧಾರಣೆಗಳಲ್ಲಿ ಪ್ರಜಾಪ್ರಭುತ್ವ ಮತ್ತು ಸಮಾನ ಅವಕಾಶ. ಸಿಪಿಐ(ಎಂ)ನ 23ನೇ ಮಹಾಧಿವೇಶನ ತನ್ನ ರಾಜಕೀಯ ನಿರ್ಣಯದಲ್ಲಿ ತುರ್ತಾಗಿ ತರಬೇಕಾದ ಚುನಾವಣಾ ಸುಧಾರಣೆಗಳನ್ನು ಎತ್ತಿ ತೋರಿಸಿದೆ.

(4) ಬಲಪಂಥೀಯ ಇಸ್ರೇಲಿ ಸರ್ಕಾರದ ದಮನದ ವಿರುದ್ಧ ಪ್ಯಾಲೇಸ್ಟಿನಿಯನ್ ಜನರೊಂದಿಗೆ ಸೌಹಾರ್ದ ಅಭಿಯಾನಗಳನ್ನು ಸಂಘಟಿಸುವುದು.

ಚುನಾವಣಾ ಪ್ರಣಾಳಿಕೆಗಳಂತಾಗುತ್ತಿರುವ ಮುಂಗಡ ಪತ್ರಗಳು....

ಪುಟ 6 ರಿಂದ

ಜಾರಿಯಲ್ಲಿರುವ ಜನಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಹಣವನ್ನು ವಿನಿಯೋಗಿಸಬೇಕಿತ್ತು. ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಮತ್ತು ತನ್ಮೂಲಕ ಬಂಡವಾಳ ವೆಚ್ಚವನ್ನು ಹೆಚ್ಚಿಸುವುದರಿಂದಲೇ ದೇಶದ ಆರ್ಥಿಕ ಪ್ರಗತಿ ಸಾಧ್ಯ ಎನ್ನುವ ನವ ಉದಾರವಾದಿ ಆರ್ಥಿಕ ಚಿಂತಕರ ವಾದ ಅತಾರ್ಕಿಕ ಎನ್ನುವುದು ಈಗಾಗಲೇ ಹಲವು ದೇಶಗಳಲ್ಲಿ ಸಾಬೀತಾಗಿದೆ. ಇದು ಮಾರುಕಟ್ಟೆ ಸೂಚ್ಯಂಕಗಳಲ್ಲಿ, ಜಿಡಿಪಿ ಬೆಳವಣಿಗೆಯಲ್ಲಿ ಗೋಚರಿಸುವ ತೆಳು ಪರದೆಗಳ ಹಿಂದೆ, ಅಸಮಾನತೆ, ಹಸಿವು, ಬಡತನ ಮತ್ತು ದಾರಿದ್ರ್ಯ ಹೆಚ್ಚಾಗುತ್ತಲೇ ಇರುವುದನ್ನು ಗಮನಿಸಬೇಕಿದೆ.

ಸಾಮಾಜಿಕ ವಲಯದಲ್ಲಿ ಬಂಡವಾಳ ಹೂಡಿಕೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲೇ ಸರ್ಕಾರದ ಬಜೆಟ್‌ಗಳಲ್ಲಿ ಈ ವಲಯಗಳ ವೆಚ್ಚದ ಪ್ರಮಾಣವನ್ನೂ ಕಡಿಮೆ ಮಾಡುವುದರಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಬಡತನದ ಪ್ರಮಾಣ ಹೆಚ್ಚಾಗುತ್ತಲೇ ಹೋಗುತ್ತದೆ. ಉದ್ಯೋಗ ಖಾತರಿ ಯೋಜನೆ, ಪಿಂಚಣಿ ಯೋಜನೆಗಳು, ಆಹಾರ ಸಬ್ಸಿಡಿ ಮುಂತಾದ ಸಾಮಾಜಿಕ ವಲಯದ ವೆಚ್ಚಗಳನ್ನು ಕಡಿತ ಮಾಡಿದಷ್ಟೂ ಅವಕಾಶವಂಚಿತರ ಜನಸಂಖ್ಯೆ ಹೆಚ್ಚಾಗುತ್ತಲೇ ಹೋಗುತ್ತದೆ. ಬಂಡವಾಳ ವೆಚ್ಚದ ಹೆಚ್ಚಳ ಈ ನಿಟ್ಟಿನಲ್ಲಿ ಯಾವ ರೀತಿಯಲ್ಲೂ ಉಪಯುಕ್ತವಾಗುವುದಿಲ್ಲ. ಬಂಡವಾಳ ವೆಚ್ಚದ ಹೆಚ್ಚಳವು ಮೂಲತಃ ಹೆದ್ದಾರಿ, ವಿಮಾನಯಾನ, ರೈಲ್ವೆ ಮುಂತಾದ ಕ್ಷೇತ್ರಗಳಲ್ಲಿ ಕಂಡುಬಂದರೂ, ಈ ವಲಯಗಳಲ್ಲಿ ಶ್ರಮತೀವ್ರತೆಗಿಂತಲೂ ಬಂಡವಾಳ ತೀವ್ರತೆಯ ಯೋಜನೆಗಳೇ ಹೆಚ್ಚಾಗಿರುವುದರಿಂದ, ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆಗಳು ಕಡಿಮೆ ಇರುತ್ತದೆ. ತಂತ್ರಜ್ಞಾನದ ಬಳಕೆಯೇ ಅಧಿಕವಾಗಿರುವುದರಿಂದ ಮಾನವ ಶ್ರಮದ ಅವಶ್ಯಕತೆಯೂ ಕಡಿಮೆ ಇರುತ್ತದೆ. ಹಾಗಾಗಿ ಬಂಡವಾಳವೆಚ್ಚದ ಹೆಚ್ಚಳದಿಂದಲೇ ದೇಶದ ಆರ್ಥಿಕ ಪ್ರಗತಿಯ ವೇಗ ಹೆಚ್ಚುತ್ತದೆ ಎಂದು ಭಾವಿಸುವುದು, ಬಹುಸಂಖ್ಯೆಯ ಜನತೆಯ ಪಾಲಿಗೆ ಅರ್ಧಸತ್ಯವಾಗಿಯೇ ಕಾಣುತ್ತದೆ.

ಅಮೃತ ಕಾಲದತ್ತ ಸಾಗುತ್ತಿರುವ ಭಾರತ ಮಾರುಕಟ್ಟೆ ಆರ್ಥಿಕತೆಯ ನೀತಿಗಳನ್ನೇ ಅನುಸರಿಸಿ ಜಗತ್ತಿನ ಅತಿದೊಡ್ಡ ಮಾರುಕಟ್ಟೆಯಾಗಿ ಅಥವಾ ಅರ್ಥವ್ಯವಸ್ಥೆಯಾಗಿ ರೂಪುಗೊಂಡರೂ, ಶೇ 50ಕ್ಕಿಂತಲೂ ಹೆಚ್ಚು ಜನಸಂಖ್ಯೆ ಪ್ರಾಥಮಿಕ ಶಿಕ್ಷಣ, ಮೂಲ ಆರೋಗ್ಯ ಸೇವೆ, ಪೌಷ್ಟಿಕತೆ ಮತ್ತು ಸಾಮಾಜಿಕ ಭದ್ರತೆಗಳಿಂದ ವಂಚಿತರಾಗಿಯೇ ಉಳಿದಿರುತ್ತಾರೆ. ಏತನ್ಮಧ್ಯೆ ದೇಶದ ಬೃಹದಾರ್ಥಿಕ ನೀತಿಗಳ ಮೂಲಕ ಸಾರ್ವಜನಿಕ ಸಂಪತ್ತು, ಸಂಪನ್ಮೂಲ ಮತ್ತು ಉದ್ಯಮಗಳನ್ನು, ಶಿಕ್ಷಣ–ಆರೋಗ್ಯ ಮುಂತಾದ ಆದ್ಯತೆಯ ವಲಯಗಳನ್ನು ಪೂರ್ಣ ಖಾಸಗೀಕರಣಗೊಳಿಸಿ, ಕಾರ್ಪೋರೇಟ್ ಮಾರುಕಟ್ಟೆಗೆ ಒಪ್ಪಿಸುವ ಕ್ರಮ ಅವ್ಯಾಹತವಾಗಿ ಮುಂದುವರೆಯುತ್ತದೆ. ಈ ದೀರ್ಘಕಾಲಿಕ ದೃಷ್ಟಿಯಿಂದ ನೋಡಿದಾಗ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಂಡಿಸುವ ವಾರ್ಷಿಕ ಮುಂಗಡ ಪತ್ರಗಳು, ಮುಂಬರುವ ಚುನಾವಣೆಗಳನ್ನು ಮತದಾರರನ್ನು ಸೆಳೆಯುವ ಆರ್ಥಿಕ ಅಸ್ತ್ರಗಳಾಗಿ ಮಾತ್ರವೇ ಕಾಣುತ್ತದೆ. ಜನತೆಯ ಮೂಗಿಗೆ ಹಚ್ಚುವ ತುಪ್ಪ ಬಡತನದ ಬೇಗೆಯಲ್ಲಿ ಕರಗಿ ನೀರಾಗುವುದಷ್ಟೇ ಅಲ್ಲದೆ, ಹಸಿವು ಬಡತನ ಮತ್ತು ದಾರಿದ್ರ್ಯದ ಕಂಬನಿಗಳೊಂದಿಗೆ ಬೆರೆತು ಅವರೊಂದಿಗೇ ಮಣ್ಣುಪಾಲಾಗುತ್ತದೆ. ನವ ಉದಾರವಾದ ಮತ್ತು ಕಾರ್ಪೋರೇಟ್ ಮಾರುಕಟ್ಟೆ ಅರ್ಥವ್ಯವಸ್ಥೆಯ ಈ ಒಳಸುಳಿಗಳನ್ನು ಅರ್ಥಮಾಡಿಕೊಳ್ಳುವುದು ಪ್ರಜ್ಞಾವಂತ ಪ್ರಜೆಗಳ ಆದ್ಯತೆಯಾದಾಗ ಮಾತ್ರವೇ ಸರ್ಕಾರದ ಆದ್ಯತೆಗಳೂ ಬದಲಾಗುವುದು ಸಾಧ್ಯ.

ಬಂಡವಾಳಶಾಹಿ ಅರ್ಥವ್ಯವಸ್ಥೆಯ ದೀರ್ಘ ಅವಧಿಯ ಬೆಳವಣಿಗೆಯ ದರವನ್ನು ನಿರ್ಧರಿಸುವ ಬಾಡಿಗೆ ಸರಕಿನ ಪರಿಕಲ್ಪನೆಯು ನಿಸ್ಸಂಶಯವಾಗಿಯೂ ಅಸಂಬದ್ಧವಾಗಿದೆ. ಅದು ತನ್ನ ಆಂತರಿಕ ಮಾರುಕಟ್ಟೆಗಷ್ಟೇ ಹೇಗೆ ಸದ್ದಿಲ್ಲದೆ ಸೀಮಿತಗೊಳ್ಳುವುದಿಲ್ಲವೋ, ಹಾಗೆಯೇ ಅದು ತನ್ನ ಆಂತರಿಕ ಸಂಪನ್ಮೂಲ ಲಭ್ಯತೆಗಷ್ಟೇ ಸದ್ದಿಲ್ಲದೆ ಸೀಮಿತಗೊಳ್ಳುವುದಿಲ್ಲ. ಮಾನವ ಬಲವೂ ಸೇರಿದಂತೆ ಆಂತರಿಕವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಅದು ವಿಶ್ವದೆಲ್ಲೆಡೆಯೂ ನುಗ್ಗಿ ಎಲ್ಲ ಸಂಪನ್ಮೂಲಗಳನ್ನೂ ನಿರ್ದಯವಾಗಿ ಲೂಟಿ ಮಾಡುತ್ತದೆ. ಬಂಡವಾಳಶಾಹಿಗೆ ಯಾವುದೇ 'ಬಾಡಿಗೆ ಸರಕು' ಇಲ್ಲದಂತೆ ಖಚಿತಪಡಿಸಿ ಅದನ್ನು ಸಾಧ್ಯಗೊಳಿಸುವ ಒಂದು ಸಾಧನವೇ ಸಾಮ್ರಾಜ್ಯಶಾಹಿ. ಮುಂದುವರೆದ ಬಂಡವಾಳಶಾಹೀ ದೇಶಗಳಿಗೆ ಅಗತ್ಯವಾದ ಕೃಷಿ ಸರಕುಗಳ ಸರಬರಾಜನ್ನು ಸಾಂಗಗೊಳಿಸಲಿಕ್ಕಾಗಿ ಅವನ್ನು ಉತ್ಪಾದಿಸುವ ದೇಶಗಳ ಆಂತರಿಕ ಕೃಷಿ ಸರಕುಗಳ ಬಳಕೆಯನ್ನು ನಿಯಂತ್ರಿಸಲು ಅದು ಈಗ ನೇರ ರಾಜಕೀಯ ನಿಯಂತ್ರಣಗಳ ಬದಲು ನವ–ಉದಾರವಾದಿ ನೀತಿಗಳನ್ನು ಹೇರುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ. ನಾಗರಾಜ್**

'ಬಾಡಿಗೆ ಸರಕು' ಎಂಬ ಪರಿಕಲ್ಪನೆ ಮತ್ತು ಸಾಮ್ರಾಜ್ಯಶಾಹಿ

ಅರ್ಥಶಾಸ್ತ್ರದಲ್ಲಿ "ಬಾಡಿಗೆ ಸರಕುಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಸಾಮಾನ್ಯವಾಗಿ ಹೂಡಿಕೆದಾರನು ತಾನು ಉತ್ಪಾದಿಸಲು ಬಯಸುವಷ್ಟು ಹೂಡಿಕೆ ಮಾಡುತ್ತಾನೆ. ಆದರೆ, ಹೂಡಿಕೆ ಮಾಡಿದರೂ ಕೆಲವು ಬಗೆಯ ಸರಕುಗಳು ನಿರೀಕ್ಷಿತ ಪ್ರಮಣದಲ್ಲಿ ಉತ್ಪದನೆಯಗುವುದಿಲ್ಲ. ಅವುಗಳ ಉತ್ಪಾದನೆಯು ಪ್ರಕೃತಿಯು ವಿಧಿಸುವ ಮಿತಿಗಳಿಗೆ ಒಳಪಟ್ಟಿರುತ್ತದೆ. ಕೃಷಿ ಉತ್ಪನ್ನಗಳೇ ಹಾಗೆ. ಈ ಕಾರಣದಿಂದಾಗಿ, ಅದಕ್ಕೊಂದು ಗರಿಷ್ಠ ದೀರ್ಘಾವಧಿ ಬೆಳವಣಿಗೆಯ ದರವಿರುತ್ತದೆ, ಅದು ಬಾಹ್ಯವಾಗಿ ನಿರ್ಧರಿಸಲ್ಪಟ್ಟಿರುತ್ತದೆ, ಅದನ್ನು ನಮ್ಮ ಇಚ್ಛಾನುಸಾರ ಬದಲಾಯಿಸಲಾಗದು. ಇಂತಹ ಒಂದು ಬಾಡಿಗೆ ಸರಕನ್ನು ಇತರ ಸರಕುಗಳ ಉತ್ಪಾದನೆಗೆ ಅತ್ಯಗತ್ಯವಾದ ಒಂದು ಲಾಗುವಾಡಾಗಿ ಬಳಸಿದಾಗ, ಅಂತಹ ಸರಕುಗಳ ದೀರ್ಘಾವದಿ ಬೆಳವಣಿಗೆಯೂ ಬಾಡಿಗೆ ಸರಕಿನ ಬಾಹ್ಯವಾಗಿ ನಿರ್ಧರಿಸಲ್ಪಟ್ಟ ಗರಿಷ್ಠ ಬೆಳವಣಿಗೆಯೊಂದಿಗೆ ಗಂಟು ಹಾಕಿಕೊಂಡಿರುತ್ತದೆ. ಮತ್ತು ಇಡೀ ಉತ್ಪಾದನಾ ವ್ಯವಸ್ಥೆಯ ಬೆಳವಣಿಗೆಯ ದರವು, ಬಾಡಿಗೆ ಸರಕಿನ ಬೆಳವಣಿಗೆಯ ದರದ ರೀತಿಯಲ್ಲಿ, ಬಾಹ್ಯವಾಗಿ ನಿರ್ಧರಿಸಲ್ಪಡುತ್ತದೆ. ಅದಕ್ಕಾಗಿಯೇ ಈ ಸರಕನ್ನು "ಬಾಡಿಗೆ ಸರಕು" ಎಂದು ಕರೆಯಲಾಗುತ್ತದೆ. ಅರ್ಥವ್ಯವಸ್ಥೆಯು ಒಳಗೊಂಡಿರುವ ತಂತ್ರಜ್ಞಾನದ ಪ್ರಗತಿಯು ಇದನ್ನು ತುಸು ಸಡಿಲಗೊಳಿಸಬಹುದು, ಆದರೆ ಈ ಸಡಿಲಿಕೆ ಒಟ್ಟಾರೆ ವ್ಯವಸ್ಥೆಯ ಬೆಳವಣಿಗೆಯ ಮೇಲೆ ಬಾಡಿಗೆ ಸರಕು ವಿಧಿಸುವ ಮೂಲಭೂತ ನಿರ್ಬಂಧವನ್ನು ಬದಲಿಸದು.

ಅತ್ಯಂತ ಪ್ರಸಿದ್ಧ ಶಾಸ್ತ್ರೀಯ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾದ ಡೇವಿಡ್ ರಿಕಾರ್ಡೊ ಕೂಡ ಭೂಮಿಯನ್ನು ಬಾಡಿಗೆ ಸರಕು ಎಂದು ಪರಿಗಣಿಸಿದ್ದರು. ದುಡಿಯುವ ಜನರು ಪ್ರಧಾನವಾಗಿ ಬಳಸುವ ಆಹಾರ ಧಾನ್ಯವನ್ನು ಉತ್ಪಾದಿಸಲು ಭೂಮಿ ಅತ್ಯಗತ್ಯವಾಗಿತ್ತು. ಮತ್ತು ಅದಕ್ಕಾಗಿ ಲಭ್ಯವಿರುವ ಭೂಮಿಯ ವಿಸ್ತಾರವು ನಿಯತವಾಗಿತ್ತು. ಒಂದು ವೇಳೆ ಅಗತ್ಯವಿರುವಷ್ಟು ಭೂಮಿಯನ್ನು ಪೂರ್ಣವಾಗಿ ಈ ಉದ್ದೇಶಕ್ಕಾಗಿ ನಿಗದಿಪಡಿಸುವುದು ಸಾಧ್ಯವಾಗದಿದ್ದರೆ, ಕೊನೆಯ ಪಕ್ಷ, ಉಪಯೋಗಕ್ಕೆ ಬಾರದ ಭೂಮಿಯನ್ನು – ಎಷ್ಟರಮಟ್ಟಿನ ಉಪಯೋಗಕ್ಕೆ ಬಾರದ ಭೂಮಿ ಎಂದರೆ ಅದನ್ನು ಕೃಷಿ ಮಾಡುವ ದುಡಿಮೆಗಾರರ ಸ್ವಂತ ಬಳಕೆಗೆ ಅಗತ್ಯವಿರುವುದಕ್ಕಿಂತ ಹೆಚ್ಚಿನ ಧಾನ್ಯವನ್ನು ಬೆಳೆಯಲು ಸಾಧ್ಯವಾಗದಷ್ಟು ಮಟ್ಟಿನ ಕಳಪೆ ಭೂಮಿಯನ್ನು ಬೇಸಾಯಕ್ಕೆ ಬಳಸಿಕೊಳ್ಳಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಭೂಮಿಯ ಇತಿಮಿತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮಿತಿಗಳ ಈ ಹಂತವನ್ನು ದಾಟಿ ಇನ್ನೂ ಹೆಚ್ಚು ಬಂಡವಾಳದ ಸಂಗ್ರಹಣೆಯು ಸಾಧ್ಯವಾಗುವುದಿಲ್ಲ. ಈ ಪರಿಸ್ಥಿತಿಯನ್ನು ಶೂನ್ಯ ಶೇಖರಣೆಯ ಮತ್ತು ಆ ಕಾರಣದಿಂದ ಶೂನ್ಯ ಬೆಳವಣಿಗೆಯ "ಸ್ಥಿರ ಸ್ಥಿತಿ" ಎಂದು ರಿಕಾರ್ಡೊ ಕರೆದರು. ಅವರ ಪ್ರಕಾರ, ಭೂಮಿಯು ಒಂದು ಬಾಡಿಗೆ ಸರಕಾಗಿ ಬಂಡವಾಳಶಾಹಿ ಅರ್ಥವ್ಯವಸ್ಥೆಗಳನ್ನು ಒಂದು "ಸ್ಥಿರ ಸ್ಥಿತಿ"ಯತ್ತ ತಳ್ಳಿದೆ. ಆ "ಸ್ಥಿರ ಸ್ಥಿತಿ"ಯ ಆಗಮನವನ್ನು ಹೆಚ್ಚೆಂದರೆ ಮುಂದೂಡಬಹುದೇ ವಿನಃ ಅದನ್ನು ಸಂಪೂರ್ಣವಾಗಿ ತಡೆಯಲಾಗದು. ರಿಕಾರ್ಡೊ ಹೇಳಿದ್ದು ಇದನ್ನೇ.

ಶ್ರಮಶಕ್ತಿಯೂ 'ಬಾಡಿಗೆ ಸರಕು'?

ರಿಕಾರ್ಡೊನ ಪ್ರಕಾರ, ಶ್ರಮಶಕ್ತಿಯು ಎಂದಿಗೂ ಬಾಡಿಗೆ ಸರಕಾಗಿ ಪರಿಗಣಿತವಾಗಿರಲಿಲ್ಲ. ಏಕೆಂದರೆ, ದುಡಿಮೆಗಾರರು ತಮ್ಮ ನಿಜ ವೇತನಗಳು ಒಂದು ನಿರ್ದಿಷ್ಟ ಮಟ್ಟವನ್ನು ಮೀರಿದ ನಂತರ, ಕಾರ್ಮಿಕರು ತಮ್ಮನ್ನು ತಾವು ಪುನರುತ್ಪಾದಿಸಲು ಪ್ರಾರಂಭಿಸುತ್ತಾರೆ. ಆದ್ದರಿಂದ, ಕಾರ್ಮಿಕರ ಕೊರತೆಯಿದ್ದರೆ, ಅವರ ಬೇಡಿಕೆ ಹೆಚ್ಚಾಗುತ್ತದೆ ಮತ್ತು ವೇತನ ಹೆಚ್ಚಾಗುತ್ತದೆ. ನಂತರ ಅವರು ಸಂತಾನೋತ್ಪತ್ತಿ ಮಾಡುತ್ತಾರೆ. (ಮದುವೆಯಾಗಿ ಮಕ್ಕಳನ್ನು ಹೊಂದುತ್ತಾರೆ). ಇದರಿಂದ ಕಾರ್ಮಿಕರ ಕೊರತೆ ನೀಗಲಿದೆ. ಆದ್ದರಿಂದ ಕಾರ್ಮಿಕರು ಎಂದಿಗೂ ಬಾಡಿಗೆದಾರರಲ್ಲ. ಹೊಸ ತಲೆಮಾರಿನ ಕೆಲಸಗಾರರು ತಯಾರಾಗಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಆದರೆ, ದೀರ್ಘಾವಧಿಯಲ್ಲಿ ದುಡಿಮೆ ಎಂದಿಗೂ ಬಂಡವಾಳದ ಕ್ರೋಢೀಕರಣವನ್ನಯ ತಡೆಯಲಿಲ್ಲ. ಇದು ರಿಕಾರ್ಡೊ ಅವರ ತಿಳುವಳಿಕೆ.



ರಿಕಾರ್ಡೊನ ಈ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ಆಧುನಿಕ ಬಂಡವಾಳಶಾಹಿ ಅರ್ಥಶಾಸ್ತ್ರವು ಕಾರ್ಮಿಕ ಶಕ್ತಿಯನ್ನು ಒಂದು ಬಾಡಿಗೆ ಸರಕಾಗಿ ನೋಡುತ್ತದೆ. "ಮನು ಕುಲದ ಮೇಲೆ ಹೊರಿಸಿದ ಅಪನಿಂದೆ" ಎಂದು ಮಾರ್ಕ್ಸ್ ಕರೆದಿದ್ದ ಕುಖ್ಯಾತ ಮಾಲ್ಥೂಸಿಯನ್ ಸಿದ್ಧಾಂತದ ಅನುಯಾಯಿ ರಿಕಾರ್ಡೊ ಪ್ರತಿಪಾದಿಸಿದ ರೀತಿಯಲ್ಲಿ ಜನಸಂಖ್ಯೆಯು ವೃದ್ಧಿಸುವುದಿಲ್ಲ ಎಂದು ಆಧುನಿಕ ಬಂಡವಾಳಶಾಹಿ ಅರ್ಥಶಾಸ್ತ್ರವು ನಂಬುತ್ತದೆ. ಜನಸಂಖ್ಯೆಯ ಹೆಚ್ಚಳವು ಹಲವಾರು ಅಂಶಗಳಿಂದ ಸ್ವಾಯತ್ತವಾಗಿ ನಿರ್ಧರಿಸಲ್ಪಡುತ್ತದೆ. ಮತ್ತು ಈ ಸ್ವಾಯತ್ತ ನಿರ್ಣಯವೇ ಶ್ರಮಶಕ್ತಿಯನ್ನು ಒಂದು ಬಾಡಿಗೆ ಸರಕನ್ನಾಗಿಸುತ್ತದೆ. ಇಡೀ ಅರ್ಥವ್ಯವಸ್ಥೆಯ ಬೆಳವಣಿಗೆ ದರವು ಕಾರ್ಮಿಕ–ಶಕ್ತಿಯ ಬೆಳವಣಿಗೆಯ ದರದೊಂದಿಗೆ ಕಟ್ಟಿಹಾಕಲ್ಪಟ್ಟಿದೆ, ಮತ್ತು ಅದು ಸ್ವತಃ ಬಾಹ್ಯವಾಗಿ ನಿರ್ಧರಿಸಲ್ಪಡುವ ಜನಸಂಖ್ಯೆಯ ಬೆಳವಣಿಗೆಯ ದರವನ್ನು ಅವಲಂಬಿಸಿರುತ್ತದೆ. ಈ ಅವಲಂಬನೆಯನ್ನು ತಾಂತ್ರಿಕ ಪ್ರಗತಿ, ಏರಿಕೆಯಾಗುತ್ತಿರುವ ಕಾರ್ಮಿಕ ಉತ್ಪಾದಕತೆ, ಇವು ಸ್ವಲ್ಪ ಮಟ್ಟಿಗೆ ಸಡಿಲಗೊಳಿಸಬಹುದೇ ವಿನಃ ಅದನ್ನು ಸಂಪೂರ್ಣವಾಗಿ ನಿವಾರಿಸುವುದು ಸಾಧ್ಯವಿಲ್ಲ. ಜನಸಂಖ್ಯೆಯ ಬೆಳವಣಿಗೆಯ ದರ, ಮತ್ತು ಆ ಕಾರಣದಿಂದ ಕಾರ್ಮಿಕ ಶಕ್ತಿಯ ಬೆಳವಣಿಗೆ ವಾರ್ಷಿಕವಾಗಿ ಶೇ. 3 ರಷ್ಟಿದ್ದರೆ, ಮತ್ತು ಕಾರ್ಮಿಕ ಉತ್ಪಾದಕತೆಯ ಬೆಳವಣಿಗೆಯ ದರವು ವಾರ್ಷಿಕವಾಗಿ ಶೇ. 2ರಷ್ಟಿದ್ದರೆ, ಅರ್ಥವ್ಯವಸ್ಥೆಯ ದೀರ್ಘಕಾಲೀನ ಬೆಳವಣಿಗೆಯ ಗರಿಷ್ಠ ದರವು ಶೇ. 5 ಆಗಿರುತ್ತದೆ, ಅದಕ್ಕಿಂತ ಹೆಚ್ಚಿಗೆ ಇರುವುದಿಲ್ಲ.

ಅಸಂಬದ್ಧ ಪರಿಕಲ್ಪನೆಯಾಗಿಸಿದ ಸಾಮ್ರಾಜ್ಯಶಾಹಿ

ಹೀಗೆ ನಾವು ಸಾಂಪ್ರದಾಯಿಕ ಅರ್ಥಶಾಸ್ತ್ರವನ್ನಾಗಲಿ ಅಥವಾ ಆಧುನಿಕ ನವ–ಸಾಂಪ್ರದಾಯಿಕ ಅರ್ಥಶಾಸ್ತ್ರವನ್ನಾಗಲಿ ಅವಲೋಕಿಸಿದಾಗ, ಬಂಡವಾಳಶಾಹಿ ಅರ್ಥಶಾಸ್ತ್ರದ ಎಲ್ಲಾ ಧಾರೆಗಳೂ ಬಂಡವಾಳಶಾಹಿ ಅರ್ಥವ್ಯವಸ್ಥೆಯ ದೀರ್ಘಕಾಲೀನ ಬೆಳವಣಿಗೆಯ ದರವನ್ನು ವಿವರಿಸಲು ಬಾಡಿಗೆ ಸರಕಿನ ಪರಿಕಲ್ಪನೆಯನ್ನು ಬಳಸುತ್ತವೆ. ಆದಾಗ್ಯೂ, ಈ ಇಡೀ ವಿಧಾನದ ಸಮಸ್ಯೆಯೆಂದರೆ ಅದು ಸಾಮ್ರಾಜ್ಯಶಾಹಿಯ ಅಸ್ತಿತ್ವವನ್ನು ಪರಿಗಣಿಸುವುದಿಲ್ಲ. ಸಾಮ್ರಾಜ್ಯಶಾಹಿ ಇಲ್ಲದಿದ್ದರೆ ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ಏನಾಗಬಹುದು ಎಂಬುದನ್ನು ವಿವರಿಸಲು ಒಂದು ವೇಳೆ ಬಾಡಿಗೆ ಸರಕು ಎಂಬುದನ್ನು ಪರಿಚಯಿಸಿದ್ದರೆ, ಆಗ ಅದು ಒಂದು ರೀತಿಯ ತಾರ್ಕಿಕ ವಿವರಣೆಯಾಗುತ್ತಿತ್ತು. ಆದರೆ, ಈ ಎಲ್ಲ ಬಂಡವಾಳಶಾಹಿ ಸಿದ್ಧಾಂತಗಳೂ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ವಾಸ್ತವವಾಗಿ ಏನಾಗುತ್ತದೆ ಎಂಬುದನ್ನು ವಿವರಿಸಲು ಈ ಪರಿಕಲ್ಪನೆಯನ್ನು ಬಳಸುತ್ತವೆ. ಹಾಗಾಗಿ, ಈ ಪರಿಕಲ್ಪನೆಯು ಈ ಸಿದ್ಧಾಂತಗಳನ್ನು ಸಂಪೂರ್ಣವಾಗಿ ಅಸಂಗತಗೊಳಿಸುತ್ತದೆ. ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯು ತನ್ನ ಆಂತರಿಕ ಮಾರುಕಟ್ಟೆಗೆ ಹೇಗೆ ಸದ್ದಿಲ್ಲದೆ ಸೀಮಿತಗೊಳ್ಳುವುದಿಲ್ಲವೋ, ಹಾಗೆಯೇ ಅದು ತನ್ನ ಆಂತರಿಕ ಸಂಪನ್ಮೂಲ ಲಭ್ಯತೆಗೂ ಸದ್ದಿಲ್ಲದೆ ಸೀಮಿತಗೊಳ್ಳುವುದಿಲ್ಲ. ಮಾನವ ಬಲವೂ ಸೇರಿದಂತೆ ಆಂತರಿಕವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಅದು ವಿಶ್ವದೆಲ್ಲೆಡೆಯೂ ನುಗ್ಗಿ ಎಲ್ಲ ಸಂಪನ್ಮೂಲಗಳನ್ನೂ ನಿರ್ದಯವಾಗಿ ಲೂಟಿ ಮಾಡುತ್ತದೆ. ಆದ್ದರಿಂದ, ಬಂಡವಾಳಶಾಹಿ ಅರ್ಥವ್ಯವಸ್ಥೆಯ ದೀರ್ಘಾವಧಿಯ ಬೆಳವಣಿಗೆಯ ದರವನ್ನು ನಿರ್ಧರಿಸುವ ಬಾಡಿಗೆ ಸರಕಿನ ಪರಿಕಲ್ಪನೆಯು ನಿಸ್ಸಂಶಯವಾಗಿಯೂ ಅಸಂಬದ್ಧವಾಗಿದೆ.

ಈ ಸಂಬಂಧವಾಗಿ ನಾವು ದುಡಿಮೆಗಾರರ ವಿಷಯವನ್ನೇ ತೆಗೆದುಕೊಳ್ಳೋಣ. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ, ಇಪ್ಪತ್ತು ದಶಲಕ್ಷಕ್ಕೂ ಹೆಚ್ಚು ಜನರನ್ನು ಬಲವಂತವಾಗಿ ಗುಲಾಮರನ್ನಾಗಿ ಮಾಡಿ ಅವರನ್ನು ಆಫ್ರಿಕಾದಿಂದ "ಹೊಸ ಜಗತ್ತಿಗೆ" ಅಲ್ಲಿನ ಗಣಿಗಳು ಮತ್ತು ಪ್ಲಾಂಟೇಶನ್‌ಗಳಲ್ಲಿ ಕೆಲಸ ಮಾಡಲು ಸಾಗಿಸಲಾಯಿತು. ಅಲ್ಲಿ ತಯಾರಿಸಲಾದ ಉತ್ಪನ್ನಗಳು ಮೆಟ್ರೊಪಾಲಿಟನ್ ದೇಶಗಳಿಗೆ ಬಂಡವಾಳ ಶೇಖರಣೆಯನ್ನು ಪೋಷಿಸಲು ಅಗತ್ಯವಾಗಿದ್ದವು. ಗುಲಾಮಗಿರಿಯು ಔಪಚಾರಿಕವಾಗಿ ಕೊನೆಗೊಂಡ ನಂತರ, ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ಮೊದಲ ಮಹಾಯುದ್ಧದ ವರೆಗಿನ ಅವಧಿಯಲ್ಲಿ, 50 ಮಿಲಿಯನ್ ಭಾರತೀಯ ಮತ್ತು ಚೀನೀ ಕೆಲಸಗಾರರನ್ನು ವಿಶ್ವದ ಉಷ್ಣವಲಯದ ಮತ್ತು ಅರೆ ಉಷ್ಣವಲಯದ ಪ್ರದೇಶಗಳಿಗೆ ಸಾಗಿಸಲಾಯಿತು. ಮತ್ತೊಮ್ಮೆ ಅದೇ ಉದ್ದೇಶಕ್ಕಾಗಿ, ಅಂದರೆ, ಮೆಟ್ರೊಪಾಲಿಟನ್ ದೇಶಗಳಿಗೆ ಬಂಡವಾಳ ಶೇಖರಣೆಗಾಗಿ, ಭಾರತೀಯ ಗುತ್ತಿಗೆ ಕೆಲಸಗಾರರನ್ನು ವೆಸ್ಟ್ ಇಂಡೀಸ್, ಫಿಜಿ, ಮಾರಿಷಸ್ ಮತ್ತು ಪೂರ್ವ ಮತ್ತು ದಕ್ಷಿಣಆಫ್ರಿಕಾದಲ್ಲಿ ಕೂಲಿ ಕೆಲಸಕ್ಕಾಗಿ ಬಳಸಲಾಯಿತು. ಚೀನೀ ಕೆಲಸಗಾರರನ್ನು ಪೆಸಿಫಿಕ್ ಮಹಾಸಾಗರದಾದ್ಯಂತದ ಸ್ಥಳಗಳಲ್ಲಿ ಕೂಲಿಗಾರರಾಗಿ ಬಳಸಲಾಯಿತು. ಈ ವಲಸೆಯು ಇಡೀ ವಲಸಿಗರನ್ನು ಹೊಸ ಸ್ಥಳಗಳಲ್ಲಿ ನೆಲೆಸುವಂತೆ ಒತ್ತಾಯಿಸಲಿಲ್ಲ. ಆದರೆ ಸಾಕಷ್ಟು ಸಂಖ್ಯೆಯ ಜನರು ಅಲ್ಲಿಯೇ ನೆಲೆಸಿದರು.

ಎರಡನೆಯ ಮಹಾಯುದ್ಧದ ನಂತರ ಬಂಡವಾಳಶಾಹಿಯು ಹಿಂದೆಂದಿಗಿಂತಲೂ ಹೆಚ್ಚು ಏರುಗತಿಯಲ್ಲಿದ್ದಾಗ, ಮೆಟ್ರೊಪಾಲಿಟನ್ ದೇಶಗಳಲ್ಲಿ ಜನಸಂಖ್ಯೆಯ ಸ್ವಾಭಾವಿಕ ಬೆಳವಣಿಗೆಯ ದರವು, ವಾಸ್ತವಿಕವಾಗಿ ಶೂನ್ಯ ಮಟ್ಟದಲ್ಲಿದ್ದ ಅಂಶವು ಬಂಡವಾಳಶಾಹಿಯ ಏರುಗತಿಯನ್ನು ನಿರ್ಬಂಧಿಸಿರಲಿಲ್ಲ. ಅದು ತನ್ನ ಹಿಂದಿನ ವಸಾಹತುಗಳಿಂದ ಮತ್ತು ಅವಲಂಬಿತ ದೇಶಗಳಿಂದ ಬಂದ ವಲಸೆಯನ್ನು ಅವಲಂಬಿಸಿತ್ತು. ಭಾರತೀಯ, ಪಾಕಿಸ್ತಾನಿ ಮತ್ತು ವೆಸ್ಟ್ ಇಂಡಿಯನ್ ಕಾರ್ಮಿಕರು ಬ್ರಿಟನ್‌ಗೆ ಹೋದರು. ಅಲ್ಜೀರಿಯನ್, ಟುನೀಷಿಯನ್ ಮತ್ತು ಮೊರಾಕನ್ ಕಾರ್ಮಿಕರು ಫ್ರಾನ್ಸ್‌ಗೆ ಹೋದರು. ಟರ್ಕಿಶ್ ಕಾರ್ಮಿಕರು ಜರ್ಮನಿಗೆ ಹೋದರು. ಕಾರ್ಮಿಕರ ಕೊರತೆಯಿಂದಾಗಿ ಬಂಡವಾಳಶಾಹಿಯ ಉತ್ಕರ್ಷವು ಕುಗ್ಗಲಿಲ್ಲ. ಮೆಟ್ರೊಪಾಲಿಟನ್ ದೇಶಗಳಲ್ಲಿ ಉದ್ಭವಿಸಬಹುದಾದ ಕಾರ್ಮಿಕರ ಕೊರತೆಯ ಪರಿಸ್ಥಿತಿಯನ್ನು ದೊಡ್ಡ ಪ್ರಮಾಣದ ವಲಸೆಯ ಮೂಲಕ ನಿಭಾಯಿಸಲಾಯಿತು. ಈ ವಲಸೆಯು ಖಂಡಿತವಾಗಿಯೂ ಮುಕ್ತವಾಗಿರಲಿಲ್ಲ. ಕಟ್ಟುನಿಟ್ಟಾಗಿ ನಿಯಂತ್ರಿಸಲ್ಪಟ್ಟಿತ್ತು. ಪಶ್ಚಿಮ ಯುರೋಪಿನ ಮೆಟ್ರೊಪಾಲಿಟನ್ ದೇಶಗಳಿಗೆ ಈಗಲೂ ಸಹ, ಪೂರ್ವ ಯುರೋಪಿಯನ್ ದೇಶಗಳಿಂದ ಬೃಹತ್ ವಲಸೆ ನಡೆಯುತ್ತಲೇ ಇದೆ. ಲಿಥುವೇನಿಯಾದಿಂದ ಹಿಡಿದು ಉಕ್ರೇನ್‌ವರೆಗೆ, ಅವುಗಳಲ್ಲಿ ಹೆಚ್ಚಿನವು, ಮೆಟ್ರೊಪಾಲಿಟನ್ ದೇಶಗಳ ಬಂಡವಾಳ ಸಂಗ್ರಹಣೆಯನ್ನು ಪೋಷಿಸಲು ಅಗ್ಗದ ಕಾರ್ಮಿಕರನ್ನು ಒದಗಿಸುತ್ತವೆ.

ಬಂಡವಾಳ ಸಂಚಯವೇ ಕೇಂದ್ರ ವಿಷಯ

ಹೀಗೆ ಬಂಡವಾಳದ ಕ್ರೋಢೀಕರಣದ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಲಕ್ಷಾಂತರ ಜನರನ್ನು ಸಾವಿರಾರು ಮೈಲು ದೂರ ಸ್ಥಳಾಂತರಿಸಿದ ಬಂಡವಾಳವು ಪ್ರಪಂಚದ ನೆತ್ತಿಯ ಮೇಲೆ ಕುಳಿತುಕೊಳ್ಳುತ್ತದೆ. ಬೂರ್ಜ್ವಾ ಅರ್ಥಶಾಸ್ತ್ರವು ಪ್ರತಿಪಾದಿಸುವಂತೆ, ಬಂಡವಾಳ ಸಂಚಯವು ಒಂದು ದೇಶದೊಳಗೆ ಲಭ್ಯವಿರುವ ಬಾಹ್ಯ ಕಾರ್ಮಿಕ ಶಕ್ತಿಯೊಂದಿಗೆ ನಮ್ರವಾಗಿ ಹೊಂದಿಕೊಳ್ಳುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಂಚಯವೇ ಒಂದು ಬಹಳ ಮುಖ್ಯವಾದ ಅಂಶವಾಗುತ್ತದೆ. ಬಾಡಿಗೆ ಸರಕಿನ ಪರಿಕಲ್ಪನೆಯು ಸೂಚಿಸುವಂತೆ ಬಂಡವಾಳ ಸಂಚಯವು ಕಾರ್ಮಿಕರ ಲಭ್ಯತೆಗೆ ಹೊಂದಿಕೊಳ್ಳುವುದರ ಬದಲು ಕಾರ್ಮಿಕರ ಲಭ್ಯತೆಯು ಬಂಡವಾಳ ಸಂಚಯಕ್ಕೆ ಹೊಂದಿಕೊಳ್ಳುತ್ತದೆ.

ಪುಟ 15 ಕ್ಕೆ



“ನಮಗೆ ಈ ಪೆನ್‌ಶನ್ ಸುಧಾರಣೆ ಬೇಡ !!” – ಫ್ರೆಂಚ್ ಒಕ್ಕೊರಲ ಕೂಗು

ಜಗದ ಸುತ್ತ

ವಸಂತರಾಜ ಎನ್.ಕೆ.

ಅಧ್ಯಕ್ಷ ಮ್ಯಾಕ್ರಾನ್ ಅವರ ಫ್ರೆಂಚ್ ಸರಕಾರ ದೇಶದ ಪೆನ್‌ಶನ್ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಿದೆ. ಅದನ್ನು ‘ಸುಧಾರಣೆ’ ಎನ್ನುತ್ತಿದೆ. ಆದರೆ ಫ್ರೆಂಚ್ ಕಾರ್ಮಿಕರು ಮತ್ತು ಜನತೆ ಅದನ್ನು ತಿರಸ್ಕರಿಸಿದ್ದಾರೆ. ಅದರ ವಿರುದ್ಧ ಇಡೀ ಜನತೆ ಎದ್ದು ನಿಂತಂತಿದೆ. ಅದರ ವಿರುದ್ಧ ಜನವರಿ 19ರಂದು ಸಾರ್ವತ್ರಿಕ ಮುಷ್ಕರ ನಡೆದು ಅಂದು ಇಡೀ ದೇಶ ಸ್ತಬ್ಧವಾಯಿತು. ಸಾರ್ವಜನಿಕ ಸಾರಿಗೆಯಿಂದ, ಶಾಲಾ ಕಾಲೇಜುಗಳು ಸೇರಿದಂತೆ ತೈಲ ಸಂಸ್ಕರಣಾ ಘಟಕಗಳ ವರೆಗೆ ಎಲ್ಲವೂ ಸ್ತಬ್ಧವಾಗಿತ್ತು. ಅದರ ನಂತರವೂ ಜನವರಿ 20, 21 ಮತ್ತು 23ರಂದು ದೇಶದಾದ್ಯಂತ ವ್ಯಾಪಕ ಪ್ರತಿಭಟನೆಗಳು ನಡೆದಿವೆ.

ಜನವರಿ 19 ರಂದು ನಡೆದ ಸಾರ್ವತ್ರಿಕ ಮುಷ್ಕರದಲ್ಲಿ ಎಡಪಂಥೀಯ ಸಿಜಿಟಿ ಸೇರಿದಂತೆ ಎಲ್ಲ ಕೇಂದ್ರೀಯ ಟ್ರೇಡ್ ಯೂನಿಯನುಗಳು ಭಾಗವಹಿಸಿದ್ದವು. ಅದೇ ದಿನ ಸರಕಾರದ ‘ಪೆನ್‌ಶನ್ ಸುಧಾರಣೆ’ ತಿರಸ್ಕರಿಸಿ ದೇಶದಾದ್ಯಂತ ವ್ಯಾಪಕ ಪ್ರತಿಭಟನೆಗಳು ನಡೆದಿವೆ. ಇಂತಹ ಪ್ರತಿಭಟನೆಗಳಲ್ಲಿ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಎಲ್ಲ ವರ್ಗಗಳ ಕಾರ್ಮಿಕರಲ್ಲದೆ, ಪ್ರಗತಿಪರ ಪಕ್ಷಗಳ ಮತ್ತು ಯುವಜನ ಸಂಘಟನೆಗಳ ಬೆಂಬಲಿಗರು ಭಾಗವಹಿಸಿದ್ದರು. ರಾಜಧಾನಿ ಪ್ಯಾರೀಸ್ ಒಂದರಲ್ಲೇ 5 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ್ದರು ಎಂದು ವರದಿಯಾಗಿದೆ.

ನಿವೃತ್ತರಿಗೆ ಕೊಡುವ ಪೆನ್‌ಶನ್ ವ್ಯವಸ್ಥೆಯಲ್ಲಿ ಜನವರಿ 10 ರಂದು ಅಧ್ಯಕ್ಷ ಮ್ಯಾಕ್ರಾನ್ ಪ್ರಮುಖ ಬದಲಾವಣೆಗಳನ್ನು ಘೋಷಿಸಿದ್ದು ಜನತೆಯಲ್ಲಿ ತೀವ್ರ ಆಕ್ರೋಶವುಂಟು ಮಾಡಿತ್ತು. ನಿವೃತ್ತಿ ವಯಸ್ಸನ್ನು 62ರಿಂದ 64ಕ್ಕೆ ಹೆಚ್ಚಿಸಿದ್ದು, ಪೂರ್ಣ ಪೆನ್‌ಶನ್ ಪಡೆಯಬೇಕಾದರೆ ಕನಿಷ್ಠ 43 ವರ್ಷ ಕೆಲಸ ಮಾಡಿರಬೇಕು ಎಂಬ ಹೊಸ ಷರತ್ತು 2027ರಿಂದ ಲಗಾವಾಗುವುದು – ಪ್ರಮುಖ ಬದಲಾವಣೆಗಳು. ಅಭಿವೃದ್ಧ ದೇಶಗಳ ಸಂಪತ್ತು, ಸಮೃದ್ಧಿಗಳನ್ನು ಕಾರ್ಮಿಕರೊಂದಿಗೆ ಹೆಚ್ಚೆಚ್ಚಾಗಿ ಹಂಚಿಕೊಳ್ಳಬೇಕು. ಇದಕ್ಕನುಗುಣವಾಗಿ ನಿವೃತ್ತಿ ವಯಸ್ಸು 60ಕ್ಕೆ ಕಡಿಮೆಯಾಗಬೇಕು ಹೆಚ್ಚಲ್ಲ. ಅದೇ ರೀತಿ ಪೂರ್ಣ ಪೆನ್‌ಶನ್ ಪಡೆಯಲು ಬೇಕಾದ ಕನಿಷ್ಠ ಕೆಲಸದ ವರ್ಷಗಳು ಕಡಿಮೆಯಾಗಬೇಕು, ಹೆಚ್ಚಲ್ಲ ಎಂಬುದು ಕಾರ್ಮಿಕರ ವಾದ.

ಕಷ್ಟದ ಕೆಲಸ, ಕೆಲಸದ ಕಠಿಣ ಪರಿಸ್ಥಿತಿಗಳಿಂದಾಗಿ ಮತ್ತು ಆರೋಗ್ಯ ಸಮಸ್ಯೆಗಳ ಕಾರಣಗಳಿಂದಾಗಿ ಹಲವು ಕಾರ್ಮಿಕರು (ಪ್ರಮುಖವಾಗಿ ಮಹಿಳೆಯರು) ಬೇಗ ನಿವೃತ್ತಿ ಪಡೆಯಬೇಕಾಗುತ್ತದೆ. ಮಹಿಳಾ ಕಾರ್ಮಿಕರು ಕುಟುಂಬದ ಪೋಷಣೆಗೆ ಮಧ್ಯೆ ಕೆಲವು ಅವಧಿಗಳ ಕಾಲ ಕೆಲಸ ಬಿಡಬೇಕಾಗುತ್ತದೆ. ಹಾಗಾಗಿ ಈ ಬದಲಾವಣೆಗಳು ಒಟ್ಟಾರೆಯಾಗಿ ಕಾರ್ಮಿಕ–ವಿರೋಧಿಯೆಂಬುದು ಕಾರ್ಮಿಕರ ಆಕ್ರೋಶಕ್ಕೆ ಕಾರಣವಾಗಿತ್ತು. ನಿವೃತ್ತಿ ವಯಸ್ಸನ್ನು ಏರಿಸುವುದರಿಂದ ಯುವಜನರಿಗೆ ಉದ್ಯೋಗಾವಕಾಶ ಕಡಿಮೆಯಾಗುತ್ತದೆ. ಅಲ್ಲದೆ ಹಿಂದಿನ ಪೀಳಿಗೆಗಿಂತ ಮುಂದಿನ ಪೀಳಿಗೆ ಹೆಚ್ಚಿನ ವರ್ಷಗಳ ಕಾಲ ದುಡಿಯಬೇಕಾಗುವುದು ಪ್ರಗತಿ, ಅಭಿವೃದ್ಧಿಯ ಲಕ್ಷಣವಲ್ಲವೆಂಬುದು ಪ್ರಜ್ಞಾವಂತ ಯುವಜನರ ಆಕ್ರೋಶಕ್ಕೆ ಕಾರಣವಾಗಿತ್ತು.

ಫ್ರಾನ್ಸಿನ ಪೆನ್‌ಶನ್ ವ್ಯವಸ್ಥೆಯನ್ನು ಮುಂದುವರೆಸಲು ಸಾಧ್ಯವಾಗಿಸಲು ಅದರಲ್ಲಿ ಕೆಲವು ಬದಲಾವಣೆಗಳು ಅಗತ್ಯವೆಂದು ಅಧ್ಯಕ್ಷ ಮ್ಯಾಕ್ರಾನ್ ಅವರ ಹಿಂದಿನ ಅಧ್ಯಕ್ಷಾವಧಿಯ ಪ್ರಸ್ತಾವವಾಗಿತ್ತು. ಈ ಬದಲಾವಣೆಗಳನ್ನು ಮಾಡದಿದ್ದರೆ ಪೆನ್‌ಶನ್ ವ್ಯವಸ್ಥೆ ಮುರಿದು ಬೀಳುತ್ತದೆಯೆಂಬುದು ಅವರ ವಾದವಾಗಿತ್ತು. 2019ರಲ್ಲಿ ಅದನ್ನು ಜಾರಿ ಮಾಡಲು ಹೊರಟಾಗ ಈಗಿನಂತೆ ತೀವ್ರ ವಿರೋಧದಿಂದಾಗಿ ಅದನ್ನು ಹಿಂದೆಗೆಯಬೇಕಾಗಿತ್ತು. ಈ ಬದಲಾವಣೆಗಳನ್ನು ಸರಕಾರ ಮಾಡಹೊರಟಿರುವುದು ಪ್ರಮುಖವಾಗಿ ಕಾರ್ಮಿಕರ ವೇತನದ ಭಾಗ (ಮತ್ತು ಉದ್ಯೋಗದಾತರ ಭಾಗ) ಗಳನ್ನು ಒಂದು ನಿಧಿಯಲ್ಲಿ ಹೂಡಿಕೆ ಮಾಡಿ ಅದರಿಂದ ಕೊಡಲಾಗುವ ಪೆನ್‌ಶನ್ ನಲ್ಲಿ. ಇದು ಪ್ರಮುಖವಾಗಿ ಕಾರ್ಮಿಕರದ್ದೇ ಹಣ ಎಂಬುದನ್ನು ಗಮನಿಸಬೇಕು.

“ಪೆನ್‌ಶನ್ ವ್ಯವಸ್ಥೆ ಮುರಿದು ಬೀಳುತ್ತದೆಯೆಂಬುದು ಬೊಗಳೆ. ಈಗಿರುವಂತೆ ಪೆನ್‌ಶನ್ ವ್ಯವಸ್ಥೆಯನ್ನು ಮುಂದುವರೆಸಲು ಮಾತ್ರವಲ್ಲ, ನಿವೃತ್ತಿ ವಯಸ್ಸನ್ನು 60ಕ್ಕೆ ಇಳಿಸಲು ಸಹ, ಹಲವು ವಿಧಾನಗಳಿವೆ. ಈ ➚

ಪೆರು: ಜನರ ಪ್ರತಿರೋಧ ಹತ್ತಿಕ್ಕಲು ಯು.ಎಸ್ ಪಡೆಗಳಿಗೆ ಆಹ್ವಾನ

ದಕ್ಷಿಣ ಅಮೆರಿಕಾದ ಪೆರು ವಿನಲ್ಲಿ ಶಾಲಾ ಶಿಕ್ಷಕ ನೊಬ್ಬ ಮತ್ತು ಆಳುವ ವರ್ಗಗಳಿಗೆ ಸೇರದ ಒಬ್ಬ ಎಡಪಂಥೀಯ ಅಧ್ಯಕ್ಷನಾಗಿ ಆಯ್ಕೆಯಾದ್ದು ಈಗ ಇತಿಹಾಸ. ಅದು ಇತ್ತೀಚಿನ ಇತಿಹಾಸವಾಗಿದ್ದರೂ, ಅದನ್ನು ನಿಜವಾಗಿಯೂ ಇತಿಹಾಸವಾಗಿಸಿದ್ದು ಆಳುವ ವರ್ಗಗಳ ಕಾನೂನುಬಾಹಿರ ಕ್ಷಿಪ್ರಕ್ರಾಂತಿ. ಪಾರ್ಲಿಮೆಂಟಿನಿಂದ ಅಧ್ಯಕ್ಷರ ವಜಾ ಮಾಡಿ, ಅಧ್ಯಕ್ಷರನ್ನು ಬಂಧಿಸಿ 18 ತಿಂಗಳುಗಳ ಶಿಕ್ಷೆ ವಿಧಿಸಿ ಉಪಾಧ್ಯಕ್ಷರು ಅಧಿಕಾರ ವಹಿಸಿಕೊಂಡ ದಿನದಿಂದ ಒಂದು ದಿನವೂ ಪೆರು ಶಾಂತವಾಗಿರಲಿಲ್ಲ. ದೇಶದಾದ್ಯಂತ ಪ್ರತಿಭಟನೆ, ಮೆರವಣಿಗೆಗಳು, ರಾಸ್ತಾ ರೋಕೊ, ವಿಮಾನ ನಿಲ್ದಾಣಗಳಿಗೆ ದಿಗ್ಬಂಧನ–ಹೀಗೆ ಹತ್ತು ಹಲವು ವಿಧಾನಗಳಲ್ಲಿ ಪ್ರತಿಭಟನೆ ನಡೆದಿದೆ.

ಈ ಪ್ರತಿರೋಧವನ್ನು ಪೋಲಿಸ್, ಮಿಲಿಟರಿ ಬಳಸಿ ಹಿಂಸಾತ್ಮಕವಾಗಿ ದಮನ ಮಾಡಲಾಗುತ್ತಿದೆ. ಕಳೆದ 5–6 ವಾರಗಳಿಂದ ನಡೆಯುತ್ತಿರುವ ಈ ದಮನಚಕ್ರದಲ್ಲಿ ಈ ವರೆಗೆ 60 ಜನ ಸತ್ತಿದ್ದಾರೆ. ಸಾವಿರಾರು ಜನ ಗಾಯಗೊಂಡಿದ್ದಾರೆ. ನೂರಾರು ಜನರನ್ನು ಬಂಧಿಸಲಾಗಿದೆ. ಕೆಲವು ದಿನಗಳ ನಂತರ ಈ ಪ್ರತಿಭಟನೆಗಳು ನಿಂತು ಹೋಗುತ್ತವೆ ಎಂಬ ಪೆರು ಸರಕಾರದ ಮತ್ತು ಅದರ ಬೆಂಬಲಿಗ ಯು.ಎಸ್ ನಿರೀಕ್ಷೆ ಸುಳ್ಳಾಗಿದೆ. ಬದಲಿಗೆ ಪ್ರತಿಭಟನೆಗಳು ಇನ್ನಷ್ಟು ವ್ಯಾಪಕವಾಗಿವೆ, ಧೃಢಚಿತ್ತ ಪ್ರದರ್ಶಿಸಿವೆ.

ಈ ವರೆಗಿನ ಪ್ರತಿಭಟನೆಗಳಿಗೆ ಶಿಖರಪ್ರಾಯವೆಂಬಂತೆ ಜನವರಿ 19ರಂದು ಪೆರು ವಿನ “ನಾಲ್ಕು ಮೂಲೆಗಳಿಂದ ಜಾಥಾ” ಮತ್ತು ರಾಜಧಾನಿ “ಲಿಮಾವನ್ನು ವಶಪಡಿಸಿಕೊಳ್ಳುವ” ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು. ಪೆರು ವಿನ ಮೂಲೆ ಮೂಲೆಗಳಿಂದ ಬಂದ ರೈತರು, ವಿದ್ಯಾರ್ಥಿಗಳು, ಕಾರ್ಮಿಕರು, ಮಹಿಳೆಯರು ರಾಜಧಾನಿ ಲಿಮಾ ತುಂಬಾ ಬೀಡು ಬಿಟ್ಟಿದ್ದಾರೆ. ಲಿಮಾ ದ ಬೀದಿಗಳು, ಚೌಕಗಳು, ವೃತ್ತಗಳು ಅವರಿಂದ ತುಂಬಿವೆ. ಅವರು ಸರಕಾರಿ ಆಫೀಸುಗಳಿಗೆ ಪ್ರವೇಶಕ್ಕ ಅಡ್ಡಿಯಾಗಿ ಕೂತಿದ್ದಾರೆ. ಅವರಿಗೆ ರಾಜಧಾನಿಯ ಜನತೆ ಮತ್ತು ಸಾಮಾಜಿಕ ಚಳುವಳಿಗಳು ಊಟ ಒದಗಿಸುತ್ತಿವೆ. ಶಾಲಾ ಕಾಲೇಜುಗಳಲ್ಲಿ ಅವರಿಗೆ ತಂಗಲು ವ್ಯವಸ್ಥೆ ಮಾಡಲಾಗಿದೆ. ಅವರು ರಾಜಧಾನಿ ಯನ್ನು ಇನ್ನೂ ‘ವಶಪಡಿಸಿ” ಕೊಳ್ಳದಿದ್ದರೂ, ಹೆಚ್ಚು ಕಡಿಮೆ ಸ್ತಬ್ಧಗೊಳಿಸಿದ್ದಾರೆ.



ಈವರೆಗಿನ ಪ್ರತಿಭಟನೆಗಳು ಮತ್ತು “ಲಿಮಾ ವಶಫಡಿಸಿಕೊಳ್ಳುವ” ಈಗಿನ ಕಾರ್ಯಕ್ರಮ ಈ ನಾಲ್ಕು ಹಕ್ಕೊತ್ತಾಯಗಳನ್ನು ಮಂಡಿಸಿವೆ:

1. ಕಾನೂನು–ಬಾಹಿರರಾಗಿ ಅಧ್ಯಕ್ಷರಾದ ದಿನಾ ಬೊಲುಆರ್ತೆಯ ರಾಜೀನಾಮೆ
2. ಜೈಲಿನಲ್ಲಿರುವ ಅಧ್ಯಕ್ಷ ಪೆದ್ರೊ ಕ್ಯಾಸ್ಟಿಲೊ ಬಿಡುಗಡೆ
3. ಪಾರ್ಲಿಮೆಂಟಿನ ವಿಸರ್ಜನೆ ಮತ್ತು 2023ರಲ್ಲೇ ಚುನಾವಣೆ
4. ಚುನಾವಣೆ ಜತೆಗೆ ಹೊಸ ಸಂವಿಧಾನ ಬರೆಯಲು ಸಂವಿಧಾನ ಸಭೆ ರಚಿಸಲು ಜನಮತ ಸಂಗ್ರಹ “ಲಿಮಾವನ್ನು ವಶಪಡಿಸಿಕೊಳ್ಳುವ” ಜನತೆಯ ಕಾರ್ಯಕ್ರಮವನ್ನು ನಿಗ್ರಹಿಸುವುದು, ನಿಭಾಯಿಸುವುದು ಪೆರು ಸರಕಾರಕ್ಕೆ ಸವಾಲಾಗಿದೆ. ಸರಕಾರ 12 ಸಾವಿರ ಪೋಲಿಸರನ್ನು ಈಗಾಗಲೇ ಲಿಮಾದಲ್ಲಿ ಹಾಕಿದ್ದು, ಇನ್ನೂ 14 ಸಾವಿರ ಪಡೆಗಳನ್ನು ಹಾಕಲು ಸಿದ್ಧಪಡಿಸುತ್ತಿದೆ ಎಂದು ವರದಿಯಾಗಿದೆ.

ಸರಕಾರಕ್ಕೆ ಇಷ್ಟು ಪಡೆಗಳಿಂದಲೂ ರಾಜಧಾನಿಯ ಬಹುಸಂಖ್ಯಾತ ಜನತೆಯ ಬೆಂಬಲವಿರುವ ಈ ದೃಢಚಿತ್ತದ ಚಳುವಳಿಗಾರರನ್ನು ನಿಭಾಯಿಸುವುದು ಕಷ್ಟವೆಂಬ ಅರಿವಿದೆ. ಹಾಗಾಗಿಯೇ, “ವಿದೇಶೀ ನೌಕಾಪಡೆ ಮತ್ತು ಮಿಲಿಟರಿ ಪಡೆಗಳನ್ನು ಅವರ ಶಸ್ತ್ರಾಸ್ತ್ರಗಳೊಂದಿಗೆ ದೇಶಕ್ಕೆ ಪ್ರವೇಶ ಮಾಡಲು ಅವಕಾಶ ಮಾಡಿಕೊಡುವ’ ಒಂದು ಕರಡು ಮಸೂದೆಯನ್ನು, ಜನವರಿ 18 ರಂದು ಹಂಗಾಮಿ ಅಧ್ಯಕ್ಷರು ಪೆರು ಪಾರ್ಲಿಮೆಂಟಿನ ಮುಂದೆ ಮಂಡಿಸಿದ್ದಾರೆ. ಇಲ್ಲಿ ‘ಯಾವ ವಿದೇಶೀ ಪಡೆಗಳು” ಎಂದು ಊಹಿಸುವ ಅಗತ್ಯವಿಲ್ಲ. ಏಕೆಂದರೆ ಯು.ಎಸ್ ದಕ್ಷಿಣ ಕಮಾಂಡ್ ನ (ಇಡೀ ದಕ್ಷಿಣ ಅಮೆರಿಕ ಇದರ ವ್ಯಾಪ್ತಿಗೆ ಬರುತ್ತದೆ) ಮುಖ್ಯಸ್ಥೆ ಜನರಲ್ ಲಾರಾ ರಿಚರ್ಡ್ ಸನ್ ಜನವರಿ 19ರಂದು ಪತ್ರಿಕೆಗೆ ಕೊಟ್ಟ ಸಂದರ್ಶನವೊಂದರಲ್ಲಿ “ಈ ಪ್ರದೇಶ ನಮಗೆ ಮತ್ತು ನಮ್ಮ ರಾಷ್ಟ್ರೀಯ ಭದ್ರತೆಗೆ ಬಹಳ ಮುಖ್ಯವಾದದ್ದು, ನಾವು ಯಾವುದೇ ಪರಿಸ್ಥಿತಿಗೆ ಸಿದ್ಧವಾಗಿರಬೇಕಾಗಿದೆ” ಎಂದಿದ್ದಾರೆ. ಯಾಕೆ ಮುಖ್ಯವೆಂಬುದಕ್ಕೆ ಕಾರಣವನ್ನು ಸಹ ತಿಳಿಸಿದ್ದಾರೆ. ಯಾಕೆಂದರೆ ಇಲೆಕ್ಟ್ರಿಕ್ ವಾಹನಗಳಿಗೆ ಬೇಕಾಗಿರುವ ರೀಚಾರ್ಜಬಲ್ ಬ್ಯಾಟರಿಗಳಿಗೆ ಬೇಕಾಗುವ ಲಿಥಿಯಂ ಇರುವ ದೇಶಗಳ ತ್ರಿಕೋಣ ಇಲ್ಲಿದೆ.

ಸದ್ಯದಲ್ಲೇ ಪೆರುವಿನಲ್ಲಿ ಯು.ಎಸ್ ಮಿಲಿಟರಿ ಮಧ್ಯಪ್ರವೇಶ ಮಾಡುವ ಸ್ಪಷ್ಟ ಸೂಚನೆಗಳಿವೆ. ಅದಕ್ಕೆ ಪ್ರತಿರೋಧವೂ ಇರುತ್ತದೆ ಎಂಬುದು ಖಚಿತ. 1973ರ ಚಿಲಿಯ ನರಮೇಧದ 50ನೆಯ ವಾರ್ಷಿಕದಲ್ಲಿ ಅದು ಪೆರುವಿನಲ್ಲಿ ಪುನರಾವರ್ತನೆಯಾಗುವುದೇ?

ಕುರಿತು ನಾವು ಸರಕಾರದ ಜತೆ ಚರ್ಚೆಗೆ ಸಿದ್ಧ. ಆದರೆ ಸರಕಾರ ಅದಕ್ಕೆ ಸಿದ್ಧವಿಲ್ಲ. ಈ ಅನ್ಯಾಯಯುತ ಕ್ರೂರ ಬದಲಾವಣೆಗಳನ್ನು ಹೊರಿಸಲು ಪ್ರಯತ್ನಿಸುತ್ತಿದೆ" ಎಂದು ಪ್ರಮುಖ ಕೇಂದ್ರೀಯ ಟ್ರೇಡ್ ಯೂನಿಯನ್ ಸಿಜಿಟಿ ಹೇಳಿದೆ. ಕಾರ್ಮಿಕರು, ಯುವಜನರು ಮತ್ತು ಜನತೆಯಲ್ಲಿ ಕಂಡು ಬಂದ ಅಭೂತಪೂರ್ವ ಐಕ್ಯತೆಗೆ, ಮ್ಯಾಕ್ರಾನ್ ಅವರ ಪೆನ್‌ಶನ್ ಯೋಜನೆ "ಎಲ್ಲರ ಆತಂಕ, ಅಸಮಾಧಾನಗಳನ್ನು ಒಟ್ಟಾಗಿ ಕಟ್ಟಿಬಿಟ್ಟದ್ದು ಕಾರಣ" ವೆಂದೂ ಸಿಜಿಟಿ ಹೇಳಿದೆ.

"ಮ್ಯಾಕ್ರಾನ್ ಫ್ರಾನ್ಸಿನ ಜನತೆಗೆ ಸವಾಲೆಸೆದಿದ್ದರು. ಅದಕ್ಕೆ ಫ್ರಾನ್ಸಿನ ಜನತೆ ಸ್ಪಷ್ಟ ಮತ್ತು ಪ್ರಬಲ ಉತ್ತರ ಕೊಟ್ಟಿದ್ದಾರೆ. 'ನಮಗೆ ಈ ಪೆನ್‌ಶನ್ ಸುಧಾರಣೆ ಬೇಡ !' ಎಂಬುದೇ ಆ ಉತ್ತರ" ಕಾರ್ಮಿಕರು ಈ 'ಸುಧಾರಣೆ'ಗಳಿಂದ ತಮಗಾಗಲಿರುವ ನಷ್ಟವನ್ನು ಮನಗಂಡಿದ್ದಾರೆ." ಎಂದು ವ್ಯಾಪಕ ಪ್ರದರ್ಶನಗಳ ನಂತರ ಜನತೆಯನ್ನು ಅಭಿನಂದಿಸಿ ಹೇಳಿಕೆ ನೀಡಿದ ಫ್ರೆಂಚ್ ಕಮ್ಯೂನಿಸ್ಟ್ ಪಕ್ಷ, "ಅಧ್ಯಕ್ಷ ಮ್ಯಾಕ್ರಾನ್ ಈ ಪೆನ್‌ಶನ್ ಬದಲಾವಣೆಗಳನ್ನು ಹಿಂತೆಗೆದುಕೊಳ್ಳಬೇಕು ಅಥವಾ ಇದನ್ನು ಜನಮತ ಸಂಗ್ರಹಕ್ಕೆ ಹಾಕಬೇಕು" ಎಂದು ಒತ್ತಾಯಿಸಿದೆ.

ಸೋವಿಯೆಟ್ ಒಕ್ಕೂಟದ ನಾಯಕತ್ವದ ಸಮಾಜವಾದಿ ಬಣದ ಜತೆ ಬಂಡವಾಳಶಾಹಿ ಪಾಶ್ಚಿಮಾತ್ಯ ದೇಶಗಳ ಶೀತಲ ಸಮರದ ಪೈಪೋಟಿಯಿಂದಾಗಿ ಮೇಲುಗೈ ಸಾಧಿಸಿದ್ದ ಪಶ್ಚಿಮ ಯುರೋಪಿನ ಕಾರ್ಮಿಕರು ತಮ್ಮ ಹೋರಾಟಗಳಿಂದ ಗಳಿಸಿದ್ದ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಕ್ರಮಗಳನ್ನು, ಸೋವಿಯೆಟ್ ಪತನದ ನಂತರ ಒಂದೊಂದಾಗಿ ಕಳಕೊಳ್ಳಲಾರಂಭಿಸಿದ್ದರು. ಯುರೋ ಕೂಟದ ಹಲವು ದೇಶಗಳಲ್ಲಿ 'ಆರ್ಥಿಕ ಬಿಕ್ಕಟ್ಟು ಪರಿಹಾರಕ್ಕಾಗಿ ಮಿತವ್ಯಯ'ದ ಹೆಸರಲ್ಲಿ ಕಳೆದ ಒಂದು ದಶಕದಲ್ಲಿ ಕಾರ್ಮಿಕರ ಆದಾಯ, ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಕ್ರಮಗಳ ಮೇಲೆ ಭೀಕರ ದಾಳಿ ನಡೆಯುತ್ತಿದೆ. ಫ್ರಾನ್ಸ್ ಮತ್ತು ಯುರೋಪಿಯನ್ ಕೂಟದ ಇತರ ಹಲವು ದೇಶಗಳಲ್ಲಿ 'ಪೆನ್‌ಶನ್ ಸುಧಾರಣೆಗಳ' ಹೆಸರಲ್ಲಿ ಪೆನ್‌ಶನ್ ವ್ಯವಸ್ಥೆಯ ಮೇಲೆ ದಾಳಿ ನಡೆಯುತ್ತಿದೆ. ಫ್ರಾನ್ಸ್ ನಲ್ಲಿ ಕಾರ್ಮಿಕ ವರ್ಗ ಅತ್ಯಂತ ಸಂಘಟಿತವಾಗಿರುವುದರಿಂದ ಅದರ ವಿರುದ್ಧ ಪ್ರತಿರೋಧ ಸಹ ಅಷ್ಟೇ ತೀವ್ರವಾಗಿದೆ. ಹಾಗಾಗಿಯೇ ಪೆನ್‌ಶನ್ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಧಿಕ್ಕರಿಸಿ ಹೋರಾಡುತ್ತಿರುವ ಫ್ರೆಂಚ್ ಕಾರ್ಮಿಕರು, ಯುವಜನ ಮತ್ತು ಜನತೆಗೆ, ಗ್ರೀಸ್, ಬೆಲ್ಜಿಯಂ, ಇಟಲಿ, ಯುಕೆ ಮತ್ತಿತರ ಯುರೋಪಿನ ಕಾರ್ಮಿಕರ, ಪ್ರಗತಿಪರ ಚಳುವಳಿಗಳಿಂದ ಜನತೆಯಿಂದ ಸೌಹಾರ್ದ ಬೆಂಬಲ ಹರಿದು ಬಂದಿದೆ.

ಅಂಗನವಾಡಿ ಮುಖಂಡರ ಮೇಲೆ ಪ್ರಕರಣ ದಾಖಲು

ಅಂಗನವಾಡಿ ನೌಕರರನ್ನು ಶಿಕ್ಷಕಿಯರೆಂದು ಪರಿಗಣಿಸಬೇಕು. ಗ್ರ್ಯಾಚ್ಯುಟಿ ಪಾವತಿಸ ಬೇಕು' ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದ ಸಂಘಟನೆಯ ನಾಯಕರ ಮೇಲೆ ಉಪ್ಪಾರಪೇಟೆ ಪೋಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

10 ದಿನಗಳ ಕಾಲ ನಡೆದ 'ಪ್ರತಿಭಟನೆ ಸಂದರ್ಭದಲ್ಲಿ ಹೈಕೋರ್ಟ್ ನೀಡಿರುವ ಆದೇಶ ಉಲ್ಲಂಘಿಸಿದ್ದಾರೆ, ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ್ದರು. ಹೀಗಾಗಿ, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅನಿರ್ಧಿಷ್ಟಾವಧಿ ಪ್ರತಿಭಟನೆಯ ಕರೆಗೆ ಓಗೊಟ್ಟು ರಾಜ್ಯದ ಹಲವು ಕಡೆಗಳಿಂದ ಒಂದು ದಿನ ಮೊದಲೇ ಸಾವಿರಾರು ಅಂಗನವಾಡಿ ನೌಕರರು ಬೆಂಗಳೂರಿಗೆ ಬಂದಿದ್ದರೆ, ಪ್ರತಿಭಟನೆಯ ದಿನ ರೈಲು, ಬಸ್ಸುಗಳಲ್ಲಿ ಸಮರೋಪಾದಿಯಲ್ಲಿ ಬೆಂಗಳೂರಿಗೆ ಬಂದರು. ಸ್ವಾತಂತ್ರ ಉದ್ಯಾನವನದಲ್ಲಿ ಪೋಲೀಸರು ಸೂಚಿಸಿದ ಜಾಗ ಹಿಡಿಸಲಾರದಷ್ಟು ಮಹಿಳೆಯರು. ಸಾವಿರಾರು ಮಹಿಳೆಯರು ಪಕ್ಕದ ಶೇಷಾದ್ರಿ ಜೋಡಿ ರಸ್ತೆಯ ಒಂದು ಭಾಗದಲ್ಲಿ ಕುಳಿತರೆ, ಉದ್ಯಾನದ ಮತ್ತೊಂದು ಬದಿಯ ಕಾಳಿದಾಸ ಜೋಡಿ ರಸ್ತೆ ಸಂಪೂರ್ಣವಾಗಿ ಪ್ರತಿಭಟನಾಕಾರರಿಂದ ತುಂಬಿಹೋಗಿತ್ತು. ಹೈಕೋರ್ಟ್ ಆದೇಶದಂತೆ ಸ್ವಾತ್ಯಂತ್ರ ಉದ್ಯಾನವದಲ್ಲಿ ಮೀಸಲಿರುವ ಪ್ರತಿಭಟನಾ ಸ್ಥಳ ಬಿಟ್ಟು ಬೆಂಗಳೂರಿನ ಬೇರೆಲ್ಲೂ ಪ್ರತಿಭಟನೆ ನಡೆಸುವಂತಿಲ್ಲ. ಮೆರವಣಿಗೆ ನಡೆಸುವಂತಿಲ್ಲ. ಪ್ರತಿಭಟನೆಗಾಗಿ ಯಾವುದೇ ರಸ್ತೆಗಳ ಸಂಚಾರವನ್ನು ಮುಚ್ಚುವಂತಿಲ್ಲ. ಆದರೆ, ಪ್ರತಿಭಟನಾಕಾರರ ಸಂಖ್ಯೆ ಹೆಚ್ಚಿದ್ದರಿಂದ ರಸ್ತೆಯಲ್ಲಿ ಕುಳಿತುಕೊಳ್ಳದೆ ಬೇರೆ ದಾರಿಯೇ ಇರಲಿಲ್ಲ.

ಪ್ರತಿಭಟನೆ ಮುಗಿದ ನಂತರ ಸಂಘದ ಮುಖಂಡರ ಮೇಲೆ ಪೊಲೀಸರು ಪ್ರಕರಣ ದಾಖಲು ಮಾಡಿದ್ದಾರೆ. 'ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿ, ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ, ಮುಖಂಡರಾದ ಶಾಂತಾ ಘಂಟಿ, ಜಿ. ಕಮಲಾ ಹಾಗೂ ಜಿಲ್ಲಾ ಘಟಕಗಳ ಪ್ರಮುಖರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ' ಎಂದು ತಿಳಿದುಬಂದಿದೆ.

ನಾವು ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದೇವೆ. ದೂರು ದಾಖಲಿಸುವ ಮೂಲಕ ಹೆದರಿಸುವ ಮತ್ತು ಪ್ರತಿಭಟನೆಯ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನವನ್ನು ಸರಕಾರ ಮಾಡಿದೆ. ಈ ದೂರುಗಳಿಗೆ ಹೆದರುವುದಿಲ್ಲ. ಪ್ರತಿಭಟನೆ ನಮ್ಮ ಹಕ್ಕು ಎಂದು ವರಲಕ್ಷ್ಮಿ ಜನಶಕ್ತಿ ಪತ್ರಿಕೆಗೆ ಪ್ರತಿಕ್ರಿಯಿಸಿದ್ದಾರೆ.

'ಬಾಡಿಗೆ ಸರಕು' ಎಂಬ ಪರಿಕಲ್ಪನೆ..... ಪುಟ 13 ರಿಂದ

ಅಂತೆಯೇ, ಬಂಡವಾಳದ ಕ್ರೋಢೀಕರಣವು ಮೆಟ್ರೊಪಾಲಿಟನ್ ದೇಶಗಳ ಸೀಮಿತ ಭೂಪ್ರದೇಶದಲ್ಲಿ ಉತ್ಪತ್ತಿಯಾಗುವ ಕೇವಲ ಕಚ್ಚಾ ವಸ್ತುಗಳನ್ನು ಸಂಸ್ಕರಿಸುವ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಹತ್ತಿ ಜವಳಿ ಉದ್ಯಮದಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಯೊಂದಿಗೆ ಕೈಗಾರಿಕಾ ಬಂಡವಾಳಶಾಹಿಯು ತನಗೆ ಸಲ್ಲಬೇಕಾದ ಗೌರವವನ್ನು ಪಡೆದುಕೊಂಡಿತು. ಆದರೆ, ಕೈಗಾರಿಕಾ ಕ್ರಾಂತಿ ನಡೆದ ಶೀತ ಸಮಶೀತೋಷ್ಣ ಪ್ರದೇಶಗಳು ಹತ್ತಿಯನ್ನು ಉತ್ಪಾದಿಸುವುದು ಎಂದಿಗೂ ಸಾಧ್ಯವಾಗಲಿಲ್ಲ. ಆದ್ದರಿಂದ, ಬಂಡವಾಳಶಾಹಿಯು ಆರಂಭದಿಂದಲೂ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಮೂಲಕ ಪಡೆದುಕೊಂಡ ಇತರ ಪ್ರದೇಶಗಳ ಕಚ್ಚಾ ವಸ್ತುಗಳ (ಮತ್ತು ಆಹಾರ ಧಾನ್ಯಗಳ) ಮೇಲೆಯೇ ಅವಲಂಬಿತವಾಗಿತ್ತು. ಬಂಡವಾಳ ಕ್ರೋಢೀಕರಣಕ್ಕೆ ಸಂಬಂಧಿಸಿದಂತೆ ಮೆಟ್ರೊಪಾಲಿಟನ್ ದೇಶಗಳ ಸೀಮಿತ ಭೂಭಾಗವು ಎಂದಿಗೂ ಕಳವಳಪಡುವ ವಿಷಯವಾಗಲಿಲ್ಲ.

ವಸಾಹತುಶಾಹಿ ಕಾಲದಲ್ಲಿ, ವಸಾಹತುಗಳಿಂದ ಸಾಕಷ್ಟು ಆಹಾರ ಧಾನ್ಯಗಳು ಮತ್ತು ಕಚ್ಚಾ ವಸ್ತುಗಳನ್ನು ಪುಕ್ಕಟೆಯಾಗಿ ಒಯ್ಯಲಾಗುತ್ತಿತ್ತು. ವಸಾಹತುಗಳ ವಿಮೋಚನೆಯ ನಂತರ, ಅಲ್ಲಿಂದ ಮೆಟ್ರೊಪಾಲಿಟನ್ ಕೇಂದ್ರಗಳಿಗೆ ಅನೇಕ ನೆಪಗಳ ಅಡಿಯಲ್ಲಿ ಮಿಗುತಾಯದ ಹರಿವು ಇನ್ನೂ ಮುಂದು ವರೆಯುತ್ತಿದೆಯಾದರೂ, ಅಂತಹ ಏಕಪಕ್ಷೀಯ ವರ್ಗಾವಣೆಗಳ ಪ್ರಮಾಣವು ಕುಸಿದಿದೆ. ಆದರೆ ಆ ವೇಳೆಗಾಗಲೇ ಹಿಂದಿನ ವಸಾಹತುಗಳಲ್ಲಿ ಉತ್ಪಾದನೆಯಾದ ಕಚ್ಚಾವಸ್ತುಗಳ ಮತ್ತು ಆಹಾರ ಧಾನ್ಯಗಳ ಬೆಲೆಗಳನ್ನು ಎಷ್ಟೊಂದು ಅದುಮಿಡಲಾಗಿತ್ತೆಂದರೆ, ಅಂತಹ ಆಮದುಗಳಿಗೆ ಹಣ ಪಾವತಿಸುವುದು ಮೆಟ್ರೊಪಾಲಿಟನ್ ದೇಶಗಳಿಗೆ ಹೊರೆಯಾಗಲಿಲ್ಲ.

ವಾಸ್ತವವಾಗಿ ಇಲ್ಲಿ ನಾವು ರಿಕಾರ್ಡಿಯನ್ ವಾದದ ನೇರ ನಿರಾಕರಣೆಯನ್ನು ಕಾಣುತ್ತೇವೆ. ಸೀಮಿತ ಭೂಭಾಗವು ಒಂದು ಬಾಡಿಗೆ ಸರಕಾಗಿರುವುದರಿಂದ, ವ್ಯಾಪಾರದ ನಿಯಮಗಳು ಕೃಷಿ ಸರಕುಗಳ ಪರವಾಗಿ (ಈ ಸೀಮಿತ ಭೂ ಭಾಗದ ಉತ್ಪನ್ನಗಳ ಪರವಾಗಿ) ಮತ್ತು ತಯಾರಿಕಾ ಸರಕುಗಳ ವಿರುದ್ಧವಾಗಿ ಚಲಿಸುತ್ತವೆ ಎಂದು ರಿಕಾರ್ಡೊ ನಂಬಿದ್ದರು. ಆದರೂ, ಬಂಡವಾಳಶಾಹಿಯ ಇತಿಹಾಸದುದ್ದಕ್ಕೂ (ಯುದ್ಧಗಳಂತಹ ಅಸಾಧಾರಣ ಅವಧಿಗಳನ್ನು ಹೊರತುಪಡಿಸಿ), ವ್ಯಾಪಾರದ ನಿಯಮಗಳು ಪ್ರಾಥಮಿಕ ಸರಕುಗಳ ವಿರುದ್ಧವಾಗಿ ಮತ್ತು ತಯಾರಿಕಾ ಸರಕುಗಳ ಪರವಾಗಿ ಚಲಿಸುತ್ತಿರುವುದನ್ನು ನಾವು ಕಾಣುತ್ತೇವೆ. ಈ ವಿದ್ಯಮಾನವು ರಿಕಾರ್ಡೊ ಹೇಳಿದ ಅಂಶಗಳಿಗೆ ಬದಲಾಗಿ ಇತರ ಅಂಶಗಳು ಕಾರ್ಯಪ್ರವೃತ್ತವಾಗಿವೆ ಎಂಬುದನ್ನು ಸೂಚಿಸುತ್ತದೆ.

ಸ್ಥಳೀಯ ಜನರಿಂದ ಕೃಷಿ ಸರಕುಗಳ ಆಂತರಿಕ ಬಳಕೆಯನ್ನು ಹಿಂಡುವ ಮೂಲಕ ಅವುಗಳ ಉತ್ಪಾದನೆಯು (ಸೀಮಿತ ಭೂ ಭಾಗದಿಂದಾಗಿ) ನಿಗದಿತವಾಗಿದ್ದರೂ ಸಹ, ಮೆಟ್ರೋಪಾಲಿಟನ್ ದೇಶಗಳಿಗೆ ಅಗತ್ಯವಾದ ಆ ಸರಕುಗಳ ಸರಬರಾಜನ್ನು ಪಡೆಯಲು ಸಾಧ್ಯವಾದರೆ, ಉಷ್ಣವಲಯಗಳು ಮತ್ತು ಉಪ ಉಷ್ಣವಲಯಗಳಲ್ಲಿನ ಭೂಭಾಗದ ಸೀಮಿತತೆಯು ಪ್ರಸ್ತುತವಾಗುವುದಿಲ್ಲ. ಸಮಕಾಲೀನ ಸಾಮ್ರಾಜ್ಯಶಾಹಿಯು ಅಂತಹ ಹಿಂಡಿಕೆಯನ್ನು ಇನ್ನು ಮುಂದೆ ನೇರರಾಜಕೀಯ ನಿಯಂತ್ರಣದ ಮೂಲಕವಲ್ಲ, ಬದಲಿಗೆ, ಈ ದೇಶಗಳ ಮೇಲೆ ನವ ಉದಾರವಾದಿ ನೀತಿಗಳನ್ನು ಹೇರುವ ಮೂಲಕ ವಿಧಿಸುತ್ತದೆ. ಈ ನವ ಉದಾರವಾದಿ ನೀತಿಗಳು, ಯಾವುದೇ ಕೃಷಿ ಸರಕುಗಳಿಗೆ ಸ್ಥಳೀಯವಾಗಿ ಹೆಚ್ಚಿನ ಬೇಡಿಕೆ ಇದ್ದರೆ, "ಮಿತವ್ಯಯ" ನೀತಿಯನ್ನು ಹೇರುವ ಮೂಲಕ ಅಂತಹ ಸ್ಥಳೀಯ ಬಳಕೆಯನ್ನು ತಗ್ಗಿಸುವ ಒಂದು ಅಂತರ್ನಿರ್ಮಿತ ಕಾರ್ಯವಿಧಾನವನ್ನು ಹೊಂದಿವೆ. ಆದ್ದರಿಂದ, ಮೆಟ್ರೋಪಾಲಿಟನ್ ದೇಶಗಳಿಗೆ ಅಂತಹ ಸರಕುಗಳು ರಿಕಾರ್ಡೊ ಕಲ್ಪಿಸಿಕೊಂಡಿದ್ದಂತೆ "ಬಾಡಿಗೆ ಸರಕು"ಗಳಾಗುವುದು ನಿಲ್ಲುತ್ತದೆ. ಬಂಡವಾಳಶಾಹಿಗೆ ಯಾವುದೇ ಬಾಡಿಗೆ ಸರಕುಗಳಿಲ್ಲ ಎಂದು ಖಚಿತಪಡಿಸಿಕೊಳ್ಳುವ ಒಂದು ಸಾಧನವೇ ಸಾಮ್ರಾಜ್ಯಶಾಹಿ.

ಹಿಂಡೆನ್‌ಬರ್ಗ್ ವರದಿ: ಅದಾನಿ ಸಮೂಹದ ಅಕ್ರಮ, ವಂಚನೆಗಳ ಚಿತ್ರ

ಪುಟ 9 ರಿಂದ

* ಅದಾನಿ ಮಾಲೀಕತ್ವದ ವಿವಿಧ ಘಟಕಗಳು ತಮ್ಮ ತಮ್ಮಲ್ಲೇ ನಡೆಸುತ್ತಿದ್ದ ಸಾಲ ನೀಡಿಕೆ ಮತ್ತು ಮರು ಪಾವತಿಯ ವ್ಯವಹಾರಗಳ ಜಾಲದ ಬಗ್ಗೆ 2019 ರಲ್ಲಿ, ಭಾರತೀಯ ಸುದ್ದಿವಾಹಿನಿ Scroll.in ಅದಾನಿ ಸಮೂಹದ ತನಿಖೆಯನ್ನು ಪ್ರಕಟಿಸಿದೆ.

* ಸೆಪ್ಟೆಂಬರ್ 2022 ರಲ್ಲಿ ಫಿಚ್ ಗ್ರೂಪ್‌ನ ಕ್ರೆಡಿಟ್ ಸೈಟ್ ಅದಾನಿ ಸಮೂಹ "ಮಿತಿ ಮೀರಿದ ಸಾಲದ ಸುಳಿಯಲ್ಲಿದೆ" ಎಂದು ಎಚ್ಚರಿಕೆ ನೀಡಿತ್ತು.

ಕಾರ್ಪೊರೇಟ್–ಕೋಮುವಾದಿ ನಂಟು

ಈ ನಡುವೆ ಅದಾನಿ ಸಮೂಹವು ಹಿಂಡನ್ ಬರ್ಗ್ ವರದಿಯಲ್ಲಿ ಮಾಡಿರುವ ಆರೋಪಗಳ ಬಗ್ಗೆ ಉತ್ತರ ನೀಡುವ ಸಂಧರ್ಭದಲ್ಲಿ "ಇದು ಭಾರತದ ಮೇಲೆ ನಡೆಸಲಾದ ಧಾಳಿ" ಎಂದಿದೆ. ಇದರ ಬೆನ್ನಲ್ಲೇ, ಸಂಘ ಪರಿವಾರದ ಭಾಗವಾದ "ಸ್ವದೇಶೀ ಜಾಗರಣ್ ಮಂಚ್" ತಾನು ಅದಾನಿ ಗುಂಪಿನ ಬೆಂಬಲಕ್ಕೆ ನಿಲ್ಲುತ್ತೇನೆ ಎಂದು ಪತ್ರಿಕಾ ಹೇಳಿಕೆ ಕೊಟ್ಟಿರುವುದು, ಸಾಮಾಜಿಕ ಜಾಲತಾಣಗಳಲ್ಲಿ, ಆಳುವ ಪಕ್ಷದ ತುತ್ತೂರಿಗಳು, ಅದಾನಿಯನ್ನು ಒಬ್ಬ ಮಹಾನ್ ದೇಶ ನಿರ್ಮಾತೃ ಎಂಬಂತೆ ಬಿಂಬಿಸುವ ಹಲವಾರು ಪೋಸ್ಟ್ ಗಳನ್ನು ಹರಿಯ ಬಿಟ್ಟಿರುವುದು "ಕಾರ್ಪೊರೇಟ್– ಕೋಮುವಾದಿ" ಅಪವಿತ್ರ ನಂಟಿನ ನಗ್ನ ಸ್ವರೂಪವನ್ನು ಬಟಾ ಬಯಲು ಮಾಡಿದೆ.

ಅದಾನಿ ಸಂಸ್ಥೆಗಳ ಅವ್ಯವಹಾರಗಳ ಬಗ್ಗೆ ಜಂಟಿ ಸಂಸದೀಯ ಸಮಿತಿ ಅಥವಾ ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ವಿಸ್ತತ ತನಿಖೆಗಾಗಿ ಪ್ರಮುಖ ವಿರೋಧ ಪಕ್ಷಗಳು ಈಗಾಗಲೇ ಆಗ್ರಹ ಪಡಿಸುತ್ತಿವೆ. ಈ ವಿಷಯದಲ್ಲಿ ದೇಶದ ದುಡಿಯುವ ವರ್ಗದ ಎಲ್ಲ ವಿಭಾಗಗಳು, ಸಾಮೂಹಿಕ ಸಂಘಟನೆಗಳು ಧ್ವನಿ ಗೂಡಿಸ ಬೇಕಾಗಿದೆ.

ದೇಶದ ಅರ್ಥವ್ಯವಸ್ಥೆಯನ್ನು ನವ ಉದಾರವಾದಿ ಹಣಕಾಸು ನೀತಿಗಳ ನೊಗದಿಂದ ಬಿಡಿಸಲು ಹಾಗೂ ಜನಪರ ಪರ್ಯಾಯಕ್ಕಾಗಿ ನಡೆಸುವ ವಿಶಾಲ ಸ್ತರದ ಹೋರಾಟದಿಂದ ಮಾತ್ರವೇ, ಸಾರ್ವಜನಿಕ ಸಂಪನ್ಮೂಲಗಳನ್ನು, ಕಾರ್ಪೊರೇಟ್ ಲೂಟಿಯಿಂದ ಉಳಿಸಲು ಸಾಧ್ಯ.

ಮಿತಿಮೀರಿದ ಬ್ಯಾಂಕ್ ಸಾಲಗಳ ಹೊರೆ:

ಬ್ಯಾಂಕ್ ಸಾಲದ ಪಾಲು ಅದಾನಿ ಪವರ್‌ನಲ್ಲಿ 67.6%, ಅದಾನಿ ಎಂಟರ್‌ಪ್ರೈಸಸ್ ನಲ್ಲಿ 43.7%, ಅದಾನಿ ಗ್ರೀನ್‌ನಲ್ಲಿ 43.3%. ಈ ಸಾಲಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳದ್ದೇ ಸಿಂಹ ಪಾಲು. ಮುಖ್ಯವಾಗಿ ದೇಶದ ಅತಿ ದೊಡ್ಡ ಬ್ಯಾಂಕ್ ಎಸ್‌ಬಿಐ ಒಂದೇ ಈ ಸಮೂಹಕ್ಕೆ ರೂ 21,000 ಕೋಟಿಯಷ್ಟು ಸಾಲವನ್ನು ನೀಡಿದರೆ, ಇನ್ನೊಂದು ಸಾರ್ವಜನಿಕ ಕ್ಷೇತ್ರದ ಬ್ಯಾಂಕ್ ಪಂಜಾಬ್ ನ್ಯಾಷನಲ್ ಬ್ಯಾಂಕ್ ನೀಡಿರುವ ಸಾಲದ ಪ್ರಮಾಣ ರೂ.7,000 ಕೋಟಿಯಷ್ಟು. ಸದ್ಯ ಎರಡೂ ಬ್ಯಾಂಕುಗಳು ತಮಗೆ ಯಾವುದೇ ಅಪಾಯವಿಲ್ಲ ಎಂದು ಹೇಳಿಕೆ ನೀಡಿವೆಯಾದರೂ, ಈ ಬೆಳವಣಿಗೆಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿರುವುದಾಗಿ ಹೇಳಿವೆ. ಈ ನಡುವೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಅದಾನಿ ಸಮೂಹಕ್ಕೆ ನೀಡಿರುವ ಸಾಲಗಳ ವಿವರವನ್ನು ಕೇಳಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE FEBRUARY 6-12, 2023 Price: Rs. 10/- Date of Publication: 3 FEBRUARY 2023 RNI No. KARKAN /2006/17926 Posted on 08-02-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಅಂಗನವಾಡಿ ನೌಕರರ ಹೋರಾಟಕ್ಕೆ ಐತಿಹಾಸಿಕ ಗೆಲುವು

ದಿಟ್ಟವಾದ ನಿಲುವು ಮತ್ತು ಛಲದೊಂದಿಗೆ ಒಗ್ಗಟ್ಟಿನಿಂದ ಹೋರಾಡಿದರೆ ಗೆಲುವು ನಿಶ್ಚಿತ ಎಂಬುದನ್ನು ಅಂಗನವಾಡಿ ನೌಕರರು ತಮ್ಮ ನಿರಂತರ ಹತ್ತು ದಿನಗಳ ಹೋರಾಟದ ಗೆಲುವಿನಿಂದ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಕೆಲವು ದಿನಗಳವರೆಗೂ ತಿರುಗಿಯೂ ನೋಡದ ರಾಜ್ಯ ಸರ್ಕಾರ ಮಹಿಳಾ ನೌಕರರ ಹೋರಾಟಕ್ಕೆ ಮಣಿದು ಅವರ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿದೆ.



ಜನವರಿ 23 ರಂದು ಸಿಐಟಿಯು ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಅನಿರ್ಧಿಷ್ಟಾವಧಿ ಪ್ರತಿಭಟನೆ ನಡೆಸಲು ಮುಂದಾದರು. ಎರಡು ದಿನಗಳ ಹಿಂದೆ ಮತ್ತೊಂದು ಸಂಘಟನೆಯ ನೇತೃತ್ವದಲ್ಲಿ ಇದೇ ಫ್ರೀಡಂ ಪಾರ್ಕ್ ನಲ್ಲಿ ಇವೇ ಬೇಡಿಕೆಗಳನ್ನು ಇಟ್ಟು ಅನಿರ್ಧಿಷ್ಟಾವಧಿ ಧರಣಿ ಕುಳಿತಿದ್ದ ಸಾವಿರಾರು ಅಂಗನವಾಡಿ ನೌಕರರನ್ನು ಕೇವಲ ಎರಡೇ ದಿನಗಳಲ್ಲಿ ಪೋಲೀಸರು ಬಂದಿಸುವ ಮೂಲಕ ಹೋರಾಟವನ್ನು ತಡೆದಿದ್ದರು. ಆದರೆ, ಇದ್ಯಾವುದಕ್ಕೂ ಸಿಐಟಿಯು ಸಂಘಟನೆಯ ಸದಸ್ಯರು ಬೆದರದೆ ಹೋರಾಟಕ್ಕೆ ದುಮುಕಿದರು.

ರಾಜ್ಯದ ರಾಜದಾನಿ ಬೆಂಗಳೂರಿನ ಸ್ವಾತ್ಯಂತ್ರ ಉದ್ಯಾನವನದಲ್ಲಿ. ಚಳಿ, ಬಿಸಿಲು, ಮೂಲಭೂತ ಅಗತ್ಯತೆಗಳಾದ ಶೌಚಾಲಯ ಮತ್ತು ನೀರಿನ ಕೊರತೆಯ ನಡುವೆಯೂ, ಹಗಲು-ರಾತ್ರಿ ಧರಣಿ ಕುಳಿತ ಹತ್ತಾರು ಸಾವಿರ ಮಹಿಳಾ ನೌಕರರು ಕಡೆಗೂ ಗೆಲುವಿನ ನಗೆ ಬೀರಿ ಊರುಗಳಿಗೆ ತೆರಳಿದ್ದಾರೆ.

ಗ್ರ್ಯಾಚುಟಿ ಹಾಗೂ ಶಿಕ್ಷಕರೆಂದು ಪರಿಗಣಿಸುವಂತೆ ನಡೆಸಿದ ಹೋರಾಟಕ್ಕೆ ಗೆಲುವು ಸಿಕ್ಕಿದೆ. ಸುಪ್ರೀಂ ಕೋರ್ಟಿನ ತೀರ್ಪಿನಂತೆ ಗ್ರ್ಯಾಚುಟಿ ಕಾಯ್ದೆ 1972 ರ ಪ್ರಕಾರ ಉಪಧನ (ಗ್ರ್ಯಾಚುಟಿ) ನೀಡುವ ಕುರಿತು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆಯ ಮೇರೆಗೆ ಹಣಕಾಸು ಇಲಾಖೆ ಒಪ್ಪಿಗೆ ನೀಡಿದೆ.

ಶಾಲಾಪೂರ್ವ ಶಿಕ್ಷಣಕ್ಕಾಗಿ ಬೆಳಿಗ್ಗೆ 10 ರಿಂದ 1 ಗಂಟೆಯ ವರೆಗೆ ನಿರ್ದಿಷ್ಟ ಸಮಯ ಮೀಸಲಿರಿಸಿದ ಸ್ಪಷ್ಟ ಆದೇಶವನ್ನು ಲಿಖಿತವಾಗಿ ನೀಡಿದೆ. ಮಿನಿ ಅಂಗನವಾಡಿ ಹಾಗೂ ಸಹಾಯಕಿಯರ ಪದೋನ್ನತಿಯ ಕುರಿತು ಲೋಪದೋಷಗಳಿರುವ ಆದೇಶ ವಾಪಸ್ ಪಡೆದು, ಮಾರ್ಪಡಿಸಿದ ತಿದ್ದುಪಡಿ ಆದೇಶವನ್ನು ಲಿಖಿತವಾಗಿ ಪಡೆಯಲಾಯಿತು. ಕಟ್ಟಡದ ವೆಚ್ಚ ರೂ.12 ಲಕ್ಷದಿಂದ 20 ಲಕ್ಷಕ್ಕೆ ಏರಿಕೆ ಮಾಡುವುದಾಗಿ ಒಪ್ಪಿಗೆ ನೀಡಿದೆ. ಮಕ್ಕಳಿಗೆ ಶೂ, ಸಮವಸ್ತ್ರ ಹಾಗೂ ಮೂಲಸೌಕರ್ಯ ಹೆಚ್ಚಿಸಲು ಒಪ್ಪಿಗೆ ನೀಡಿದೆ. ಅಂಗನವಾಡಿಗಳಲ್ಲಿ ಶಾಲಾಪೂರ್ವ ಶಿಕ್ಷಣ ಪಡೆದ ದೃಢೀಕರಣ ಪತ್ರ ನೀಡಲು ಸಮ್ಮತಿ ನೀಡಿದ್ದಾರೆ. ಇಲಾಖೆಯ ಅಧಿಕಾರಿಗಳ ಜೊತೆಗೆ ಮಾತುಕತೆಯ ವೇಳೆಯಲ್ಲಿ ಇನ್ನುಳಿದ ಬೇಡಿಕೆಗಳೊಂದಿಗೆ ರಾಜ್ಯದ ಎಲ್ಲಾ ಕಾರ್ಯಕರ್ತೆ ಮತ್ತು ಸಹಾಯಕಿಯರ ಸಂಪೂರ್ಣ ಆರೋಗ್ಯ ತಪಾಸಣೆ ಇತ್ಯಾದಿ ಬೇಡಿಕೆಗಳಿಗೆ ಸಕಾರಾತ್ಮಕ ಸ್ಪಂದನೆ ದೊರಕಿಸಿಕೊಳ್ಳಲು ಸಾಧ್ಯವಾಗಿದೆ.

ಕೊರೆಯುವ ಚಳಿಯಲ್ಲಿಯೇ ಮಹಿಳೆಯರು ನಡೆಸಿದ ಈ ಐತಿಹಾಸಿಕ ಹೋರಾಟ ನಾಡಿನ ಎಲ್ಲರ ಗಮನ ಸೆಳೆದು ಸರ್ಕಾರ ಉತ್ತಮವಾಗಿ ಸ್ಪಂದಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಈ ಮಧ್ಯೆ ಹೋರಾಟಕ್ಕೆ ಸಂಬಂದಿಸಿ ನಾಲ್ಕೈದು ಬಾರಿ ಮುಖಂಡರು ಮತ್ತು ಸರ್ಕಾರದೊಂದಿಗೆ ಮಾತುಕತೆಗಳು ನಡೆದವು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರು ಹೋರಾಟದ ಸ್ಥಳಕ್ಕೆ ಬಂದು ಸಮಸ್ಯೆ ಆಲಿಸಿದರು. ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ನಿರ್ದೇಶಕರು, ಜಂಟಿ ನಿರ್ದೇಶಕರು, ಉಪನಿರ್ದೇಶಕರು ಹಾಗೂ ಇತರ ಹಿರಿಯ ಅಧಿಕಾರಿಗಳ ಜೊತೆಗೆ ನಿರ್ಧಿಷ್ಟ ವಿಷಯಗಳ ಕುರಿತು ಚರ್ಚೆಗಳು ನಡೆದವು. ಆದರೆ ಬೇಡಿಕೆ ಈಡೇರಿಕೆಗೆ ಸ್ಪಷ್ಟತೆ ಬಾರದೇ ಇರುವುದರಿಂದ ಹೋರಾಟವನ್ನು ಮುಂದುವರಿಸುವುದಾಗಿ ಘೋಷಿಸಲಾಗಿತ್ತು.



ಎಷ್ಟು ದಿನ, ಇನ್ನೆಷ್ಟು ದಿನ?

ಈ ರಾತ್ರಿಯಲಿ
ಈ ಚಳಿಯಲ್ಲಿ
ಈ ನೆಲದೆದೆಗೆ
ನಾವು ಬರೆದ ಹಾಡುಗಳನು
ಯಾರೂ ಅಳಿಸಲಾಗದು. ಲೂಟಿಕೋರ ರಾಜ್ಯದಲ್ಲಿ
ಹೆತ್ತವ್ವನನ್ನೇ ಹಸಿವಿನ ಬಾವಿಗೆ ತಳ್ಳಿದ ಕತೆಯ
ಮರೆಯದೆ ಬರೆಯುವೆವು.

ಎಷ್ಟು ದಿನ
ಇನ್ನೆಷ್ಟು ದಿನ
ಈ ನೋವ ಮುಚ್ಚಿಕೊಳ್ಳುವುದು?

ಎಷ್ಟು ದಿನ
ಇನ್ನೆಷ್ಟು ದಿನ
ಈ ದುರುಳರ ಸಹಿಸಿಕೊಳ್ಳುವುದು?
ಸಿಂಹದಂತೆ ಸಿಡಿವ ಹೊತ್ತಿದು
ಅಂಜದೆ ಅಳುಕದೆ
ಮುನ್ನುಗುವ ಗಳಿಗೆಯಿದು
ಹೋರಾಟದಲ್ಲಿ ಸೋಲಿಗೆಂದೂ ಜಾಗವಿಲ್ಲ.

ಎಷ್ಟು ದಿನ
ಇನ್ನೆಷ್ಟು ದಿನ?
ಮಾತುಗಳನು ಮರೆತು ಕೂಡುವುದು?
ಭ್ರಮೆಗಳನೇ ನಿಜವೆಂದು ನಂಬುವುದು?
ಸಂಚುಗಾರ ಮುಕುಟಗಳ
ಗಾಳಿಗೆ ತೂರಿ
ಶ್ರಮಿಕರ ಮುಷ್ಠಿಗೆ ನವ ಶಕ್ತಿಯ ತುಂಬಿ
ನುಗ್ಗಿ ನಡೆಯೋಣ
ಮುಂದು ಮುಂದಕೆ
ಹೋರಾಟ ನಮ್ಮದು
ಗೆಲುವು ನಮ್ಮದು.

–ಕೆ. ನೀಲಾ

ಅಂಗನವಾಡಿಯ ಅವ್ವ ಮತ್ತು ಅನ್ನದಾತರ ಒಡಲ ಕಿಡಿ

ನಾ ನಿಮ್ಮದೇ ಸರದಿಯಲ್ಲಿದ್ದೇನೆ
ಅನ್ನದಾತರೆ
ಚರ್ಮವನೂ ಸೀಳಿ ನುಗ್ಗುವ ಚಳಿಯು ಎಲುಬುಗಳೊಂದಿಗೆ
ಕದನ ಹಿಡಿಯುತ್ತಿದೆ.
ಆದರೂ ನಾ ಸೋಲದೇ
ಬಿಕ್ಕದೆ ಎದೆಯೊಳಗೆ
ಜ್ವಲಿಸುವ ಕೆಂಡಗಳನು ಹುಟ್ಟಿಸುತ ಹೆಜ್ಜೆ ಹೆಜ್ಜೆಗೂ
ಹೋರಾಟಕ್ಕೆ ಕಾವಾಗುತ ಕಿಚ್ಚಾಗುತ ನುಗ್ಗಿ ನಡೆವೆನು ಮುಂದೆ ಮುಂದೆ.

ನಾನು ನೀ ನಡೆದ ಹಾದಿಯ ಪಯಣಿಗಳು.
ಜಗದ ಜನಕೋಟಿಗೆ ಅನ್ನವಿಟ್ಟು
ಬೆನ್ನಿಗಂಟಿದ ಹೊಟ್ಟೆಯನು ಅಂಗೈಯಲಿ ಹಿಡಿದು
ಬಾವುಟದ ಅಂಚಿಗೆ ಒಡಲುರಿಯ ಗೊಂಡೆ ಕಟ್ಟಿ ಬಿರುಪಾದಗಳ ಬರವಣಿಗೆ
ಹಾದಿ ಬೀದಿಗೆ ಬರೆಯುತ ಮುಂದೆ ಮುಂದಕೆ ನೀನು
ಇಗೋ ನಿನ್ನದೇ ನೆರಳಲ್ಲಿ ನಾನು.

ನೀನು ಸಚರಾಚರ ಜೀವಿಗಳ ಹೊಟ್ಟೆ ತುಂಬಿಸಿದೆ
ಭೇದ ಭಾವಗಳ ಹೊಟ್ಟಂತೆ ತೂರುತ.
ಜೀವ ಒತ್ತೆಯಿಟ್ಟು ಜನುಮ ಕೊಟ್ಟ ತಾಯಂತೆ ನೀನು.
ಲೂಟಿಖೋರರು ಹಸಿವಿನ ಉಡುಗೊರೆಯನಿತ್ತರು ನಿನಗೆ.
ಕೆಂಬಾವುಟವನೆತ್ತಿ
ನೀ ನಡೆದೆ ತಲೆಯೆತ್ತಿ
ಧಿಕ್ಕಾರದ ಘೋಷದೊಂದಿಗೆ.

ನಾನೂ ಆ ಮನೆ ಈ ಮನೆಯ
ಗುಡಿಸಲು ತಡಿಕೆಯೊಳಗಿನ ಅಳುವ ಕಂದಗಳ ಬಿಗಿದಪ್ಪಿ
ಕರುಳ ಬಳ್ಳಿಯ ತಂತು ಬೆಸೆದು ತುತ್ತಿಟ್ಟು ಜೋಗುಳ ತೂಗಿದೆ.
ಮನೆಯಂಗಳದ ತಾಯ್ತನವು ಜಗದ ಮಮತೆಯ ಮಾರುತದಂತೆ.
ಕೂಸುಗಳ ಕಿರುಬೆರಳನ್ಹಿಡಿದು ಬದುಕ ಹಾಡು ಕಲಿಸಿದೆ.
ಮಂಡಿ ನೋವಿನಲಿ
ಕುಣಿದು ಕುಪ್ಪಳಿಸಿ
ಹಸಿದ ಹೊಟ್ಟೆಯಲಿ
ಬಿರುಕು ಪಾದದಲಿ
ಹೆಜ್ಜೆ ಹಾಕಿ ಕುಣಿದೆ
ಕೂಸ ಕೆನ್ನೆಗೆ ಮಾಸದ ನಗು ಮುಡಿಸಿದೆ.

ಕದ್ದವರು ಇದ್ದವರು ಗೆದ್ದವರು ಒಂದಾಗಿ ಬೀದಿಗೆಸೆದರು ನನ್ನ.
ಕಿತ್ತುಕೊಂಡರು
ಮಡಿಲ ಮಕ್ಕಳನ್ನ
ಅಳಿಸ ಹೊರಟರು ಭವಿಷ್ಯದಂಗಳ ರಂಗೋಲಿಯನ್ನ.

ಸುಮ್ಮನಿರೆನು ಈಗ
ಬಿಟ್ಟಿ ಚಾಕರಿಗೆ
ಬೆನ್ನು ಬಾಗದು ಈಗ.
ಮೌನ ಬಂಗಾರವಲ್ಲ
ಮಾತು ಮಾತ್ರ ಸಾಕಿಲ್ಲ.
ಹಿಡಿದೆತ್ತಿ ಪತಾಕೆಯ ಮೊಳಗಬೇಕಿದೆ ನೊಂದವರ ದನಿಯು
ಆಳುವವರ ಎದೆ ನಡುಗುವಂತೆ.

ಅನ್ನ ಬೆಳೆದವರು
ತುತ್ತನಿಟ್ಟು ಮಗುವ ಜಗವ ಪೊರೆದವರು
ನಾವಿಬ್ಬರೂ
ಸರತಿ ಸಾಲಿನ ಜೊತೆಗಾರರೆ
ನಾವು ಸಂಗಾತಿಗಳೆ
ಬೆವರ ಲೋಕದ ಬಂಧುಗಳೆ ನಾವು.
ಒಂದಾಗಿ ಬರುವೆವು ಕೆಂಬಾವುಟವನೆತ್ತಿ.
ಮುನ್ನಡೆವೆವು ವಿಷದ ನಾಗರಗಳ ಹಲ್ಲು ಕಿತ್ತಿ.
ನೆಲ ಮುಗಿಲಿಗೂ
ಇನ್ಕ್ವಿಲಾಬ್ ಜಿಂದಾಬಾದ್ ಘೋಷ ಮೊಳಗಿಸುತ.

–ಕೆ. ನೀಲಾ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**